ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 2 ಮಂಗಳವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 47 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಜೂ.4, 'ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಆಧುನಿಕ ಮೈಸೂರು' ಕೃತಿ ಬಿಡುಗಡೆ

ಮೈಸೂರು, ಜೂ.1(ಜಿಎ)–ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಮೈಸೂರು ವಿ.ವಿ ಕುವೆಂಪು ಅಧ್ಯಯನ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣ ದಲ್ಲಿ ಜೂ.4ರಂದು ಬೆಳಿಗ್ಗೆ 11 ಗಂಟೆಗೆ 'ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಆಧುನಿಕ ಮೈಸೂರು' ಕೃತಿ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶ ಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಕೃತಿ ಬಿಡುಗಡೆ ಮಾಡು ವರು. ವಿಮರ್ಶಕರಾದ ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ಕೃತಿ ಕುರಿತು ಮಾತ ನಾಡುವರು. ಅಧ್ಯಕ್ಷತೆಯನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ವಹಿಸುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಬೆಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಸಂಗಮೇಶ ಉಪಾಸೆ, ಕೃತಿಯ ಲೇಖಕ ಪ್ರೊ.ಎಸ್.ಚಂದ್ರ ಶೇಖರ್ ಭಾಗವಹಿಸುವರು ಎಂದರು.

ಈ ಕೃತಿಯಲ್ಲಿ ಸಾಮಾಜಿಕ ನ್ಯಾಯ, ಸೌಹಾರ್ದತೆ ಮತ್ತು ಪ್ರಜೆಗಳ ಹಿತರಕ್ಷಣೆ ಗಳು ನಾಲ್ವಡಿ ಅವರ ಮುಖ್ಯ ಧ್ಯೇಯ ವನ್ನು ನಿರೂಪಿಸಲಾಗಿದೆ. ಮಾರ್ಗದರ್ಶಿ ತ್ವದ ಇತಿಹಾಸ ತಿಳಿಯುವುದು ಎಲ್ಲರ ಕರ್ತವ್ಯ. ಈ ಕಾರಣಕ್ಕಾಗಿಯೇ ಇದೊಂದು ನಮ್ಮ ವಿನೂತನ ಪ್ರಯತ್ನ ವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ನಾಲ್ವಡಿ ಅವರ ವ್ಯಕ್ತಿತ್ವ ಮತ್ತು ಸಾಧನೆಗಳ ಕುರಿತಾಗಿ ಪ್ರಸ್ತುತ ಪ್ರಚಲಿತವಿರುವ ಪ್ರಜಾ ಪ್ರಭುತ್ವದ ಆಡಳಿತಕ್ಕೆ ಮಾರ್ಗದರ್ಶನ ನೀಡುವಂತಿವೆ. ಈ ಪುಸ್ತಕವು ಕನ್ನಡ ಸಾಹಿತ್ಯದ, ಇತಿಹಾಸದ ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತ ಓದುಗರಿಗೆ ಒಂದು ಅತ್ಯುತ್ತಮ ಆಕರವಾಗಲಿದೆ' ಎಂದರು.

ಸುದ್ದಿಗೋಷ್ಠಿಯಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು ಇದ್ದರು.

ಬೀಳ್ಕೊಡುಗೆ...



ಮೈಸೂರಿನ ಕೆಎಸ್ಆರ್‌ಪಿ 5ನೇ ಪಡೆಯಲ್ಲಿ 42 ವರ್ಷ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಆರ್‌ಎಸ್ಐ ಎಸ್.ಕೆ.ಧನಶೇಖರ್ ಅವರಿಗೆ ಬೀಳ್ಕೊಡಲಾಯಿತು. ಈ ವೇಳೆ ಪಡೆಯ ಮುಖ್ಯಸ್ಥ ಕಮಾಂಡೆಂಟ್ ದೊರೆಮಣಿ, ಭೀಮಯ್ಯ, ಎಎಸ್ಐ ಜೈಪಾಲ್, ಲಯನ್ ಕ್ಲಬ್ ಚಾಮುಂಡಿ ಸಂಸ್ಥೆಯ ಅಧ್ಯಕ್ಷ ಲಯನ್ ರವಿಕುಮಾರ್, ಉನ್ನತ ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿಯ ಮಹೇಶ್ ಉಪಸ್ಥಿತರಿದ್ದರು.

ಶಾಸಕ ನರೇಂದ್ರಸ್ವಾಮಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಮೈಸೂರು, ಜೂ.1(ಜಿಎ)–ದಲಿತ ಸಮುದಾಯ ಹಾಗೂ ಹಿಂದು ಳಿದ ವರ್ಗಗಳ ಪ್ರಬಲ ಧ್ವನಿ ಯಾಗಿರುವ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಛಲ ವಾದಿ ಮಹಾಸಭಾ ಜಿಲ್ಲಾಧ್ಯಕ್ಷ ನಾಗಭೂಷಣ್ ಆಗ್ರಹಿಸಿದರು.



ನರೇಂದ್ರಸ್ವಾಮಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಮಂಡ್ಯ ಜಿಲ್ಲೆಯ ಮಳವಳ್ಳಿ ಮೀಸಲು ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಹಿರಿಯ, ಅನುಭವಿ ಹಾಗೂ ಅತ್ಯಂತ ಜನಪ್ರಿಯ ನಾಯಕರಾಗಿದ್ದಾರೆ ಎಂದರು.

ಸತತವಾಗಿ ಶೋಷಿತರ, ದಲಿತರ ಹಾಗೂ ಹಿಂದುಳಿದ ವರ್ಗಗಳ ಪರ ವಾಗಿ ಧ್ವನಿ ಎತ್ತುತ್ತ, ಅವರ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಿಕೊಂಡು ಬಂದಿರುವ ಇವರು ಇಡೀ ಹಿಂದುಳಿದ ಸಮುದಾಯದ ಆಶಾಕಿರಣ ಮತ್ತು ಪ್ರಬಲ ಧ್ವನಿಯಾಗಿದ್ದಾರೆ. ಸ್ವಾತಂತ್ರ್ಯ ಬಂದು ಇಷ್ಟು ದಶಕಗಳು ಕಳೆದರು ನಮ್ಮ ರಾಜ್ಯದಲ್ಲಿ ಒಬ್ಬನೇ ಒಬ್ಬ ದಲಿತ ನಾಯಕ ನಿಗೆ ಮುಖ್ಯಮಂತ್ರಿ ಪಟ್ಟ ಸಿಗದಿರುವುದು, ಇಡೀ ದಲಿತ ಮತ್ತು ಶೋಷಿತ ಸಮು ದಾಯಕ್ಕೆ ಆಗಿರುವ ಅತ್ಯಂತ ದೊಡ್ಡ ನಿರಾಸೆ ಮತ್ತು ತಾರ ತಮ್ಯವಾಗಿದೆ ಎಂದರು.

ಮುಖ್ಯಮಂತ್ರಿ ಹುದ್ದೆಯು ನಮ್ಮ ಸಮುದಾಯಕ್ಕೆ ದಕ್ಕದ ಈ ಪ್ರಸ್ತುತ ರಾಜಕೀಯ ಪರಿಸ್ಥಿತಿ ಯಲ್ಲಿ, ಕನಿಷ್ಠ ಪಕ್ಷ ಇಡೀ ಸಮಾಜವನ್ನು ಪ್ರೀತಿಯಿಂದ ಒಗ್ಗೂಡಿಸಿಕೊಂಡು ಹೋಗುವ ಅದ್ಭುತ ಆಡಳಿತಾತ್ಮಕ ಶಕ್ತಿ ಹೊಂದಿರುವ ಪಿ.ಎಂ.ನರೇಂದ್ರ ಸ್ವಾಮಿಯವರಿಗೆ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಒದ ಗಿಸುವುದು ಸರ್ಕಾರದ ಆದ್ಯ ಕರ್ತವ್ಯ ವಾಗಿದೆ. ಮಂಡ್ಯ ಜಿಲ್ಲೆಯ ಸರ್ವೋ ತೋಮುಖ ಪ್ರಗತಿ ಹಾಗೂ ರಾಜ್ಯದ ದಲಿತ ಹಿಂದುಳಿದ ವರ್ಗಗಳ ಹಿತದೃಷ್ಟಿ ಯಿಂದ ಅವರಿಗೆ ತಕ್ಷಣವೇ ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನ ನೀಡಬೇಕೆಂದು ಛಲವಾದಿ ಮಹಾಸಭಾ ವತಿಯಿಂದ ಸರ್ಕಾರವನ್ನು ಒತ್ತಾಯಿಸುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜೇಂದ್ರ, ಶಿವಣ್ಣ, ತೀರ್ಥ ಪ್ರಸಾದ್, ಕುಮಾರ್ ಉಪಸ್ಥಿತರಿದ್ದರು.

ಮೈಸೂರು–ಮದಾರ್ ಎಕ್ಸ್‌ಪ್ರೆಸ್ ರೈಲು ವಿಸ್ತರಣೆ

ಮೈಸೂರು, ಜೂ.1(ಬಿಎಲ್‌ಯು)–ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ನಿವಾರಿಸಲು ಮೈಸೂರು–ಮದಾರ್ ಜಂಕ್ಷನ್ ಮೈಸೂರು ಎಕ್ಸ್‌ಪ್ರೆಸ್ ವಿಶೇಷ ರೈಲು ಸೇವೆ ಮುಂದು ವರೆಸಲು ರೈಲ್ವೆ ಮಂಡಳಿ ಅನುಮೋದನೆ ನೀಡಿದೆ ಎಂದು ಮೈಸೂರಿನ ವಿಭಾಗೀಯ ರೈಲ್ವೆ ವಾಣಿಜ್ಯ ವ್ಯವಸ್ಥಾಪಕ ಗಿರೀಶ್ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.



ವಿಶೇಷ ರೈಲಿನ ವಿಸ್ತರಣೆಯಲ್ಲಿ ಈಗಿರುವ ಸಮಯ, ನಿಲ್ದಾಣಗಳು, ದರ ವ್ಯವಸ್ಥೆ ಹಾಗೂ ಸಂಯೋಜನೆ ಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಮೈಸೂರು–ಮದಾರ್ ಜಂಕ್ಷನ್ ಎಕ್ಸ್‌ಪ್ರೆಸ್ ವಿಶೇಷ ರೈಲು ಜೂ.6 ಮತ್ತು ಜೂ.13ರಂದು ಎರಡು ಟ್ರಿಪ್‌ಗಳಲ್ಲಿ ಸಂಚರಿಸಲಿದೆ. ಅದೇ ರೀತಿ ಮದಾರ್ ಜಂಕ್ಷನ್–ಮೈಸೂರು ಎಕ್ಸ್‌ಪ್ರೆಸ್ ವಿಶೇಷ ರೈಲು ಜೂ.8 ಮತ್ತು ಜೂ.15ರಂದು ಎರಡು ಟ್ರಿಪ್‌ಗಳಲ್ಲಿ ಸಂಚರಿಸಲಿದೆ ಎಂದು ಗಿರೀಶ್ ಧರ್ಮರಾಜ ಮಾಹಿತಿ ನೀಡಿದ್ದಾರೆ.

ಪರಿಸರ ದಿನಾಚರಣೆ: ಚಿತ್ರಕಲೆ, ಪ್ರಬಂಧ ಸ್ಪರ್ಧೆ

ಮೈಸೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ 2026ನೇ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಬಾರಿಯ Inspired by Nature, For Climate, For our Future, (ಪ್ರಕೃತಿಯಿಂದ ಪ್ರೇರಿತ ಗೊಂಡು, ಉತ್ತಮ ಹವಮಾನಕ್ಕಾಗಿ ಹಾಗೂ ನಮ್ಮ ಭವಿಷ್ಯಕ್ಕಾಗಿ) ಈ ವಿಷಯ ವಾಗಿ ಮೈಸೂರು ಜಿಲ್ಲೆ ಹಾಗೂ ಎಲ್ಲಾ ತಾಲೂಕು ಮಕ್ಕಳಲ್ಲಿ ಅರಿವು ಮೂಡಿಸಲು ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಜೂ.2ರಂದು ಬೆಳಗ್ಗೆ 10:30ರಿಂದ ಮಧ್ಯಾಹ್ನ 12:30ರವರೆಗೆ ಕಲಾಮಂದಿರದ ಆವರಣ, ವಿನೋಬ ರಸ್ತೆ, ಕುಕ್ಕರಹಳ್ಳಿ ಇಲ್ಲಿ ಏರ್ಪ ಡಿಸಲಾಗಿದೆ. ಚಿತ್ರಕಲೆ ಸ್ಪರ್ಧೆಯಲ್ಲಿ 1ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ (ವಿಭಾಗ–1: 1ರಿಂದ 4 ನೇ ತರಗತಿ, ವಿಭಾಗ–2: 5ರಿಂದ 7ನೇ ತರಗತಿ ವಿದ್ಯಾರ್ಥಿ ಗಳಿಗೆ, ವಿಭಾಗ–3: 8ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ), ಪ್ರಬಂಧ ಸ್ಪರ್ಧೆಯಲ್ಲಿ 8ರಿಂದ 10ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಬಹುದು. ಸ್ಪರ್ಧೆಗಳಲ್ಲಿ ವಿಜೇತ ರಾದವರಿಗೆ ಮುಖ್ಯ ಕಾರ್ಯಕ್ರಮ ದಿನ ದಂದು ಬಹುಮಾನ ವಿತರಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ: 7019033602 ಸಂಪರ್ಕಿಸಬಹುದು.

ರಘು ನಿಧನ



ಮೈಸೂರು: ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಸೊಸೈಟಿ ರಘು (70) ಅವರು ಸೋಮವಾರ ನಿಧನರಾದರು. ಇವರು ಮೈಸೂರು ಗೋಕುಲಂನ ಸಾಯಿ ಮಂದಿರದ ಸಂಸ್ಥಾಪಕರಾದ ಪಾಲಹಳ್ಳಿ ರಾಮಕೃಷ್ಣರ ಸಹೋದರರು. ಮೃತರು ಪತ್ನಿ ಅನುಸೂಯ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಬೆಳಿಗ್ಗೆ 11 ಗಂಟೆಗೆ ಇವರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೂ.5ರಿಂದ ಮೈಸೂರಲ್ಲಿ ಟ್ರಾವಲ್ ಮಾರ್ಟ್–2026 ಆರಂಭ

- ಮೂರು ದಿನಗಳ ಸಂವಾದ, ಚರ್ಚೆಗಳು, ಪ್ರಶಸ್ತಿ ಪ್ರದಾನ ಕಾರ್ಯಕ್ರಮ
- 100ಕ್ಕೂ ಹೆಚ್ಚು ಮಳಿಗೆಗಳು, 500ಕ್ಕೂ ಹೆಚ್ಚು ಹೋಸ್ಟೆಡ್ ಬೈಯರ್‌ಗಳು ಭಾಗಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಟ್ರಾವಲ್ ಮಾರ್ಟ್ 2026ರ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜೂ.1(ಜಿಎ)–ಮೈಸೂರಿ ನಲ್ಲಿ ಮೈಸೂರು ಟ್ರಾವಲ್ಸ್ ಅಸೋಸಿ ಯೇಷನ್ ವತಿಯಿಂದ ಕೇಂದ್ರ ಹಾಗೂ ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಮೈಸೂರು ಹೋಟೆಲ್ ಮಾಲೀಕರ ಸಂಘ, ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಪ್ರಾಯೋಜಕತ್ವದಲ್ಲಿ ಜೂ.5ರಿಂದ 7ರವರೆಗೂ ವಿಜಯ ನಗರದ ಜಗನ್ನಾಥ ಸೆಂಟರ್ ಫಾರ್ ಆರ್ಟ್ಸ್ ಅಂಡ್ ಕಲ್ಚರ್‌ನಲ್ಲಿ (ಜೆಸಿಎಸಿ) ಯಲ್ಲಿ ಮೈಸೂರು ಟ್ರಾವಲ್ ಮಾರ್ಟ್ 2026 ಆಯೋಜಿಸಲಾಗಿದೆ ಎಂದು ಮೈಸೂರು ಟ್ರಾವಲ್ ಮಾರ್ಟ್ ಅಧ್ಯಕ್ಷ ಸಿ.ಎ.ಜಯಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು 5ನೇ ಆವೃತ್ತಿಯ ಮೈಸೂರು ಟ್ರಾವಲ್ ಮಾರ್ಟ್ ಆಗಿದ್ದು, ಜೂ.5 ರಂದು ಮಧ್ಯಾಹ್ನ 2.30ಕ್ಕೆ ಕೇಂದ್ರ ಪ್ರವಾ ಸೋದ್ಯಮ ಸಚಿವರಾದ ಗಜೇಂದ್ರ ಸಿಂಗ್ ಶೆಕಾವತ್ ಉದ್ಘಾಟಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ರಾದ ಹೆಚ್.ಕೆ.ಪಾಟೀಲ್, ಡಾ.ಹೆಚ್.ಸಿ. ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಹರೀಶ್‌ಗೌಡ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಜೂನ್ 6ರಂದು ಬೆಳಿಗ್ಗೆ 10.30ಕ್ಕೆ 'ಮಾಧ್ಯಮ ಹಾಗೂ ಪ್ರವಾಸೋದ್ಯಮ', ಕುರಿತು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನ ವ್ಯವಸ್ಥಾಪಕ ಸಂಪಾದಕ ವಿಕ್ರಮ್ ಮುತ್ತಣ್ಣ, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್, ಜಿಎಸ್‌ಎಸ್ ಸಮೂಹದ ಮುಖ್ಯಸ್ಥ ಶ್ರೀ ಹರಿ ಸಂವಾದ ನಡೆಸಲಿದ್ದಾರೆ. ನಂತರ 12 ಗಂಟೆಗೆ 'ಮೈಸೂರು ಏರ್ಪೋರ್ಟ್ ಅಭಿವೃದ್ಧಿ' ಕುರಿತು ಮಾಜಿ ಸಂಸದ ಪ್ರತಾಪ್ ಸಿಂಹ, ಮೈಸೂರು ಏರ್ ಪೋರ್ಟ್ ನಿರ್ದೇಶಕಿ ಅನುಷಾ, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಸಿಐಐ ಅಧ್ಯಕ್ಷ ಉತ್ಸವ್ ಅಗರ್ವಾಲ್ ಚರ್ಚಿಸಲಿದ್ದಾರೆ. 'ಪ್ರವಾಸೋದ್ಯಮ ಹಾಗೂ ಸುಸ್ಥಿರ ಅಭಿವೃದ್ಧಿ' ಕುರಿತು ಗ್ಲೋಬಲ್ ಸುಸ್ಥಿರತೆಯ ಪ್ರವಾಸೋದ್ಯಮ ಸಮಿತಿ ಅಧ್ಯಕ್ಷ ಸಿ.ಬಿ.ರಾಮ್‌ಕುಮಾರ್, ಉದ್ಯಮಿ ಹೆಚ್.ಆರ್.ಜಯರಾವ್ ಮಾತನಾಡಲಿದ್ದಾರೆ. ನಂತರ 'ಮೈಸೂರಿ ನಲ್ಲಿ ಫಿಲಂ ಸಿಟಿ' ಕುರಿತು ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು, ನಟಿ ರೋಶಿಣಿ ಪ್ರಕಾಶ್, ಹಿರಿಯ ನಿರ್ಮಾಪಕ ಸಂದೇಶ್ ನಾಗರಾಜ್ ಚರ್ಚಿಸಲಿದ್ದಾರೆ ಎಂದರು.

ಅದೇ ದಿನ ಸಂಜೆ 5 ಗಂಟೆಗೆ 'ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಟೂರಿಸಂ ಅಂಡ್ ಹಾಸ್ಪಿಟಾಲಿಟಿ ಅವಾರ್ಡ್ ನೈಟ್' ಎಂಬ ಪ್ರಶಸ್ತಿ ಪ್ರದಾನ ಕಾರ್ಯ ಕ್ರಮ ನಡೆಯಲಿದ್ದು, ಮೈಸೂ ರಿನಲ್ಲಿರುವ ಖ್ಯಾತ ಹೋಟೆಲ್‌ಗಳು, ರೆಸಾರ್ಟ್‌ಗಳು, ಪ್ರವಾಸೋದ್ಯಮಿಗಳು, ಪ್ರವಾಸೋದ್ಯ ಮದ ಅಭಿವೃದ್ಧಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ವಾಗಿ ಶ್ರಮಿಸುತ್ತಿರುವವರನ್ನು ಗುರುತಿಸಿ 15 ಮಂದಿಗೆ ಪ್ರಶಸ್ತಿಗಳನ್ನು ನೀಡ ಲಾಗುತ್ತದೆ ಎಂದು ಅವರು ವಿವರಿಸಿದರು.

ಜೂ.7ರಂದು ಸಮಾರೋಪ ಸಮಾ ರಂಭ ನಡೆಯಲಿದೆ. ಇದರೊಂದಿಗೆ ಮೂರು ದಿನಗಳೂ 100ಕ್ಕೂ ಹೆಚ್ಚು ಮಳಿಗೆ ಗಳು ಬೆಳಿಗ್ಗೆ 10ರಿಂದ ಸಂಜೆ 8ರವರೆಗೂ ಕಾರ್ಯನಿರ್ವಹಿಸಲಿವೆ. ಮೈಸೂರು ಮಾತ್ರವಲ್ಲದೆ ಕೊಡಗು, ಜೈಪುರ, ರಾಜ ಸ್ಥಾನ, ಕೇರಳ, ಭುವನೇಶ್ವರ್, ಗುಜರಾತ್, ಜಮ್ಮು–ಕಾಶ್ಮೀರ ಸೇರಿದಂತೆ ವಿವಿಧ ಜಿಲ್ಲೆಗಳು ಹಾಗೂ ಹಲವು ಅಂತಾರಾಷ್ಟ್ರೀಯ ಪ್ರವಾಸೋದ್ಯಮಿಗಳು ಎಕ್ಸಿಬಿಟರ್ಸ್ ಆಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ ದೇಶದಾದ್ಯಂತದಿಂದ 500ಕ್ಕೂ ಹೆಚ್ಚು ಹೋಸ್ಟೆಡ್ ಬೈಯರ್‌ಗಳು ಬರಲಿದ್ದಾರೆ ಎಂದು ಅವರು ತಿಳಿಸಿದರು.

> ಇಡೀ ಕರ್ನಾಟಕವನ್ನು ಹಾಗೂ ಪ್ರಮುಖವಾಗಿ ಮೈಸೂರನ್ನು ಭಾರತದ ಪ್ರವಾಸೋದ್ಯಮ ನಕ್ಷೆಯಲ್ಲಿ ಇನ್ನೂ ಹೆಚ್ಚು ಪ್ರಾಮುಖ್ಯತೆ ಯಿಂದ ಕೂಡಿದ ನಗರವನ್ನಾಗಿ ಮಾಡುವ ಪ್ರಯತ್ನ ಇದು. ಮೂರೂ ದಿನಗಳಿಂದ 1 ಸಾವಿರ ಜನರು ಬರುವ ನಿರೀಕ್ಷೆ ಇದೆ. ಎಲ್ಲರಿಗೂ ಕಾರ್ಯಕ್ರಮಕ್ಕೆ ಮುಕ್ತ ಅವ ಕಾಶವಿರುತ್ತದೆ. –ಸಿ.ಎ.ಜಯಕುಮಾರ್

ಸುದ್ದಿಗೋಷ್ಠಿಯಲ್ಲಿ ಮೈಸೂರು ಟ್ರಾವಲ್ಸ್ ಅಸೋಸಿಯೇಶನ್ ಅಧ್ಯಕ್ಷ ಬಿ.ಎಸ್. ಪ್ರಶಾಂತ್, ಮೈಸೂರು ಟ್ರಾವಲ್ ಮಾರ್ಟ್ ಉಪಾಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಟ್ರಾವಲ್ ಮಾರ್ಟ್ ಕಾರ್ಯ ದರ್ಶಿ ಸಮರ್ಥ್ ಜಿ. ವೈದ್ಯ, ಮೈಸೂರು ಟ್ರಾವಲ್ಸ್ ಅಸೋಸಿಯೇಷನ್ ಉಪಾಧ್ಯಕ್ಷ ಡೇವಿಡ್‌ರಾಜ್, ಕಾರ್ಯದರ್ಶಿ ಮಂಜುನಾಥ್, ಮೈಸೂರು ಹೋಟೆಲ್ ಮಾಲೀಕರ ಧರ್ಮದತ್ತಿಯ ಅಧ್ಯಕ್ಷ ರವಿಶಾಸ್ತ್ರಿ ಇನ್ನಿತರರು ಉಪಸ್ಥಿತರಿದ್ದರು.

ಗರ್ಭಸಂಸ್ಕಾರ ಮಹಾವಿದ್ಯಾಲಯದ ಪ್ರಥಮ ವಾರ್ಷಿಕೋತ್ಸವ; ಪದವೀಧರರ ದಿನಾಚರಣೆ

ಮೈಸೂರು, ಜೂ.1(ಜಿಎ)– ಗರ್ಭ ಸಂಸ್ಕಾರ ಮಹಾ ವಿದ್ಯಾಲಯದ ಪ್ರಥಮ ವಾರ್ಷಿಕೋತ್ಸವ ಹಾಗೂ ಪದವೀಧರರ ದಿನಾಚರಣೆಯನ್ನು ಮೈಸೂರು ಜಿಲ್ಲಾ ಪ್ರಕರ್ತರ ಭವನದಲ್ಲಿ ನಡೆಸಲಾಯಿತು.

ಈ ವೇಳೆ ವಿದ್ಯಾಲಯದ ಸಂಸ್ಥಾಪಕಿ ಡಾ.ಎಸ್.ಕಾವ್ಯ ಮಾತನಾಡಿ, ಶ್ರೀಗರ್ಭ ಗರ್ಭಸಂಸ್ಕಾರವು ಸನಾತನ ಪರಂಪರೆ ಯಿಂದ ಬಂದ ಅಮೂಲ್ಯ ಸಂಸ್ಕಾರ ವಾಗಿದ್ದು, ಮುಂದಿನ ಪೀಳಿಗೆಯ ಆರೋಗ್ಯಕರ ಹಾಗೂ ಸಂಸ್ಕಾರಯುತ ಬೆಳವಣಿಗೆಗೆ ಇದು ಅತ್ಯಂತ ಅನಿ ವಾರ್ಯವೆಂದು ತಿಳಿಸಿದರು.

ಗರ್ಭ ಸಂಸ್ಕಾರದ ಮಹತ್ವವನ್ನು ವೈಜ್ಞಾನಿಕ ಹಾಗೂ ಸಂಸ್ಕಾರಯುತ ದೃಷ್ಟಿ ಕೋನ ವಿವರಿಸಿ, ಗರ್ಭಾವಸ್ಥೆಯಲ್ಲಿಯೇ ಮಗುವಿನ ಸಮಗ್ರ ಬೆಳವಣಿಗೆಗೆ ಸೂಕ್ತ ಮಾರ್ಗದರ್ಶನ ಅಗತ್ಯವೆಂದು ತಿಳಿಸಿ, ಜೂನ್ 8ರಂದು ನೂತನ ಶ್ರೀ ಗರ್ಭ ಗರ್ಭಸಂಸ್ಕಾರ ಕಾರ್ಯಾಗಾರ ಆರಂಭ ವಾಗಲಿದ್ದು, ಆಸಕ್ತರು ಹೆಚ್ಚಿನ ಮಾಹಿತಿ ಗಾಗಿ 8310634618 ಅನ್ನು ಸಂಪರ್ಕಿಸಿ



ಗರ್ಭಸಂಸ್ಕಾರ ಮಹಾವಿದ್ಯಾಲಯದ ಪ್ರಥಮ ವಾರ್ಷಿಕೋತ್ಸವ ಹಾಗೂ ಪದವೀಧರರ ದಿನಾಚರಣೆಯನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆಸಲಾಯಿತು.

ಇದರ ಪ್ರಯೋಜನವನ್ನು ಪಡೆದುಕೊಳ್ಳ ಬಹುದಾಗಿದೆ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೆ.ಆರ್. ವೆಂಕಟಾ ಚಲಶೆಟ್ಟಿ, ಸಹನಶ್ರೀ ವಿ.ಶಿವರತ್ನ, ಶ್ರೀಲಕ್ಷ್ಮಿ, ಸ್ವಪ್ನ ಎಂ.ಡಿ, ರೂಪಾ ಕುಮಟಗಿ, ಡಿ.ಸ್ಪಂದನಾ, ಎಸ್.ಚಂದನ ಅವರಿಗೆ ಗ್ರಾಜ್ಯುಯೇಷನ್ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಈ ವೇಳೆ ಜಿಲ್ಲಾ ಆಯುಷ್ ಅಧಿಕಾರಿ ಡಾ ಲಕ್ಷ್ಮೀ ನಾರಾ ಯಣ್, ಶಿವಪ್ರಕಾಶ್ ಗುರೂಜಿ, ಮೈಸೂರು ಯೋಗ ಒಕ್ಕೂಟ ಅಧ್ಯಕ್ಷ ಕೆ.ಜಿ.ದೇವರಾಜು, ಆಧ್ಯಾತ್ಮಿಕ ಚಿಂತಕ ರಾದ ಮುಕುಂದನ್ ಗುರೂಜಿ ಸೇರಿ ದಂತೆ ಇನ್ನಿತರರು ಉಪಸ್ಥಿತರಿದ್ದರು.

ಸತೀಶ್ ಜಾರಕಿಹೊಳಿ ಡಿಸಿಎಂ ಮಾಡಿ; ಕೆಪಿಸಿಸಿ ಅಧ್ಯಕ್ಷಗಾದಿ ಕೊಡಿ

ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟ ಆಗ್ರಹ

ಮೈಸೂರು, ಜೂ.1(ಜಿಎ)–ಅಹಿಂದ ವರ್ಗಗಳ ನಾಯಕ ಹಾಗೂ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಸ್ಥಾನ ನೀಡ ಬೇಕು ಎಂದು ವಾಲ್ಮೀಕಿ ನಾಯಕ ಸಂಘಗಳ ಒಕ್ಕೂ ಟದ ಅಧ್ಯಕ್ಷ ದ್ಯಾವಪ್ಪ ನಾಯಕ ಒತ್ತಾಯಿಸಿದರು.



ಸತೀಶ್ ಜಾರಕಿಹೊಳಿ

ಮೈಸೂರು ಜಿಲ್ಲಾ ಪತ್ರ ಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸತೀಶ್ ಜಾರಕಿಹೊಳಿ ಅವರು ಅಹಿಂದ ಮತ್ತು ಶೋಷಿತ ಸಮುದಾಯಗಳ ಪರವಾಗಿ ಸುಮಾರು 30 ವರ್ಷಗಳಿಂದ ನಿರಂತರವಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗದೆ, ಸಾಮಾಜಿಕವಾಗಿಯೂ ತಮ್ಮ ಸ್ವಂತ ಹಣದಿಂದ ಹಲವಾರು ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಿ ವಿವಿಧ ರೀತಿಯ ತರಬೇತಿಗಳನ್ನು ನೀಡುವ ಮೂಲಕ ಹಲವಾರು ಯುವಕರಿಗೆ ಉದ್ಯೋಗ ದೊರಕಿಸಿ ಕೊಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಹಾಗೂ ರಾಜ್ಯದಲ್ಲಿ ನಿರಂತರವಾಗಿ ಬುದ್ಧ, ಬಸವ, ಅಂಬೇಡ್ಕರ್ ಅನುಯಾಯಿ ಯಾಗಿ ಕೆಲಸ ನಿರ್ವಹಿಸಿ ಕೊಂಡು ಬರುತ್ತಿದ್ದು, ರಾಜ್ಯದ ಅಹಿಂದ ವರ್ಗದ ಏಕೈಕ ನಾಯಕರಾಗಿದ್ದಾರೆ ಎಂದು ಹೇಳಿದರು. ಬಾಗಲಕೋಟೆ ಹಾಗೂ ಶಿಗ್ಗಾವಿ ಉಪ ಚುನಾ ವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗಳ ಗೆಲುವಿಗೆ ಶ್ರಮವಹಿಸಿದ್ದಾರೆ. ಹೀಗೆ ನಿರಂತರವಾಗಿ ಶೋಷಿತ ಸಮುದಾಯ ಗಳ ಪರವಾಗಿ ಕಾರ್ಯನಿರ್ವಹಿಸುತ್ತಿರುವ ಸತೀಶ್ ಜಾರಕಿಹೊಳಿರವರಿಗೆ ಕೆಪಿಸಿಸಿ ಅಧ್ಯಕ್ಷರೂ ಹಾಗೂ ಡಿಸಿಎಂ ಸ್ಥಾನ ನೀಡಿದರೇ, ಸಮುದಾಯ ಹಾಗೂ ಪಕ್ಷ ಸಂಘಟನೆಗೂ ಸಹಕಾರಿಯಾಗುತ್ತದೆ ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ತಿಪ್ಪೂರು ಮಹದೇವ್, ವೆಂಕಟೇಶ್ ನಾಯಕ್, ಪುಟ್ಟರಾಜು, ನರಸಿಂಹನಾಯಕ, ಮುತ್ತು ರಾಜ್, ಶಿವಣ್ಣ ಹೊಸರಾಮೇನಹಳ್ಳಿ, ಸುರೇಶ್ ಕುಮಾರಬೀಡು ಇದ್ದರು.

ಸಾಹಿತ್ಯ ಪರಂಪರೆಯಲ್ಲಿ ಸಂತ ಕಬೀರರು ಯುಗಪುರುಷರಂತೆ

ನಿವೃತ್ತ ಪ್ರಾಧ್ಯಾಪಕ ಪ್ರೊ.ಜಿ.ಚಂದ್ರಶೇಖರ್ ಅಭಿಪ್ರಾಯ

ಮೈಸೂರು, ಜೂ.1(ಎಸ್‌ಪಿಎನ್)– ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಸಂತ ಕಬೀರರ ವ್ಯಕ್ತಿತ್ವ ಎತ್ತರದ ಸ್ಥಾನ ದಲ್ಲಿದೆ. ಅವರ ಸಾಹಿತ್ಯ ಕಾಲಾತೀತ, ಜ್ಞಾತಾತೀತವಾಗಿವೆ. ಹಾಗಾಗಿ ಅವರನ್ನು ಯುಗಪುರುಷ ಎಂದರೆ ತಪ್ಪಾಗಲಾರದು ಎಂದು ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಹಾಗೂ ನಿವೃತ್ತ ಪ್ರಾಧ್ಯಾಪಕ ಪ್ರೊಜಿ. ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರ ವೃತ್ತದ ನೆಲಮಹಡಿಯಲ್ಲಿ ಶ್ರೀ ರಾಮಕೃಷ್ಣ ಪರಮ ಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ತಿಂಗಳ ತಿಳಿವು ಸಂಚಿಕೆ–28ರ ಪ್ರಯುಕ್ತ 'ಕಬೀರರ ಸಾಹಿತ್ಯವನ್ನು ಒಳಗೊಂಡಂತೆ ಹಿಂದಿ ಸಾಹಿತ್ಯ– ಒಂದು ಅವಲೋಕನ' ವಿಷಯ ಕುರಿತು ಮಾತನಾಡಿದರು.



'ಕಬೀರರ ಸಾಹಿತ್ಯ ವನ್ನು ಒಳಗೊಂ ಡಂತೆ ಹಿಂದಿ ಸಾಹಿತ್ಯ–ಒಂದು ಅವಲೋಕನ' ವಿಷಯ ಕುರಿತು ನಿವೃತ್ತ ಪ್ರಾಧ್ಯಾಪಕ ಪ್ರೊಜಿ.ಚಂದ್ರಶೇಖರ್ ಮಾತನಾಡಿದರು.

ಯಾವ ಮನುಷ್ಯ ಅರಿಷಡ್ವರ್ಗ ನಿಗ್ರ ಹಿಸುತ್ತಾನೋ ಅಂತಹ ವ್ಯಕ್ತಿ ಜಾತಿ, ಮತ–ಪಂಥಗಳನ್ನು ಮೀರಿ ಬೆಳೆಯು ತ್ತಾನೆ ಹಾಗೂ ದೇವರಿಗೆ ಹತ್ತಿರವಾಗು ತ್ತಾನೆ. ಬಾಹ್ಯ ಶಕ್ತಿಗಿಂತ ಆಂತರಿಕ ಭಕ್ತಿ ದೊಡ್ಡದು. ಸಂತ ಕಬೀರರು ನಾನಿರು ವಾಗ ನೀನಿಲ್ಲ, ನೀನಿರುವಾಗ ನಾನಿಲ್ಲ ಎಂಬ 'ದೋಹ' ಅವರ ಅಹಂಕಾರ ರಹಿತ ಬದುಕನ್ನು ತೋರುತ್ತದೆ ಎಂದರು.

ಕಬೀರರ ಸಾಹಿತ್ಯವು ಹೆಚ್ಚಾಗಿ ಮೌಖಿಕ ರೂಪದಲ್ಲಿವೆ. ಅವರ ಪ್ರಮುಖ ಕವಿತೆ ಗಳನ್ನು 'ದೋಹೆಗಳು(ಸಾಖಿ) ಎಂದು ಕರೆಯಲಾಗುತ್ತದೆ. ಸಂತ ಕಬೀರರು ಸಂಸ್ಕೃತದಂತಹ ಕ್ಲಿಷ್ಟಕರ ಭಾಷೆಗಿಂತ, ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಹಿಂದಿ, ಅವಧಿ ಮತ್ತು ಭೋಜಪುರಿ ಮಿಶ್ರಿತ 'ಸಧುಕ್ಕಡಿ' ಭಾಷೆಯನ್ನು ಬಳಸಿ ರುವುದು ವಿಶೇಷ ಎಂದರು.

ಕಾರ್ಯಕ್ರಮದ ಬಳಿಕ ಗಾಯಕ ಗೋಪಿ ನಾಥ್ ಮತ್ತು ತಂಡದವರಿಂದ ಭಜನೆ ಮತ್ತು ವಚನವೇದ ಪಠಣ, ಸುಪ್ರಭಾತ ಗಾಯನ ನಡೆಸಿಕೊಟ್ಟರು. ವಿದುಷಿ ಭಾಸ್ಕರ ಮೂರ್ತಿ ತಂಡದವರಿಂದ ಭಕ್ತಿಗೀತೆಗಳ ಗಾಯನ ನೆರವೇರಿತು. ವೇದಿಕೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿ ಷ್ಠಾನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ, ಉಪಾಧ್ಯಕ್ಷ ಬಸವಣ್ಣ, ಕಾರ್ಯ ದರ್ಶಿ ಕೆ.ಕೆಂಪಲಿಂಗರಾಜು, ಖಜಾಂಚಿ ಬೋಗೇಗೌಡ, ಶಿವಣ್ಣ ಉಪಸ್ಥಿತರಿದ್ದರು.

> ಕಬೀರರ ಚಿಂತನೆ ಮತ್ತು ಸಾಹಿತ್ಯದಲ್ಲಿ ಸೂಫಿಪಂಥ ಮತ್ತು ವೇದಾಂತಧರ್ಮದ ಸಾಮರಸ್ಯವನ್ನು ಕಾಣಬಹುದು. ಈತನ ಆರಾಧ್ಯ ದೈವ ನಿರ್ಗುಣಬ್ರಹ್ಮನೇ ಸಗುಣೇಶ್ವರನೆ ಎಂಬುದು ತಕರಾರಿನ ವಿಷಯವಾಗಿದೆ. ಇನ್ನು ಕೆಲ ವಿದ್ವಾಂಸರು ಈತ ನಿರ್ಗುಣ ಪಂಥಕ್ಕೆ ಸೇರಿದವನೆಂದು, ಇನ್ನು ಕೆಲ ವಿದ್ವಾಂಸರು ಇಷ್ಟದ ದೈವ ರಾಮನಾಗಿದ್ದನೆಂದು ಅಭಿಪ್ರಾಯಪಟ್ಟಿದ್ದಾರಲ್ಲದೆ, ಜಗತ್ತಿಗೆಲ್ಲ ದೇವರು ಒಬ್ಬನೇ ಅವನನ್ನೇ ಆರಾಧನೆ ಮಾಡಬೇಕು. ಅವರ ಪೂಜೆ ವಿಗ್ರಹದ ಮೂಲಕ ಅಲ್ಲ. ಆಧ್ಯಾತ್ಮದ ಮೂಲಕ ಭಗವಂತನನ್ನು ಒಲಿಸಿಕೊಳ್ಳಬೇಕು ಎಂದು ಕಬೀರರು ತಮ್ಮ ಸಾಹಿತ್ಯದಲ್ಲಿ ಉಲ್ಲೇಖಿಸಿದ್ದಾರೆ. –ಪ್ರೊ.ಚಂದ್ರಶೇಖರ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.06.2026 ಮಂಗಳವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಶ್ರೀ ಸೂತ್ರ ಆಯುರ್ಧಾಮ**: ಮೊಣಕಾಲು ನೋವಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ ಆಸ್ಪತ್ರೆ, ಜೆಎಲ್‌ಬಿ ರಸ್ತೆ, ಬೆಳಗ್ಗೆಯಿಂದ.
- **ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ** : ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಚಿತ್ರಕಲಾ ಮತ್ತು ಪ್ರಬಂಧ ಸ್ಪರ್ಧೆ. ಸ್ಥಳ: ಕಲಾಮಂದಿರ ಆವರಣ, ಬೆಳಗ್ಗೆ 10.30ರಿಂದ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ, ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯ ಸಂತುಷ್ಟ ತೀರ್ಥರ ಸನ್ನಿಧಾನ:** ಅಧಿಕ ಮಾಸೋತ್ಸವ, ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮ, ವಿದುಷಿ ಶ್ರೀಮತಿ ಭಾವನಾ ಮತ್ತು ವಿದುಷಿ ಶ್ರೀಮತಿ ಭೂಮಿಕಾ ಅವರಿಂದ ಭರತನಾಟ್ಯ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.30 ಚಿಂತನ, 6.35 ಮತ್ತುಸಂಜೆ 6.10 ಸಾಧಕರ ಸೋಪಾನ– ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40–ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ. ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥ ಡಾ.ಎನ್.ಕೃಷ್ಣಪ್ಪ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಲಕ್ಷ್ಮೀನಾರಾಯಣ ಎಸ್., ನಿರ್ಮಾಣ: ಎನ್.ಕೇಶವಮೂರ್ತಿ, 8.30–ಯೋಗದ ಜಗತ್ತು, 8.45 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕುನ್ನಕ್ಕುಡಿ ವೈದ್ಯನಾಥನ್, ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಹೊಂಗಿರಣ' ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಬಿ.ಜಿ.ಕವಿತಾ ಹಾಗೂ ಎಸ್.ಲಕ್ಷ್ಮೀನಾರಾಯಣ, 12.05 ವನಿತಾ ವಿಹಾರ ಲೇಖಕಿ, ಅನುವಾದಕಿ, ಪ್ರೊ.ಸುಕನ್ಯಾ ಕನಾರವಳ್ಳಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್ ಬಿ., **ಮಧ್ಯಾಹ್ನ** 12.35 ದೇವರನಾಮ, ವೈಷ್ಣವಿದತ್ತ, 12.45–ಕನ್ನಡದಲ್ಲಿ ಭಾಷಣ, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ. 1.20–ಭಾವಗೀತೆಗಳು, ಶಿವಮೊಗ್ಗ ಸುಬ್ಬಣ್ಣ, 2.40–ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಮಿಥುನ್ ರಾಧಾಕೃಷ್ಣ–ಮ್ಯಾಂಡೋಲಿನ್ ವಾದನ, 3.30–ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ, ಉಮಂಗ್, 4.00 ಕಥಾಕಾಲಕ್ಷೇಪ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಆಹಾರಧಾನ್ಯ ಹಾಗೂ ಪರಿಸರ ಸಂರಕ್ಷಣೆ ಈ ಕುರಿತು ಮೈಸೂರಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ನಿವೃತ್ತ ಪ್ರಾದೇಶಿಕ ವ್ಯವಸ್ಥಾಪಕ ಎಚ್.ಎಸ್.ಲಕ್ಷ್ಮೀಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್– ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ–ದಿಗ್ವಿಜಯ್ ಬಿ., 8.00 ನಾಟಕ–ವಿಧಿ ವಿಲಾಸ, ರಚನೆ–ಎಂ.ಶಿವಕುಮಾರ್, ನಿರ್ದೇಶನ–ರಘುಹೆಗ್ಡೆ, 8.30–ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಿ.ಕೆ.ಜಯರಾಮನ್–ಹಾಡುಗಾರಿಕೆ, 10.00–ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜೂನ್ 2 ಮಂಗಳವಾರ 2026
47
ಸಂಪುಟ: 47 | ಸಂಚಿಕೆ: 47 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ- ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕುಮಾರ ಕೃಪಾ ಮುಖ್ಯಮಂತ್ರಿ ನಿವಾಸ




ಬೆಂಗಳೂರು, ಜೂ.1 (ಕೆಎಂಸಿ)- ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ತಮ್ಮ ಅಧಿಕೃತ ನಿವಾಸವನ್ನಾಗಿ ಕುಮಾರಕೃಪಾ ಅತಿಥಿಗೃಹವನ್ನು ಬಳಸಿಕೊಳ್ಳಲು ತೀರ್ಮಾನಿಸಿದ್ದಾರೆ.

ಕುಮಾರ ಕೃಪಾ ಅತಿಥಿಗೃಹದ ಹಳೆಯ ಕಟ್ಟಡ ಪ್ರದೇಶ ಸಾಕಷ್ಟು ವಿಶಾಲವಾಗಿದೆ. ಸಾರ್ವಜನಿಕರ ಭೇಟಿ, ಅಧಿಕಾರಿಗಳೊಂದಿಗೆ ಸಭೆ, ವಾಹನ ನಿಲುಗಡೆ ಸೇರಿದಂತೆ ಹಲವು ಅನುಕೂಲಕರ ಅಂಶಗಳನ್ನು ಈ ಕಟ್ಟಡ ಹೊಂದಿದೆ. ಹೀಗಾಗಿ ಇದನ್ನು ತಮ್ಮ ಅಧಿಕೃತ ನಿವಾಸವಾಗಿ ಮಾರ್ಪಡಿಸಿ ಕೊಳ್ಳಲು ತೀರ್ಮಾನಿಸಿದ್ದಾರೆ.

ಕುಮಾರಕೃಪಾ ಅತಿಥಿಗೃಹದ ಹಳೆಯ ಕಟ್ಟಡದಲ್ಲಿ ಇದೀಗ ಮುಖ್ಯಮಂತ್ರಿ ನಿವಾಸಕ್ಕೆ ಬೇಕಾಗಿರುವ ಮೂಲಸೌಕರ್ಯವನ್ನು ಸೃಷ್ಟಿಸಲು ತೀರ್ಮಾನಿಸಲಾಗಿದೆ. 6ನೇ ಪುಟಕ್ಕೆ

ಕೇರಳ ಮಾದರಿ ಪೂರ್ಣ ಪ್ರಮಾಣದಲ್ಲಿ ಮಂತ್ರಿ ಮಂಡಲ ರಚಿಸಿ

- ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್‌ಗೆ ಕಾಂಗ್ರೆಸ್ ಅಧಿನಾಯಕ ರಾಹುಲ್‌ಗಾಂಧಿ ಸಲಹೆ
- ಭಿನ್ನಮತಕ್ಕೆ ಬ್ರೇಕ್ ಹಾಕುವ ಮಾರ್ಗಸೂಚನೆ; 34 ಸದಸ್ಯರ ಒಮ್ಮೆಲೆ ನೇಮಕ ಸಾಧ್ಯತೆ
- ಪ್ರತ್ಯೇಕ ಪಟ್ಟಿಯೊಂದಿಗೆ ದೆಹಲಿಯ ಬಿಡಾರ ಹೂಡಿರುವ ಹಂಗಾಮಿ- ನಿಯೋಜಿತ ಸಿಎಂಗಳು
- ರಾಜ್ಯಸಭೆಯ 3, ಪರಿಷತ್‌ಗೆ ಐವರು ಅಭ್ಯರ್ಥಿಗಳ ಆಯ್ಕೆಯೂ ಅಂತಿಮ ಸಾಧ್ಯತೆ




ಬೆಂಗಳೂರು, ಜೂ.1 (ಕೆಎಂಸಿ)- ಕೇರಳ ಸರ್ಕಾರದ ರಚನೆ ಮಾದರಿಯಲ್ಲೇ ನೀವು ಮಂತ್ರಿಮಂಡಲ ಪೂರ್ಣ ಪ್ರಮಾಣದಲ್ಲಿ ರಚನೆ ಮಾಡಿ ಎಂದು ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಾಂಗ್ರೆಸ್ ಅಧಿನಾಯಕ ರಾಹುಲ್‌ಗಾಂಧಿ ಕಟ್ಟಾದೇಶ ಮಾಡಿದ್ದಾರೆ.

ಯಾವುದೇ ಆಡಂಬರ ವಿಲ್ಲದೆ ಸಂವಿಧಾನಬದ್ಧವಾಗಿ ನೀವು ಸೇರಿದಂತೆ ಸಂಪುಟದ 34 ಸದಸ್ಯರು ಸಾಮೂಹಿಕ ಪ್ರಮಾಣ ವಚನ ಸ್ವೀಕರಿಸಿ, ಉತ್ತಮ ಆಡಳಿತ ನೀಡಿ ಎಂದಿದ್ದಾರೆ.

ಎರಡು ಮೂರು ಹಂತಗಳಲ್ಲಿ ಸಂಪುಟ ವಿಸ್ತರಣೆ ಮಾಡುವುದರಿಂದ ಬಂಡಾಯ ಮತ್ತು ಪಕ್ಷಕ್ಕೆ ಹಿನ್ನಡೆಯಾಗುತ್ತದೆ. ಕೇರಳದಲ್ಲಿ ಸತೀಶನ್‌ರವರು ಅಧಿಕಾರ ಸ್ವೀಕರಿಸುವ ಸಂದರ್ಭದಲ್ಲೇ ಪೂರ್ಣ ಸಂಪುಟ ರಚಿಸಿದ್ದಾರೆ. ಅದನ್ನೇ ಮಾದರಿಯಾಗಿಟ್ಟುಕೊಳ್ಳಿ, ಮಂತ್ರಿ ಮಂಡಲದಲ್ಲಿ ಅವಕಾಶ ಸಿಗದ ಪ್ರಮುಖ ಹಿರಿಯ ಶಾಸಕರಿಗೆ ಯಾವ ನಿಗಮ ಮಂಡಳಿಗಳಿಗೆ ನೇಮಕ ಮಾಡಬೇಕೆಂಬ ತೀರ್ಮಾನವೂ ಏಕಕಾಲದಲ್ಲಿ ಆಗಲಿ ಎಂದು ಶಿವಕುಮಾರ್ ಅಷ್ಟೇ ಅಲ್ಲದೇ ಹಂಗಾಮಿ ಸಿಎಂ ಸಿದ್ದರಾಮಯ್ಯ ನವರಿಗೂ ಸೂಚಿಸಿದ್ದಾರೆ. 6ನೇ ಪುಟಕ್ಕೆ

ಡಿ.ಕೆ. ಶಿವಕುಮಾರ್‌ರೊಂದಿಗೆ ಎಂಟತ್ತು ಸಚಿವರ ಶಪಥ

ಬೆಂಗಳೂರು, ಜೂ.1- ರಾಜ್ಯವು 24 ತಿಂಗಳಲ್ಲಿ ವಿಧಾನಸಭಾ ಚುನಾವಣೆಯನ್ನು ಎದುರಿಸಲಿರುವುದರಿಂದ ಹೊಸ ಸಂಪುಟಕ್ಕೆ ಸಚಿವರ ಆಯ್ಕೆ ವೇಳೆ ನಾವು ಜಾಗರೂಕರಾಗಿರಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.



ಬುಧವಾರ ಡಿಕೆ ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ವೇಳೆ ಎಷ್ಟು ಶಾಸಕರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗುತ್ತದೆ ಮತ್ತು ಎಷ್ಟು ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸಲಾಗುತ್ತದೆ ಎಂಬುದನ್ನು ನಿರ್ಧರಿಸಲಾಗಿಲ್ಲ. ಸಂಪುಟ ರಚನೆಯಾದ ನಂತರ ಅಸಮಾಧಾನಕ್ಕೆ ಅವಕಾಶವಿರಬಾರದು ಎಂದು ಅವರು ಹೇಳಿದರು. ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸುವಾಗ ನಾವು ಹಲವು ವಿಷಯಗಳ ಬಗ್ಗೆ ಯೋಚಿಸಬೇಕು.

ಕಾಂಗ್ರೆಸ್ ಹೈಕಮಾಂಡ್ ಎಲ್ಲಾ ಸಂಗತಿಗಳನ್ನು ಪರಿಗಣಿಸುತ್ತಿದೆ, ಬುಧವಾರ ಬೆಳಿಗ್ಗೆಯೊಳಗೆ ಎಲ್ಲವೂ ತಿಳಿಯುತ್ತದೆ. ಮೊದಲ ಹಂತದಲ್ಲಿ, ಶಿವಕುಮಾರ್ ಅವರೊಂದಿಗೆ 8-10 ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಬಹುದು ಮತ್ತು ಉಳಿದ ಹುದ್ದೆಗಳನ್ನು ವಾರ ಹದಿನೈದು ದಿನ, ಇಲ್ಲವೇ ತಿಂಗಳೊಳಗೆ ಭರ್ತಿ ಮಾಡಲಾಗುವುದು ಎಂದು ಖರ್ಗೆ ಹೇಳಿದರು.

ಸುರಕ್ಷಿತ ಮಾರ್ಗದಲ್ಲಿ ತವರಿಗೆ ತೆರಳಿದ ಸ್ಟಾಲಿನ್ ಕುಟುಂಬ!



ಸ್ಟಾಲಿನ್ ಕುಟುಂಬದ ವಿರುದ್ಧ ಪ್ರತಿಭಟನೆ ಎಚ್ಚರಿಕೆ ಹಿನ್ನೆಲೆಯಲ್ಲಿ ಕುಶಾಲನಗರದಲ್ಲಿ ಭಾರೀ ಪೊಲೀಸ್ ಬಂದೋಬಸ್ತ್ ಮಾಡಿ ಎಚ್ಚರಿಕೆ ವಹಿಸಲಾಗಿತ್ತು.

ಮಡಿಕೇರಿ, ಜೂ.1- ಕೊಡಗಿನಲ್ಲಿ ಬೀಡು ಬಿಟ್ಟಿದ್ದ ತಮಿಳುನಾಡು ಮಾಜಿ ಮುಖ್ಯಮಂತ್ರಿ ಹಾಗೂ ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಅವರನ್ನು ಸುರಕ್ಷಿತ ಮಾರ್ಗದಲ್ಲಿ ತಮಿಳುನಾಡಿಗೆ ಸ್ಥಳೀಯ ಪೊಲೀಸರು ಸಾಗ ಹಾಕಿದ್ದಾರೆ. ಆ ಮೂಲಕ ಪ್ರತಿಭಟನೆ ಕಾವಿನಿಂದ ಪಾರಾಗಿದ್ದಾರೆ.

ಸನಾತನ ಧರ್ಮದ ಬಗ್ಗೆ ಸ್ಟಾಲಿನ್ ಹಾಗೂ ಅವರ ಪುತ್ರ ಉದಯನಿಧಿ ಹೇಳಿಕೆಯನ್ನು ಖಂಡಿಸಿ ಹಿಂದೂ ಪರ ಕಾರ್ಯಕರ್ತರು ಪ್ರತಿಭಟನೆಗೆ ಕರೆ ನೀಡಿದ ಹಿನ್ನಲೆಯಲ್ಲಿ ಕುಶಾಲನಗರದಲ್ಲಿ ಭಾರೀ ಸಂಖ್ಯೆಯಲ್ಲಿ ಪೊಲೀಸ್ ನಿಯೋಜನೆ ಮಾಡಲಾಗಿತ್ತು.

4 ದಿನಗಳಿಂದ ಕೊಡಗಿನ ಖಾಸಗಿ ರೆಸಾರ್ಟ್‌ನಲ್ಲಿ ತಮ್ಮ ಕುಟುಂಬದೊಂದಿಗೆ ಸ್ಟಾಲಿನ್ ಇಂದು ಮಡಿಕೇರಿ-ಕುಶಾಲನಗರ-ಮೈಸೂರು ಮಾರ್ಗದಲ್ಲಿ ತಮಿಳುನಾಡಿಗೆ ಪ್ರಯಾಣ ಬೆಳೆಸಬೇಕಾಗಿತ್ತು. ಆದರೆ ಯೋಜಿತ ಪ್ರತಿಭಟನೆಯ ಬಗ್ಗೆ ಗುಪ್ತಚರ ಮಾಹಿತಿಯ ಮೇರೆಗೆ ಸ್ಥಳೀಯ ಪೊಲೀಸರ ನೆರವಿನಿಂದ ಅವರ ಬೆಂಗಾವಲು ಪಡೆ ಸಿದ್ದಾಪುರ ಮತ್ತು ಪಿರಿಯಾಪಟ್ಟಣ ಹಾದು ಹೋಗುವ ಪರ್ಯಾಯ ಮಾರ್ಗವನ್ನು ಆರಿಸಿಕೊಂಡಿದೆ. ಸ್ಟಾಲಿನ್ ಹಾಗೂ ಅವರ ಪುತ್ರ ಉದಯನಿಧಿ ಸನಾತನ ಧರ್ಮವನ್ನು ಅವಹೇಳನ ಮಾಡುತ್ತಲೇ ಇದ್ದಾರೆ ಎಂದು ಆರೋಪಿಸಿ ಹಿಂದೂ ಕಾರ್ಯಕರ್ತರು ಕುಶಾಲನಗರ ಬಳಿಯ ಗುಡ್ಡೆಹೊಸೂರಿನಲ್ಲಿ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಲು ಯೋಜಿಸಿದ್ದರು. ಡಿಎಂಕೆ ನಾಯಕ ಪಟ್ಟಣದ ಮೂಲಕ ಹಾದು ಹೋಗುವಾಗ ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದರು. 6ನೇ ಪುಟಕ್ಕೆ



ನೀಟ್ ಮರುಪರೀಕ್ಷೆಗೆ ಸಿಬಿಟಿ ಮಾದರಿ: ಸುಪ್ರೀಂಕೋರ್ಟ್ ನಕಾರ

ನವದೆಹಲಿ: ಜೂನ್ 21ಕ್ಕೆ ನಿಗದಿಯಾಗಿರುವ 'ನೀಟ್-ಯುಜಿ' 2026ರ ಮರುಪರೀಕ್ಷೆಯನ್ನು ಕಂಪ್ಯೂಟರ್ ಮೂಲಕ (ಕಂಪ್ಯೂಟರ್ ಬೇಸ್ಡ್ ಟೆಸ್ಟ್ (ಸಿಬಿಟಿ) ನಡೆಸಲು ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾದ ಅರ್ಜಿಯನ್ನು ತಕ್ಷಣ ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅರವಿಂದ ಕುಮಾರ್ ಅವರ ಪೀಠವು, ಈ ವಿಷಯದ ತುರ್ತು ವಿಚಾರಣೆಗೆ ಒಲವು ತೋರುವುದಿಲ್ಲ ಎಂದು ಸ್ಪಷ್ಟಪಡಿಸಿತು. ಅರ್ಜಿದಾರರು ಪ್ರಸ್ತಾಪಿಸಿದ ವೇಲು ಸ್ವಾಮಿ ಸಿಂಗ್ ಅವರು ಪರೀಕ್ಷೆಯನ್ನು ಸಿಬಿಟಿ ಮಾದರಿಯಲ್ಲಿ ನಡೆಸಬೇಕು ಎಂದು ಪೀಠವನ್ನು ಒತ್ತಾಯಿಸಿದರು. 6ನೇ ಪುಟಕ್ಕೆ

ಕೈ-ಕಾಲು ಕತ್ತರಿಸುವಂತಾದರೆ ಜನ ಕಾನೂನು ಪಾಲನೆ ಮಾಡ್ತಾರೆ!

ಬೆಂಗಳೂರು: ಮಧ್ಯಪ್ರಾಚ್ಯ ರಾಷ್ಟ್ರಗಳ ರೀತಿಯಲ್ಲೇ ನಮ್ಮಲ್ಲೂ ಕೈ-ಕಾಲು ಕತ್ತರಿಸುವಂತಾದರೆ ಜನರು ಕಾನೂನು ಪಾಲನೆಗೆ ಮುಂದಾಗುತ್ತಾರೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಆರ್.ನಟರಾಜ್ ಮೌಖಿಕವಾಗಿ ಅಭಿಪ್ರಾಯಪಟ್ಟಿದ್ದಾರೆ.



ನ್ಯಾ.ನಟರಾಜ್

ಇತ್ತೀಚೆಗೆ ರಾಜಾಕಾಲದ ಏಕಸದಸ್ಯ ನ್ಯಾಯಪೀಠದಲ್ಲಿದ್ದ ಅವರು, ಅತ್ಯಾಚಾರ ಆರೋಪದಡಿ ಬಂಧಿತರಾಗಿರುವ ತಲಘಟ್ಟಪುರ ನಿವಾಸಿ ತರುಣನೊಬ್ಬ (23) ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯ ವೇಳೆ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. ಅರ್ಜಿದಾರರ ಪರ ವಕೀಲರು, ಅರ್ಜಿದಾರ ಯಾವುದೇ ಅಪರಾಧ ಎಸಗಿಲ್ಲ. 6ನೇ ಪುಟಕ್ಕೆ

ರಾಹುಲ್ ಗಾಂಧಿ ಮಾತು ಕೊಟ್ಟಿದ್ದಾರೆ: ನಾನೂ ಮಂತ್ರಿಯಾಗ್ತೇನೆ!

ನವದೆಹಲಿ: ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದಾಗಿ ಮಾತು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.



ಉಪಮುಖ್ಯಮಂತ್ರಿಯಾಗಲು ಬಯಸುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರಿಸಿದ ಯತೀಂದ್ರ ನಾನು ಯಾವುದೇ ನಿರ್ದಿಷ್ಟ ಖಾತೆಗಾಗಿ ಬೇಡಿಕೆ ಇಟ್ಟಿಲ್ಲ ಎಂದರು. ಕಳೆದ ಬಾರಿ ನಾನು ಹೈಕಮಾಂಡ್ ಭೇಟಿಯಾದಾಗ ರಾಹುಲ್ ಗಾಂಧಿ ಅವರು ನನ್ನನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದಾಗಿ ಮಾತು ಕೊಟ್ಟಿದ್ದರು. ಆದ್ದರಿಂದ ನಾನು ಆಶಾವಾದಿಯಾಗಿದ್ದೇನೆ. ಯಾವುದೇ ಖಾತೆ ಇರಲಿ, ನಾನು ಸಂತೋಷವಾಗಿರುತ್ತೇನೆ ಎಂದು ಯತೀಂದ್ರ ಹೇಳಿದರು. ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಕಳೆದ ಶನಿವಾರ ಡಿಕೆ ಶಿವಕುಮಾರ್ ಅವರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.

ಪರಿಷತ್ ಚುನಾವಣೆಗೆ ಅಧಿಸೂಚನೆ ಪ್ರಕಟ

ಬೆಂಗಳೂರು, ಜೂ.1- ರಾಜ್ಯ ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸದಸ್ಯ ಸ್ಥಾನಕ್ಕೆ ನಡೆಯುವ ದ್ವೈವಾರ್ಷಿಕ ಚುನಾವಣೆಗೆ ಅಧಿಸೂಚನೆ ಹೊರಡಿಸಲಾಗಿದ್ದು, ಇಂದಿನಿಂದ (ಜೂನ್1) ಜೂ.8 ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ವಿಧಾನಪರಿಷತ್ತಿನ ದ್ವೈವಾರ್ಷಿಕ ಚುನಾವಣೆಯ ಚುನಾವಣಾಧಿಕಾರಿ ಹಾಗೂ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ಈ ಸಂಬಂಧ ಪ್ರಕಟಣೆ ಹೊರಡಿಸಿದ್ದಾರೆ. ಚುನಾವಣಾ ಸ್ಪರ್ಧೆಯಲ್ಲಿ 7ಕ್ಕಿಂತ ಹೆಚ್ಚು ಅಭ್ಯರ್ಥಿಗಳಿದ್ದರೆ ಜೂನ್ 18ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದ್ದು, ಅಂದು ಸಂಜೆ 5 ಗಂಟೆಯಿಂದ ಮತ ಎಣಿಕೆ ನಡೆಯಲಿದೆ.



ಪ್ರಕ್ರಿಯೆ: ಜೂ.9 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅಂದು ಸಂಜೆ ವೇಳೆಗೆ ಸಿಂಧುವಾದ ನಾಮಪತ್ರಗಳ ಪ್ರಕಟಣೆ ಹೊರಡಿಸಲಾಗುತ್ತದೆ. ಜೂನ್ 11 ರವರೆಗೆ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಅವಕಾಶ ನೀಡಲಾಗಿದ್ದು, ಚುನಾವಣಾ ಸ್ಪರ್ಧೆಯಲ್ಲಿ 7ಕ್ಕಿಂತ ಹೆಚ್ಚು ಅಭ್ಯರ್ಥಿಗಳಿದ್ದರೆ ಜೂನ್ 18ರಂದು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ಇನ್ನು ಅಂದೇ ಸಂಜೆ 5 ಗಂಟೆಯಿಂದಲೇ ಮತದಾನ ಪ್ರಕ್ರಿಯೆ ನಡೆಯಲಿದೆ.

7 ಪರಿಷತ್ ಸದಸ್ಯರ ಅವಧಿ ಅಂತ್ಯ: ವಿಧಾನಪರಿಷತ್ ಸದಸ್ಯರಾದ ಗೋವಿಂದರಾಜು (ಕಾಂಗ್ರೆಸ್), ನಾಸೀರ್ ಅಹಮದ್ (ಕಾಂಗ್ರೆಸ್), ಎಂಟಿಬಿ ನಾಗರಾಜ್ (ಬಿಜೆಪಿ), ಪ್ರತಾಪ್ ಸಿಂಹ ನಾಯಕ್ ಕೆ(ಬಿಜೆಪಿ), ತಿಪ್ಪಣ್ಣಪ್ಪ (ಕಾಂಗ್ರೆಸ್), ಸುನೀಲ್ ವಲ್ಯಾಪುರೆ (ಬಿಜೆಪಿ), ಬಿ.ಕೆ.ಹರಿಪ್ರಸಾದ್ (ಕಾಂಗ್ರೆಸ್) ಅವರು ಜೂ.30 ರಂದು ನಿವೃತ್ತಿ ಹೊಂದಲಿದ್ದಾರೆ. ಇವರ ನಿವೃತ್ತಿಯಿಂದ ತೆರವಾಗುವ ಮೇಲ್ಮನೆ ಸದಸ್ಯ ಸ್ಥಾನಕ್ಕೆ ಭಾರತೀಯ ಚುನಾವಣಾ ಆಯೋಗವು ಪ್ರಕಟಣೆ ಹೊರಡಿಸಿದ್ದು, ಅದರಂತೆ ಚುನಾವಣೆ ಪ್ರಕ್ರಿಯೆ ನಡೆಯಲಿದೆ.

ನಕಲಿ ಆಧಾರ್ ಹಾವಳಿ ದೇಶದ ಹಿತಾಸಕ್ತಿಗೆ ವಿರುದ್ಧ



ಹೈಕೋರ್ಟ್ ಕಳವಳ

ಬೆಂಗಳೂರು: ಭಾರತೀಯರಲ್ಲದ ವಿದೇಶಿಯರಿಗೆ ಸುಲಭವಾಗಿ ಆಧಾರ್ ಕಾರ್ಡ್ ಮಾಡಿಕೊಡುತ್ತಿರುವ ವ್ಯವಸ್ಥೆಯನ್ನು ಗಮನಿಸಿದರೆ ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದೇ ತಿಳಿಯುತ್ತಿಲ್ಲ ಎಂದು ಹೈಕೋರ್ಟ್ ತೀವ್ರ ಆತಂಕ ವ್ಯಕ್ತಪಡಿಸಿದೆ.

ಬಾಂಗ್ಲಾದೇಶದ ವ್ಯಕ್ತಿಗಳಿಗೆ ನಕಲಿ ಆಧಾರ್ ಕಾರ್ಡ್ ಮಾಡಿಕೊಟ್ಟ ಆರೋಪದಡಿ ಸದ್ಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಪಶ್ಚಿಮ ಬಂಗಾಳದ ಅನಾಯತ್ ಮಂಡಲ್ (28) ಸಲ್ಲಿಸಿದ್ದ ಅರ್ಜಿಯನ್ನು, ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ರಕ್ಷಿತ್, ಅರ್ಜಿದಾರರ ವಿರುದ್ಧ ಹೊರಿಸಲಾಗಿರುವ ಅಪರಾಧಿಕ ಕಲಂಗಳು ನಕಲಿ ಆಧಾರ್ ಕಾರ್ಡ್ ಮಾಡಿದ ಆರೋಪಕ್ಕೆ ಅನ್ವಯಿಸುವುದಿಲ್ಲ. ಅರ್ಜಿದಾರ ವಿದೇಶಿಯನಲ್ಲ. ಹಾಗಾಗಿ, ಅನ್ವಯಿಸಲಾಗಿರುವ ವಿದೇಶಿಯರ ಕಾಯ್ದೆಯ ಕಲಂ 14 ಇಲ್ಲಿ ಊರ್ಜಿತವಾಗುವುದಿಲ್ಲ. ಅರ್ಜಿದಾರರು 2024ರ ಆರಂಭದಿಂದಲೂ ಕಸ್ಟಡಿಯಲ್ಲಿದ್ದು, ಈಗಾಗಲೇ ಶಿಕ್ಷೆಯ ಅರ್ಧ ಭಾಗವನ್ನು ಜೈಲಿನಲ್ಲೇ ಕಳೆದಿದ್ದಾರೆ ಎಂದರು.

ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ನೀವು ಮಾಡಿಕೊಡುವ ನಕಲಿ ಆಧಾರ್ ಕಾರ್ಡ್ ಈ ದೇಶದ ಹಕ್ಕುಗಳಿಗೆ ಮತ್ತು ಇತರೆಲ್ಲಾ ದಾಖಲೆಗಳಿಗೂ ಪ್ರಮುಖ ಅಡಿಪಾಯವಾಗುತ್ತದೆ. ಈ ಮೂಲಕ ನೀವು ಎಲ್ಲವನ್ನೂ ನಾಶ ಪಡಿಸುತ್ತಿದ್ದೀರಿ. ಅರ್ಜಿದಾರರು ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿತು. ಎಷ್ಟು ಜನ ವಿದೇಶಿಯರನ್ನು ಹೀಗೆ ಭಾರತದ 6ನೇ ಪುಟಕ್ಕೆ

ಸರ್ಕಾರಿ ನೌಕರರ ವರ್ಗಾವಣೆ ಅವಧಿ ಜೂ.30ಕ್ಕೆ ವಿಸ್ತರಣೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ (2026-27) ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ನಿಗದಿಪಡಿಸಿದ್ದ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ. ರಾಜ್ಯದಲ್ಲಿ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಸಂಬಂಧಿಸಿದಂತೆ ಏ.13ರಂದು ಆದೇಶ ಹೊರಡಿಸಿದ್ದ ಸರ್ಕಾರ, ಏ.15ರಿಂದ ಮೇ 31ರವರೆಗೆ ಅವಧಿಯನ್ನು ನಿಗದಿಪಡಿಸಿತ್ತು. ಇದೀಗ ಅದನ್ನು ವಿಸ್ತರಿಸಿದೆ.



ಬಿಚ್ಚು ನುಡಿ
ವಿಶ್ವಂ ಮುತ್ತಣ್ಣ
ಅಂತೂ ಡಿಕೆಶಿ ಸಿಎಂ! ಆದರೆ ಎಲ್ಲಿವರ್ಗೆ...!!
ಪುಟ-4


'ಉತ್ತಮ ಕಲಿಕೆ ಉಜ್ವಲ ಭವಿಷ್ಯ' ಧ್ಯೇಯವಾಕ್ಯದೊಂದಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನ ಶಾಲಾ ಪ್ರಾರಂಭೋತ್ಸವ



ಮೈಸೂರು ತಾಲೂಕು ರಟ್ಟನಹಳ್ಳಿ ಸರ್ಕಾರಿ ಶಾಲೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಲು ಶಾಸಕ ಜಿ.ಟಿ. ದೇವೇಗೌಡರನ್ನು ಸಾಂಪ್ರದಾಯಿಕ ಎತ್ತಿನಗಾಡಿ ಮೆರವಣಿಗೆ ಮೂಲಕ ಕರೆತರಲಾಯಿತು.

[ಸುತ್ತ ವರದಿ ಪುಟ-11]

ಮಕ್ಕಳಿಗೆ ಸಿಹಿ ನೀಡಿ ಪ್ರೀತಿ-ವಾತ್ಸಲ್ಯದಿಂದ ಸ್ವಾಗತಿಸಿದ ಶಿಕ್ಷಕರು



ಕುವೆಂಪುನಗರದಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ನಡೆದ ಶಾಲಾ ಪ್ರಾರಂಭೋತ್ಸವದಲ್ಲಿ ಮೆರವಣಿಗೆ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಬಿಇಒ(ದಕ್ಷಿಣ ವಲಯ) ಕೃಷ್ಣ, ಪ್ರಾಂಶುಪಾಲ ಗುಬ್ಬಿಗೂಡು ರಮೇಶ್ ಮತ್ತಿತರರಿದ್ದರು.



ಕುಕ್ಕರಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ 'ಶಾಲಾ ಪ್ರಾರಂಭೋತ್ಸವ'ಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು, ಜೂ.1(ಎಂಕೆ)- 'ಉತ್ತಮ ಕಲಿಕೆ ಉಜ್ವಲ ಭವಿಷ್ಯ' ಧ್ಯೇಯವಾಕ್ಯದೊಂದಿಗೆ 2026-27ನೇ ಶೈಕ್ಷಣಿಕ ಸಾಲಿನ 'ಶಾಲಾ ಪ್ರಾರಂಭೋತ್ಸವ' ಸೋಮವಾರ ಮೈಸೂರಿನೆಲ್ಲೆಡೆ ಅತ್ಯಂತ ಸಂಭ್ರಮ ದಿಂದ ಜರುಗಿತು.

ಬೇಸಿಗೆ ರಜೆ ಮುಗಿಸಿ ಸಮವಸ್ತ್ರದೊಂದಿಗೆ ಶಾಲೆಗೆ ಮರಳಿದ ವಿದ್ಯಾರ್ಥಿಗಳನ್ನು ಆಯಾ ಶಾಲಾ ಶಿಕ್ಷಕರು ಸಿಹಿ ನೀಡಿ ಅತ್ಯಂತ ಪ್ರೀತಿ-ವಾತ್ಸಲ್ಯದಿಂದ ಸ್ವಾಗತಿಸಿದರಲ್ಲದೆ ಪಠ್ಯ ಪುಸ್ತಕಗಳು, ಬ್ಯಾಗ್ ಹಾಗೂ ಇನ್ನಿತರೆ ಕಲಿಕಾ ಸಾಮಗ್ರಿಗಳನ್ನು ವಿತರಿಸಿ, ಮಕ್ಕಳ ಮುಂದಿನ ವಿದ್ಯಾಭ್ಯಾಸಕ್ಕೆ ಮುನ್ನುಡಿ ಬರೆದರು.

ವಿವಿಧ ಸಂದೇಶ: ಮೈಸೂರು ದಕ್ಷಿಣ ವಲಯ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಕುವೆಂಪುನಗರದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆ(ಕೆಪಿಎಸ್) ಆವರಣದಲ್ಲಿ ನಡೆದ ತಾಲೂಕು ಮಟ್ಟದ ಶಾಲಾ ಪ್ರಾರಂಭೋತ್ಸವದಲ್ಲಿ ಶಾಲಾ ಸಮವಸ್ತ್ರ ತೊಟ್ಟು ಸಂತಸದಿಂದ ಕುಣಿದು ಕುಪ್ಪಳಿಸಿದ ವಿದ್ಯಾರ್ಥಿಗಳು, 'ಬರಹವೇ ಬದುಕಿಗೆ ದಾರಿ', 'ಉಚಿತ ಶಿಕ್ಷಣಕ್ಕಾಗಿ ಸರ್ಕಾರಿ ಶಾಲೆ ಸೇರಿಸಿ', 'ಪರಿವರ್ತನೆಯ ಸಾಧನವೇ ಶಿಕ್ಷಣ' ಎಂಬಿತ್ಯಾದಿ ಸಂದೇಶವುಳ್ಳ ಫಲಕ ಗಳನ್ನಿಡಿದು ಶಿಕ್ಷಣ ಮತ್ತು ಕಲಿಕೆಗೆ ಸರ್ಕಾರಿ ಶಾಲೆಯ ವಾತಾವರಣವೇ ಉತ್ತಮವೆಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. 6ನೇ ಪುಟಕ್ಕೆ

ಮಕ್ಕಳ ಕಲಿಕೆಗೆ ಚಾಲನೆ...

ಮೈಸೂರಿನ ಕುಕ್ಕರಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ 'ಶಾಲಾ ಪ್ರಾರಂಭೋತ್ಸವ', ದಾಖಲಾತಿ ಆಂದೋಲನ ಹಾಗೂ ಪೋಷಕರು-ಶಿಕ್ಷಕರ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಕೆ.ಹರೀಶ್ ಗೌಡ, ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗೂ ಸ್ಕೂಲ್ ಬ್ಯಾಗ್‌ಗಳನ್ನು ವಿತರಿಸುವ ಮೂಲಕ ಮಕ್ಕಳ ಕಲಿಕೆಗೆ ಚಾಲನೆ ನೀಡಿದರು.

ಬಳಿಕ ಪೋಷಕರು ಹಾಗೂ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಬೇಸಿಗೆ ರಜೆಯನ್ನು ಸಂತೋಷದಿಂದ ಕಳೆದು ಮರಳಿ ಶಾಲೆಗೆ ಬಂದಿದ್ದೀರಿ. ಸರ್ಕಾರಿ ಶಾಲೆಗಳಲ್ಲಿ ಯಾವುದೇ ರೀತಿಯ ತಾರತಮ್ಯವಿಲ್ಲದೆ ಎಲ್ಲ ಮಕ್ಕಳಿಗೂ ಸಮಾನ ಮತ್ತು ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ. ಯಾವೊಂದು ಮಗುವೂ ಶಿಕ್ಷಣದಿಂದ ವಂಚಿತರಾಗಬಾರದು. ಶಿಕ್ಷಣವನ್ನು ಪಡೆದುಕೊಂಡಾಗ ಮಾತ್ರವೇ ಜೀವನದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಲು ಸಾಧ್ಯ. ಶಿಕ್ಷಣದಲ್ಲಿ ಪರಿಣತಿ ಮತ್ತು ಜ್ಞಾನವನ್ನು ಗಳಿಸಿಕೊಂಡಾಗಲೇ ಬದುಕಿನಲ್ಲಿ ಉತ್ತಮ ಅವಕಾಶಗಳು ಹುಡುಕಿಕೊಂಡು 6ನೇ ಪುಟಕ್ಕೆ

ವಿದ್ಯಾರ್ಥಿ ಬಳಗಕ್ಕೆ ನಿಯೋಜಿತ ಸಿಎಂ ಡಿ.ಕೆ.ಶಿವಕುಮಾರ್ ಶುಭ ಕೋರಿಕೆ

ಬೆಂಗಳೂರು, ಜೂ.1 (ಕೆಎಂಸಿ)- ಇಂದಿನಿಂದ ನೂತನ ಶೈಕ್ಷಣಿಕ ವರ್ಷ ಪ್ರಾರಂಭವಾಗಲಿದೆ. ನನ್ನ ಪ್ರೀತಿಯ ವಿದ್ಯಾರ್ಥಿಗಳಿಗೆ ಶುಭವಾಗಲಿ, ಯಶಸ್ಸು ಸಿಗಲಿ ಎಂದು ಸರ್ಕಾರದ ಪರವಾಗಿ ಹಾಗೂ ವೈಯಕ್ತಿಕವಾಗಿ ಹಾರೈಸುತ್ತೇನೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾದ ಡಿ.ಕೆ. ಶಿವಕುಮಾರ್ ತಿಳಿಸಿದರು.



ದೇಹಲಿಗೆ ತೆರಳುವುದಕ್ಕೂ ಮುನ್ನ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ಮಾನವ ಸಂಪನ್ಮೂಲವಾಗಿ ತಮ್ಮದೇ ಆದ ಕೊಡುಗೆ ನೀಡಿದ್ದು, ಇಡೀ ವಿಶ್ವ ಇದಕ್ಕೆ ಸಾಕ್ಷಿಯಾಗಿದೆ. ನಮ್ಮ ಜ್ಞಾನ ಭಂಡಾರ ಇಡೀ ವಿಶ್ವವನ್ನೇ ಆಕರ್ಷಿಸುತ್ತಿದೆ. ಜಗತ್ತಿನ ಖ್ಯಾತಿಶೀಲ ವಿಶ್ವ ವಿದ್ಯಾಲಯಗಳಲ್ಲಿ ನಮ್ಮ ವಿದ್ಯಾರ್ಥಿಗಳು ಓದಿ ಅನೇಕ ಸಾಧನೆ ಮಾಡಿದ್ದಾರೆ ಎಂದರು.

ನಮ್ಮಲ್ಲಿ ಅಮೂಲ್ಯ ಮಾನವ ಸಂಪನ್ಮೂಲಗಳಿವೆ. ಹೀಗಾಗಿ ಜಗತ್ತು ಭಾರತವನ್ನು ಕರ್ನಾಟಕದ ಮೂಲಕ ನೋಡುತ್ತಿದೆ. ಇದೇ ಕಾರಣಕ್ಕೆ ನಮ್ಮ ಹಿರಿಯರು, ಐಐಟಿ, ಐಐಎಂ, ರಾಷ್ಟ್ರೀಯ ಕಾನೂನು ಕಾಲೇಜು, ಇಸ್ರೋ ಸೇರಿದಂತೆ ಹೆಚ್‌ಎಎಲ್ ಹಾಗೂ ಇತರೆ ಪ್ರಮುಖ ಸಂಸ್ಥೆಗಳನ್ನು ಇಲ್ಲೇ ಆರಂಭಿಸಿದ್ದಾರೆ. ಇವುಗಳನ್ನು ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಮಕ್ಕಳು ತಮ್ಮ ವಿದ್ಯಾಭ್ಯಾಸ ಮಾಡಬೇಕಾಗುತ್ತದೆ ಎಂದು ಸಲಹೆ ನೀಡಿದರು.

ನಾವು ಕೃತಕಬುದ್ಧಿಮತ್ತೆ ಯುಗಕ್ಕೆ ಹೋಗುತ್ತಿದ್ದು, ಇದಕ್ಕೆ ಪೂರಕವಾಗಿ ವಿದ್ಯಾಭ್ಯಾಸ ಮಾಡಬೇಕು. ಮುಂದಿನ ದಿನಗಳಲ್ಲಿ ನಮ್ಮ ಶಿಕ್ಷಣ ನೀತಿಯನ್ನು ತಿಳಿಸಲಾಗುವುದು. ಈ ವರ್ಷ ನಿಮಗೆ ಶುಭವಾಗಲಿ, 6ನೇ ಪುಟಕ್ಕೆ

ಗೃಹಲಕ್ಷ್ಮಿ ಲೋನ್ ಯೋಜನೆ ಶುದ್ಧ ಸುಳ್ಳು; ಸರ್ಕಾರದಿಂದ ಇಂತಹ ಯೋಜನೆಯೇ ಇಲ್ಲ

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷೆ ಪುಷ್ಪವಲ್ಲಿ ಸ್ಪಷ್ಟನೆ

ಮೈಸೂರು, ಜೂ.1(ಬಿಎಲ್ ಯು)– ಗೃಹಲಕ್ಷ್ಮಿ ಲೋನ್ ಯೋಜನೆ ಎಂಬ ಹೆಸರಿನಲ್ಲಿ ಸಾಲ ನೀಡಲಾಗುತ್ತಿದೆ ಎಂಬುದು ಶುದ್ಧ ಸುಳ್ಳು ಎಂದು ಮೈಸೂರು ನಗರಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷೆ ಪುಷ್ಪವಲ್ಲಿ ಸ್ಪಷ್ಟಪಡಿಸಿದ್ದಾರೆ.

ಗೃಹಲಕ್ಷ್ಮಿ ಲೋನ್ ಯೋಜನೆಯಲ್ಲಿ 30 ಸಾವಿರದಿಂದ 3 ಲಕ್ಷದವರೆಗೆ ಸಾಲ ನೀಡಲಾಗುತ್ತಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ ಸರ್ಕಾರದಿಂದ ಇಂತಹ ಯಾವುದೇ ಯೋಜನೆ ಪ್ರಕಟವಾಗಿಲ್ಲ. ಆದ ಕಾರಣ ಮಹಿಳೆಯರು ಈ ಯೋಜನೆ ಹೆಸರಿನಲ್ಲಿ ಎಸಗುವ ಮೋಸಕ್ಕೆ ಯಾರೂ ಒಳಗಾಗ ಬಾರದೆಂದು ಸಲಹೆ ನೀಡಿದ್ದಾರೆ.

ಯಾವುದೇ ರೀತಿಯ ಅಪರಿಚಿತ ಎಪಿಕೆ ಫೈಲ್ ಲಿಂಕ್‌ಗಳನ್ನು ಇನ್ಸ್ಟಾಲ್ ಮಾಡಬೇಡಿ, ಓಟಿಪಿ ಅಥವಾ ಬ್ಯಾಂಕ್ ಮಾಹಿತಿಯನ್ನು ಯಾರಿಗೂ ಬಹಿರಂಗ ಪಡಿಸಬೇಡಿ ಎಂದು ಕಿವಿಮಾತು ಹೇಳಿದ್ದಾರೆ.

ಗೃಹಲಕ್ಷ್ಮಿ ಯೋಜನೆಯ ಧನ ಸಹಾಯದ ಹಣವನ್ನು ಹಳೆಯ ಸಾಲ ಅಥವಾ ಬಡ್ಡಿಗೆ ಕಡಿತಗೊಳಿಸಬಾರದು ಎಂದು ಎಸ್‌ಎಲ್ ಬಿಎಲ್ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಿದೆ ಎಂದು ಪುಷ್ಪವಲ್ಲಿ ತಿಳಿಸಿದ್ದಾರೆ.

ನೀರಿನಲ್ಲಿ ತಂದೆ ಮುಳುಗಿ ಸಾವು; ವೀಡಿಯೊ ಮಾಡುತ್ತ ನಿಂತ ಮಗ

ಕಲಬುರಗಿ: ಎಮ್ಮೆಯನ್ನು ವಾಪಸ್ ಕರೆತರುವ ಸಲುವಾಗಿ ಭೀಮಾ ನದಿಗೆ ಇಳಿದಿದ್ದ ತಂದೆ ಮಗನ ಕಣ್ಣೆದುರೇ ನದಿಯಲ್ಲಿ ಮುಳುಗಿ ಸಾವನ್ನಪ್ಪಿರುವ ಮನಕಲಕುವ ಘಟನೆ ಕಲಬುರಗಿಯ ಜೇವರ್ಗಿ ತಾಲೂಕಿನ ಕಟ್ಟಿ ಸಂಗಾವಿ ಗ್ರಾಮದಲ್ಲಿ ನಡೆದಿದೆ. ಈಜು ಬಾರದಿದ್ದರೂ ವಿಜಯ್‌ರಾಜು ಎಂಬವರು ನದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ನೀರು ಸೊಂಟದ ಮೇಲಕ್ಕೆ ಬಂದಿದೆ. ಈ ವೇಳೆ ಈಜಲು ಪ್ರಯತ್ನಿಸಿದ್ದಾರೆ. ಆದರೆ ನೀರಿನ ಸೆಳೆತಕ್ಕೆ ಸಿಲುಕಿ ಮುಳುಗಲು ಪ್ರಾರಂಭಿಸಿದರು. ಈ ವೇಳೆ ಕಾಪಾಡಿ, ಕಾಪಾಡಿ ಎಂದು ಕೂಗಿದರೂ ದಡದ ಮೇಲಿದ್ದ ಮಗನಿಗೆ ಏನು ಮಾಡಬೇಕೆಂದು ತೋಚದೆ ಅಸಹಾಯಕನಾಗಿ ನಿಂತಿದ್ದ. ಇನ್ನು ತಂದೆ ನೀರಿನಲ್ಲಿ ಮುಳುಗುತ್ತಿರುವ ದೃಶ್ಯ ಮಗನ ಮೊಬೈಲ್‌ನಲ್ಲಿ ಸೆರೆಯಾಗಿದೆ.

ಆತ್ಮಹತ್ಯೆ ದರದಲ್ಲಿ ಬೆಂಗಳೂರಿಗೆ ಅಗ್ರಸ್ಥಾನ

ಬೆಂಗಳೂರು: ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ದೇಶದ ನಗರಗಳಲ್ಲಿ ಆತ್ಮಹತ್ಯೆ ದರಗಳ ಕುರಿತಾದ ಡೇಟಾ, ಬೆಂಗಳೂರನ್ನು ಕಳವಳಕಾರಿ ಸ್ಥಾನದಲ್ಲಿರಿಸಿದೆ. ಮಹಾನಗರಗಳಲ್ಲಿ ಬೆಂಗಳೂರು ಆತ್ಮಹತ್ಯೆಗಳ ಸಂಖ್ಯೆಯಲ್ಲಿ ದೆಹಲಿ ನಂತರ 2ನೇ ಸ್ಥಾನದಲ್ಲಿದ್ದರೂ, ಜನಸಂಖ್ಯೆಯ ಪ್ರಕಾರ ಅದರ ಆತ್ಮಹತ್ಯೆ ಅನುಪಾತ ಗಮನಾರ್ಹವಾಗಿ ಹೆಚ್ಚಾಗಿದೆ. ಇದು ಮಹಾನಗರಗಳಲ್ಲಿ ಮೊದಲ ಸ್ಥಾನ ಗಳಿಸಿದೆ.

2024ರ ಕ್ಯಾಲೆಂಡರ್ ವರ್ಷದ ಎನ್‌ಸಿಆರ್‌ಬಿ ಡೇಟಾ ಹೇಳುವ ಪ್ರಕಾರ, 84.99 ಲಕ್ಷ ಜನಸಂಖ್ಯೆಯೊಂದಿಗೆ ಬೆಂಗಳೂರಿನಲ್ಲಿ 2403 ಆತ್ಮಹತ್ಯೆಗಳನ್ನು ತೋರಿಸುತ್ತದೆ. ಇದು ನಗರದ ಆತ್ಮಹತ್ಯೆ ದರವನ್ನು 28.3 ಎಂದು ಉಲ್ಲೇಖಿಸುತ್ತದೆ. ಇನ್ನು ದೆಹಲಿಯಲ್ಲಿ 163.15 ಲಕ್ಷ ಜನಸಂಖ್ಯೆಯಲ್ಲಿ 2905 ಆತ್ಮಹತ್ಯೆಗಳು ಸಂಭವಿಸಿದ್ದು ಇದು ಆತ್ಮಹತ್ಯೆ ದರವನ್ನು 17.8 ಎಂದು ತೋರಿಸುತ್ತದೆ. ಏಕಕಾಲದಲ್ಲಿ ಬಹು ಒತ್ತಡಗಳು ಆತ್ಮಹತ್ಯೆಗೆ ಪ್ರೇರೆಪಿಸುತ್ತದೆ. ಆರ್ಥಿಕ ಸಂಕಷ್ಟ, ನಿರ್ದಿಷ್ಟ ಉದ್ಯೋಗಗಳು, ಹೆಚ್ಚುತ್ತಿರುವ ಜೀವನ ವೆಚ್ಚಗಳು, ಸಂಬಂಧಗಳಲ್ಲಿ ಬಿರುಕು, ಸಾಮಾಜಿಕ ಪ್ರತ್ಯೇಕತೆ ಮತ್ತು ನಿರಂತರವಾಗಿ ಕಾರ್ಯನಿರ್ವಹಿಸಲು ಒತ್ತಡವು ಅತಿರೇಕದ ನಿರ್ಧಾರ ತೆಗೆದುಕೊಳ್ಳಲು ಪ್ರೇರೇಪಿಸುತ್ತದೆ ಎಂದು ಕ್ಯಾಡಬಮ್ ಆಸ್ಪತ್ರೆಯ ಹಿರಿಯ ಮನಶ್ಶಾಸ್ತ್ರಜ್ಞೆ ನೇಹಾ ಕ್ಯಾಡಬಮ್ ಹೇಳಿದರು.

ಒತ್ತಡಗಳನ್ನು ಆರಂಭದಲ್ಲಿ ಅನೇಕರು ಸ್ವತಂತ್ರವಾಗಿ ನಿಭಾಯಿಸಲು ಪ್ರಯತ್ನಿಸುತ್ತಾರೆ. ಆದರೆ ದೀರ್ಘಕಾಲದ ಅನಿಶ್ಚಿತತೆಯು ಖಿನ್ನತೆ, ಆತಂಕ, ಮಾದಕವಸ್ತು ಬಳಕೆ ಮತ್ತು ಅಸಹಾಯಕತೆಯ ಭಾವನೆಗಳಿಗೆ ಕಾರಣವಾಗಬಹುದು. ದುರಾದೃಷ್ಟವಶಾತ್, ಹಣಕಾಸಿನ ಕಾಳಜಿಗಳು ಸಾಮಾನ್ಯವಾಗಿ ವೃತ್ತಿಪರ ಸಮಾಲೋಚನೆಯನ್ನು ವಿಳಂಬಗೊಳಿಸುತ್ತವೆ, ಅಂದರೆ ರೋಗ ಲಕ್ಷಣಗಳು ದೈನಂದಿನ ಕಾರ್ಯಚಟುವಟಿಕೆಗೆ ಅಡ್ಡಿಪಡಿಸುವಷ್ಟು ತೀವ್ರವಾದ ನಂತರ ಅನೇಕರು ಮನೋವೈದ್ಯಕೀಯ ಸಹಾಯ ಪಡೆಯುತ್ತಾರೆ ಎಂದು ಕ್ಲಿನಿಕಲ್ ಮನಶ್ಶಾಸ್ತ್ರಜ್ಞ ಮೇಘಾ ಶಂಕರ್ ಹೇಳಿದರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಅಂತೂ ಡಿಕೆಶಿ ಸಿಎಂ! ಆದರೆ ಎಲ್ಲಿವರೆಗೆ...!!

ಕಳೆದ ನಾಲ್ಕು ದಶಕಗಳಿಂದಲೂ ಡಿ.ಕೆ.ಶಿವಕುಮಾರ್ ಕರ್ನಾಟಕ ರಾಜ್ಯ ರಾಜಕೀಯದ ಅವಿಭಾಜ್ಯ ಅಂಗವಾಗಿದ್ದಾರೆ. ಮಾತ್ರವಲ್ಲ ಒಂದಲ್ಲ ಒಂದು ಅಧಿಕಾರದಲ್ಲೂ ಇದ್ದಾರೆ. ಹಾಗಾಗಿ ಅವರ ಹೊರತಾದ ಕಾಂಗ್ರೆಸ್ ಪಕ್ಷವನ್ನು ಕಲ್ಪಿಸಿಕೊಳ್ಳುವುದು ಕಷ್ಟ.

ಆದರೆ ಅವರು ಕಾಂಗ್ರೆಸ್‌ನ ಮೊದಲ ಆಯ್ಕೆ ಆಗಿರುವುದು ಬಹಳ ಕಡಿಮೆ.

ಅಂತೂ, ಕೊನೆಗೂ ಈಗ ಅವರು ಮುಖ್ಯಮಂತ್ರಿ ಕುರ್ಚಿ ಸಮೀಪಕ್ಕೆ ಬಂದಿದ್ದಾರೆ. ಮುಖ್ಯಮಂತ್ರಿಗಾದಿ ಅಲಂಕರಿಸಲು ಸಿದ್ಧರಾಗಿಯೇನೋ ನಿಂತಿದ್ದಾರೆ. ಆದರೆ...

ಇಲ್ಲಿ ಪ್ರಶ್ನೆ ಏನೆಂದರೆ, ನಿಜಕ್ಕೂ ಡಿ.ಕೆ.ಶಿವಕುಮಾರ್ ಆ ಕುರ್ಚಿಗೆ ಅರ್ಹರೇ ಅಲ್ಲವೇ ಎಂಬುದಲ್ಲ. ಆದರೆ, ಸಿದ್ದರಾಮಯ್ಯ ಅವರನ್ನು ಕುರ್ಚಿಯಲ್ಲಿ ಇರಲು ಬಿಡುವರೇ ಎನ್ನುವುದು!

ಈ ಚರ್ಚೆ ಶುರುವಾದಾಗಿನಿಂದ, ಸಿದ್ದರಾಮಯ್ಯ ನವರ ಬೆಂಬಲಿಗರು, ಡಿಕೆಶಿ ಅವರ **'ಭ್ರಷ್ಟಾಚಾರದ ಟ್ಯಾಗ್'** ಅನ್ನು ಮೇಲೆತ್ತಿ ತೋರಿಸುತ್ತಲೇ ಇದ್ದಾರೆ. ತನ್ಮೂಲಕ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹರಲ್ಲ ಎಂದು ಒತ್ತಿ ಒತ್ತಿ ಹೇಳುತ್ತಲೇ ಬಂದಿದ್ದಾರೆ.

ಯಾವುದೇ ಕಳಂಕ ಇಲ್ಲದ ಸಿದ್ದರಾಮಯ್ಯ ಅತ್ಯುತ್ತಮ ಮತ್ತು ಸುರಕ್ಷಿತ ಆಯ್ಕೆ ಎಂದು ಅವರೆಲ್ಲಾ ಪ್ರತಿಪಾದಿಸುತ್ತಾ ಬಂದಿದ್ದಾರೆ. ಆದರೆ, ಅದು ನಿಜವೇ?

ಇದು, ಮೋದಿಯವರು ಒಮ್ಮೆ ಮಾಜಿ ಪ್ರಧಾನಮಂತ್ರಿ ಮನಮೋಹನಸಿಂಗ್ ಅವರ ಬಗ್ಗೆ ಹೇಳಿದ್ದ ಮಾತನ್ನು ನೆನಪಿಗೆ ತರುತ್ತದೆ.

ರೈನ್‌ಕೋಟ್ ಹಾಕಿಕೊಂಡು ಸ್ನಾನ ಮಾಡುವುದು ಮನಮೋಹನ ಸಿಂಗ್‌ರಿಗೆ ಮಾತ್ರ ಗೊತ್ತಿದೆ ಎಂದು ಮೋದಿ ಹಿಂದೊಮ್ಮೆ ಲೇವಡಿ ಮಾಡಿದ್ದರು.

ಸುತ್ತಲಿರುವ ಜನರು ಭ್ರಷ್ಟಾಚಾರ ನಡೆಸುವಾಗ ಕಣ್ಮುಚ್ಚಿ ಕುಳಿತು, ತಾನು ಎಷ್ಟು ಶುದ್ಧವಾಗಿದ್ದರೇನು ಎಂಬುದು ಮೋದಿ ಅವರ ಮಾತಿನ ಒಳಾರ್ಥ. ಇದು ಸಿದ್ದರಾಮಯ್ಯರಿಗೂ ಅಕ್ಷರಶಃ ಅನ್ವಯವಾಗುತ್ತದೆ.

ಸಿದ್ದರಾಮಯ್ಯನವರು ಭ್ರಷ್ಟರಲ್ಲ ಎಂಬ ಮಾತನ್ನು ಒಪ್ಪೋಣ. ಆದರೆ ಅವರ ಸುತ್ತ ಇರುವ ಜನರ ಬಗ್ಗೆ ಇದೇ ಮಾತನ್ನು ಹೇಳಲಾದೀತೆ?

ಮುಡಾ, ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ, ಅರ್ಕಾವತಿ ಬಡಾವಣೆಯ ಅವ್ಯವಹಾರ, ವರ್ಗಾವಣೆ ಕಮಿಷನ್ ಆರೋಪ ಎಲ್ಲವೂ ಅವರ ಆಡಳಿತಾವಧಿಯಲ್ಲಿಯೇ ಆಗಿದ್ದು.

ಇತ್ತೀಚೆಗೆ ಹೈಕಮಾಂಡ್ ಸೂಚನೆಯಂತೆ ರಾಜೀನಾಮೆ ಸಲ್ಲಿಸಿದ ನಂತರ ಸಿದ್ದರಾಮಯ್ಯನವರು, ನನ್ನ ರಾಜಕೀಯ ಜೀವನ ತೆರೆದ ಪುಸ್ತಕದಂತೆ, ನಾನು ಎಂದಿಗೂ ನನ್ನ ಮೌಲ್ಯಗಳು, ಆದರ್ಶಗಳೊಂದಿಗೆ ರಾಜಿಯಾಗಿಲ್ಲ ಎಂದು ಹೇಳಿಕೆ ನೀಡಿದರು.

ಹೌದೇ, ಅವರ ಹೇಳಿಕೆಯನ್ನು ಒಪ್ಪಬಹುದೇನೋ?

ಒಂದಾನೊಂದು ಕಾಲದಲ್ಲಿ ಸಿದ್ದರಾಮಯ್ಯನವರು ಸಮಾಜವಾದಿ ಮತ್ತು ಜಾತ್ಯಾತೀತ ನಾಯಕರಾಗಿದ್ದರು. ಒಂದೊಮ್ಮೆ ಸುಧಾರಣಾವಾದಿಯೂ ಆಗಿದ್ದರು. ಹಿಂದುಳಿದ ವರ್ಗಗಳ ಮೇಲೆತ್ತುವುದನ್ನು ತಮ್ಮ ಧ್ಯೇಯವಾಗಿಸಿಕೊಂಡಿದ್ದರು. ಆದರೆ ಆ ಸಿದ್ದರಾಮಯ್ಯ ಈಗ ಕಾಣೆಯಾಗಿದ್ದಾರೆ.

> “ ಈ ಚರ್ಚೆ ಶುರುವಾದಾಗಿನಿಂದ, ಸಿದ್ದರಾಮಯ್ಯನವರ ಬೆಂಬಲಿಗರು, ಡಿಕೆಶಿ ಅವರ 'ಭ್ರಷ್ಟಾಚಾರದ ಟ್ಯಾಗ್' ಅನ್ನು ಮೇಲೆತ್ತಿ ತೋರಿಸುತ್ತಲೇ ಇದ್ದಾರೆ. ತನ್ಮೂಲಕ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹರಲ್ಲ ಎಂದು ಒತ್ತಿ ಒತ್ತಿ ಹೇಳುತ್ತಲೇ ಬಂದಿದ್ದಾರೆ.

ಈಗಿನ ಸಿದ್ದರಾಮಯ್ಯ ಆದರ್ಶಗಳನ್ನೆಲ್ಲಾ ಬದಿಗೊತ್ತಿ, ಚುನಾವಣಾ ಲೆಕ್ಕಾಚಾರವನ್ನೇ ಉಸಿರಾಗಿಸಿಕೊಂಡಿದ್ದಾರೆ.

ಇಂದು ಸಮಾಜವಾದಿ ಧೋರಣೆಯನ್ನು ಚುನಾವಣೆಯ ಸಮಯಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ. ಉಳಿದಂತೆ, ಜನತಂತ್ರ ಸೋಗಿನಲ್ಲಿ ದುಬಾರಿ ವಾಚುಗಳು, ಕಾರುಗಳು ಮತ್ತು ಬ್ರಾಂಡೆಡ್ ಶೂಗಳ ಧರಿಸುವುದರಲ್ಲಿ ಕಳೆದುಹೋಗಿದ್ದಾರೆ.


ಇದರ ಜೊತೆಗೆ ಲೋಕಾಯುಕ್ತವನ್ನು ಬಲಗೊಳಿಸುವುದರ ಬದಲು ಕೊಂದು ಹಾಕಿದರು. ಟಿಪ್ಪು ಜಯಂತಿ ಆಚರಣೆಯ ಮೂಲಕ ಸಮಾಜವನ್ನು ಒಡೆದರು. ಲಿಂಗಾಯತ ಸಮಾಜವನ್ನು ವಿಭಜಿಸಿ, ರಾಜಕೀಯವಾಗಿ ದುರ್ಬಲಗೊಳಿಸಲು ಪ್ರಯತ್ನಿಸಿದರು.

ಇವೆಲ್ಲಾ ಒಬ್ಬ ಸುಧಾರಣಾವಾದಿಯ ವರ್ತನೆಗಳಲ್ಲ. ಇಂತಹವನ್ನು ಚುನಾವಣೆಯನ್ನು ಗೆಲ್ಲಲು ಏನನ್ನಾದರೂ ಮಾಡುವೆ ಎಂಬ ಮನಃಸ್ಥಿತಿಯುಳ್ಳವರು ಮಾತ್ರ ಮಾಡಬಲ್ಲರು.

ಈ ಮೇಲ್ಕಂಡ ಎಲ್ಲ ಕ್ರಮಗಳು ಸಿದ್ದರಾಮಯ್ಯನವರ ಬಗ್ಗೆ ಜನತೆಯಲ್ಲಿ ನಿರಾಶೆ ತಂದಿದೆ.

ಜಾತಿ ಸಮುದಾಯಗಳ ಹೊರತಾಗಿ, ಕರ್ನಾಟಕದ ಜನತೆಯ ಕಣ್ಮಣಿಯಾಗುವ ಎಲ್ಲ ಅವಕಾಶಗಳೂ ಸಿದ್ದರಾಮಯ್ಯನವರಿಗೆ ಯಥೇಚ್ಛವಾಗಿ ಇತ್ತು. ಅವೆಲ್ಲದರ ಮೂಲಕ ಅವರು ಒಬ್ಬ ನಿಜವಾದ ಜಾತ್ಯಾತೀತ ನಾಯಕರಾಗಿ ಹೊರಹೊಮ್ಮಬಹುದಿತ್ತು.

ಬದಲಿಗೆ, ಮಗನಿಗಾಗಿ ಲಾಬಿ ನಡೆಸಿದ ಕೇವಲ ಒಬ್ಬ 'ಅಹಿಂದ' ನಾಯಕರಾಗಿ ಜನರ ನೆನಪಲ್ಲಿ ಉಳಿಯುತ್ತಾರೆ. ರಾಜ್ಯದ ಖಜಾನೆಯನ್ನು ಬರಿದಾಗಿಸಿ, ರಾಜ್ಯವನ್ನು ಸಾಲದ ಸುಳಿಯಲ್ಲಿ



> “ ಒಂದಾನೊಂದು ಕಾಲದಲ್ಲಿ ಸಿದ್ದರಾಮಯ್ಯನವರು ಸಮಾಜವಾದಿ ಮತ್ತು ಜಾತ್ಯಾ ತೀತ ನಾಯಕರಾಗಿದ್ದರು. ಒಂದೊಮ್ಮೆ ಸುಧಾರಣಾ ವಾದಿಯೂ ಆಗಿದ್ದರು. ಹಿಂದುಳಿದ ವರ್ಗಗಳ ಮೇಲೆತ್ತುವುದನ್ನು ತಮ್ಮ ಧ್ಯೇಯ ವಾಗಿಸಿಕೊಂಡಿದ್ದರು. ಆದರೆ ಆ ಸಿದ್ದರಾಮಯ್ಯ ಈಗ ಕಾಣೆಯಾಗಿದ್ದಾರೆ.

ಮುಳುಗಿಸಿ, ಹೈಕಮಾಂಡ್ ಹೇಳಿತೆಂದು ಅಧಿಕಾರ ಬಿಟ್ಟುಕೊಟ್ಟವರಾಗಿ ಜನರು ಮುಂದೆ ನೆನಪಿಸಿಕೊಳ್ಳುವಂತೆ ಮಾಡಿಕೊಂಡರು.

ಇದು ಎಲ್ಲ ರಾಜಕಾರಣಿಗಳ ವರಸೆಯೇ ಬಿಡಿ. ಆದರೆ ಸಿದ್ದರಾಮಯ್ಯನವರು ಹಾಗಲ್ಲ ಎಂದು ಜನ ಅಂದುಕೊಂಡಿದ್ದಕ್ಕೆ ಅವರೂ ಅದಕ್ಕೆ ಅಪವಾದವಾಗಿ ಬಿಟ್ಟರು.

ಒಬ್ಬ ರಾಜಕಾರಣಿಯಾಗಿ ಉದಾರವಾದ, ಜೊತೆಗೆ ಸಾಮಾಜಿಕ ನ್ಯಾಯದ ಬಗ್ಗೆ ಪದೇ ಪದೆ ಉದ್ದುದ್ದ ಮಾತನಾಡುವ ಸಿದ್ಧರಾಮಯ್ಯನವರು, ತಮ್ಮ ಬಗ್ಗೆ ಕೇಳಿಬಂದ ಟೀಕೆಗಳಿಗೆ ಅಸಹನೆ ಪ್ರದರ್ಶಿಸುತ್ತಲೇ ಬಂದರು.

ಹಲವು ಮಾಧ್ಯಮಗಳು ಅವರ ಸೇಡಿನ ಮನೋಭಾವ, ಹತಾಶೆಯ ಅವರ ಉದ್ಧಟತನದ ಉತ್ತರಗಳು, ವೈಫಲ್ಯಗಳ ಒಪ್ಪದೆ ಇರುವುದನ್ನು ನೆನಪಿನಲ್ಲಿರಿಸಿಕೊಳ್ಳದೇ ಇರಲಾರರು.

ಇದೇ ಕಾರಣಕ್ಕೆ ರಾಹುಲ್ ಗಾಂಧಿ ಕರ್ನಾಟಕದ ಆಗು–ಹೋಗುಗಳ ಮೇಲೆ ಸದಾ ಕಣ್ಣಿಟ್ಟಿರಬೇಕಿದೆ.

ಈಗ ಕಾಂಗ್ರೆಸ್‌ನಲ್ಲಿ ಸದ್ಯ ಎದ್ದಿರುವ ಮೂಲ ಪ್ರಶ್ನೆ ಎಂದರೆ, ಸಿದ್ದರಾಮಯ್ಯನವರು ರಾಜ್ಯ ರಾಜಕಾರಣದಲ್ಲಿ ಸಕ್ರಿಯರಾಗಿ ಇರುವ ನಿರ್ಧಾರ ಮಾಡಿರುವುದು. ಇದು 2028ರ ಚುನಾವಣೆಗೆ ಪಕ್ಷವನ್ನು ಬಲಪಡಿಸುವುದಕ್ಕೋ ಅಥವಾ ತಮ್ಮನ್ನು ತಾವು ಬಲಪಡಿಸಿಕೊಳ್ಳುವುದಕ್ಕೊ ಎಂಬುದು.

ಜುಲೈ 2019ರಲ್ಲಿ ನಡೆದ ಸಂಗತಿಗಳು ಈ ಅನುಮಾನ ಅನಾವಶ್ಯಕವಲ್ಲ ಎಂದು ಸಾರುತ್ತವೆ.

ಆಗ ಕೆಲವು ಶಾಸಕರ ಗುಂಪು ಬಂಡಾಯವೆದ್ದಿತು. ಅವರಲ್ಲಿ ಬಹುತೇಕರು ಸಿದ್ದರಾಮಯ್ಯನವರ ನಿಷ್ಠರು. ಆಗ ಆಗಿದ್ದೇನು ಕಾಂಗ್ರೆಸ್–ಜೆಡಿಎಸ್‌ನ ಸಮ್ಮಿಶ್ರ ಸರ್ಕಾರದ ಪತನ.

ಬಂಡಾಯ ಶಾಸಕರಲ್ಲಿ ಒಬ್ಬರಾದ ಸಿದ್ದರಾಮಯ್ಯನವರ ಆಪ್ತರೂ

> “ ಇದು ಎಲ್ಲ ರಾಜಕಾರಣಿಗಳ ವರಸೆಯೇ ಬಿಡಿ!. ಆದರೆ ಸಿದ್ದರಾಮಯ್ಯನವರು ಹಾಗಲ್ಲ ಎಂದು ಜನ ಅಂದುಕೊಂಡಿದ್ದಕ್ಕೆ ಅವರೂ ಅದಕ್ಕೆ ಅಪವಾದವಾಗಿ ಬಿಟ್ಟರು.

ಆಗಿದ್ದ ಶಿವರಾಮ ಹೆಬ್ಬಾರ್ ಬಹಿರಂಗವಾಗೇ 'ನಾವು ಸಿದ್ದರಾಮಯ್ಯ ಸಲಹೆಯಂತೆ ನಡೆದಿದ್ದೆವು' ಎಂದಿದ್ದರು.

ವಿಪರ್ಯಾಸವೆಂದರೆ, ಆಗ ಸಿದ್ದರಾಮಯ್ಯನವರೇ ಆ ಸಮ್ಮಿಶ್ರ ಸರ್ಕಾರದ ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದರು. ಆಗ ಅವರಿಗೆ, ಪವರ್ ಇಲ್ಲದ ಸಮಿತಿಯ ಅಧ್ಯಕ್ಷನಾಗಿರುವುದಕ್ಕಿಂತ, ವಿರೋಧ ಪಕ್ಷದ ನಾಯಕನಾಗುವುದು ಲೇಸೆನಿಸಿತ್ತು. ಹಾಗಾಗಿ ತಮ್ಮದೇ ಮೈತ್ರಿ ಸರ್ಕಾರವನ್ನೇ ಪತನಗೊಳಿಸಿಬಿಟ್ಟರು.

ಅದು ಎಷ್ಟು ನಿಜವೋ ಸುಳ್ಳೊ ಗೊತ್ತಿಲ್ಲ. ಆದರೆ ರಾಜಕೀಯದಲ್ಲಿ ಇಂತಹ ಶಂಕೆಗಳು ಸತ್ಯಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ.

ಇಲ್ಲಿ ನಮಗೆಲ್ಲರಿಗೂ ಮನವರಿಕೆ ಆಗುವ ವಿಚಾರ ಏನೆಂದರೆ; ಸಿದ್ದರಾಮಯ್ಯರಿಗೆ ಪಕ್ಷಕ್ಕಿಂತ ಸ್ವ–ಹಿತಾಸಕ್ತಿಯೇ ಮುಖ್ಯ ಎಂಬುದು.

ಆದರೆ, ಡಿ.ಕೆ.ಶಿವಕುಮಾರ್ ಅವರ ವಿಚಾರಕ್ಕೆ ಬಂದರೆ ಹಾಗಲ್ಲ. ಯಾರು ಏನೇ ಹೇಳಲಿ, ಅವರು ಕಾಂಗ್ರೆಸ್ ಪಕ್ಷದ ಕಟ್ಟಾಳು, ಬದ್ಧ ಪಕ್ಷ ನಿಷ್ಠರು. ಸಿದ್ದರಾಮಯ್ಯನವರ ಹಾಗೆ, ಭಾರತೀಯ ಲೋಕದಳ, ನಂತರ ಜನತಾ ಪಾರ್ಟಿ, ಆನಂತರ ಜೆಡಿಎಸ್, ಕೊನೆಗೆ ಕಾಂಗ್ರೆಸ್ ಪಕ್ಷ ಹೀಗೆ ಎಲ್ಲೆಲ್ಲೋ ಅವರ ಹೆಜ್ಜೆ ಗುರುತುಗಳಿಲ್ಲ.

ಡಿಕೆಶಿ, ಬಹು ಕಾಲದಿಂದಲೂ ಕಾಂಗ್ರೆಸ್‌ನಲ್ಲೇ ನೆಲೆ ನಿಂತಿದ್ದಾರೆ. ಕಷ್ಟ ಕಾಲದಲ್ಲೂ, ತಾವು ಅವಗಣನೆಗೆ ಒಳಗಾದಾಗಲೂ ಎಲ್ಲ

> “ ಕೊನೆಗೂ, ಕಾಂಗ್ರೆಸ್ ಪಕ್ಷ ಶಿವಕುಮಾರ್ ಅವರಿಗೆ ಮನ್ನಣೆ ನೀಡುವ ನಿರ್ಧಾರಕ್ಕೆ ಬಂದು ಒಂದು ಬಹು ಮುಖ್ಯವಾದ ಸಂದೇಶವನ್ನು ಕಾಂಗ್ರೆಸ್ ಕಟ್ಟಾಳುಗಳಿಗೆ ನೀಡಿದೆ–ಅದೆಂದರೆ... ಕಾಂಗ್ರೆಸ್ ಪಕ್ಷ ಎಂದಿಗೂ ಪಕ್ಷ ನಿಷ್ಠೆಯನ್ನು ಮರೆಯುವುದಿಲ್ಲ. ನಿಷ್ಠಾವಂತರನ್ನು ನೆನಪಿನಲ್ಲಿ ಇಟ್ಟುಕೊಳ್ಳಲಾಗುವುದು ಮತ್ತು ಅದಕ್ಕೆ ಸೂಕ್ತ ಕಾಲದಲ್ಲಿ ತಕ್ಕ ಉಡುಗೊರೆಯನ್ನೂ ನೀಡಲಾಗುವುದು ಎಂದು.

ಸಮಯದಲ್ಲೂ. ಪಕ್ಷ–ಪಕ್ಷದ ನಾಯಕರ ವಿಚಾರ ಬಂದಾಗ ನೆರವಿಗೆ ಧಾವಿಸುವ ಮೂಲಕ ನಿಜವಾದ ಟ್ರಬಲ್ 'ಶೂಟರ್' ಎನಿಸಿಕೊಂಡಿದ್ದಾರೆ. ಈ ಒಂದು ಕಟಿಬದ್ಧತೆ ಅವರು ಜೈಲುವಾಸ ಅನುಭವಿಸಬೇಕಾದ ಸಂದರ್ಭಕ್ಕೂ ಎಡೆಮಾಡಿಕೊಟ್ಟಿತು ಎಂತಲೂ ಅವರ ಆಪ್ತರು ಆಗಾಗ ನೆನೆಯುತ್ತಾರೆ.

ಪರಿಶ್ರಮಪಟ್ಟು ಅಧಿಕಾರಕ್ಕೆ ತಂದ ಸರ್ಕಾರದಲ್ಲಿ ತಾವು ಕಡೆಗಣಿಸಲ್ಪಟ್ಟರೂ ಸಿದ್ದರಾಮಯ್ಯನವರಿಗೆ ನಿಷ್ಠರಾಗಿಯೇ ಇದ್ದರು.

ಕೊನೆಗೂ, ಕಾಂಗ್ರೆಸ್ ಪಕ್ಷ ಶಿವಕುಮಾರ್ ಅವರಿಗೆ ಮನ್ನಣೆ ನೀಡುವ ನಿರ್ಧಾರಕ್ಕೆ ಬಂದು ಒಂದು ಬಹು ಮುಖ್ಯವಾದ ಸಂದೇಶವನ್ನು ಕಾಂಗ್ರೆಸ್ ಕಟ್ಟಾಳುಗಳಿಗೆ ನೀಡಿದೆ–ಅದೆಂದರೆ... ಕಾಂಗ್ರೆಸ್ ಪಕ್ಷ ಎಂದಿಗೂ ಪಕ್ಷ ನಿಷ್ಠೆಯನ್ನು ಮರೆಯುವುದಿಲ್ಲ. ನಿಷ್ಠಾವಂತರನ್ನು ನೆನಪಿನಲ್ಲಿ ಇಟ್ಟುಕೊಳ್ಳಲಾಗುವುದು ಮತ್ತು ಅದಕ್ಕೆ ಸೂಕ್ತ ಕಾಲದಲ್ಲಿ ತಕ್ಕ ಉಡುಗೊರೆಯನ್ನೂ ನೀಡಲಾಗುವುದು ಎಂದು.

ಇತ್ತ, ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯನವರ ಮುಂದಿನ ನಡೆಗಳ ಮೇಲೆ ಒಂದು ಕಣ್ಣಿಟ್ಟಿರಲೇಬೇಕು. ಅದು ಅನಿವಾರ್ಯ ಮುನ್ನೆಚ್ಚರಿಕೆ.

ಈಗ ಉಳಿಯುವ ಪ್ರಶ್ನೆ, ಸಿದ್ಧರಾಮಯ್ಯ ಈ ಬದಲಾವಣೆಯನ್ನು ಗೌರವಿಸುತ್ತಾರೋ ಇಲ್ಲವೋ ಎಂಬುದಲ್ಲ. ಬದಲಿಗೆ, 2028ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಕಿಂಗ್ ಮೇಕರ್ ಆಗಿ ಹೊರ ಹೊಮ್ಮಲು ತಯಾರಿ ನಡೆಸಲಿದ್ದಾರೆಯೇ ಎಂಬುದು.

ಏನೇ ಇರಲಿ, ರಾಜಕೀಯ ತಂತ್ರ–ಕುತಂತ್ರಗಳ ವಿಷಯದಲ್ಲಿ ಸಿದ್ದರಾಮಯ್ಯ 'ಕಿಂಗ್' ಎಂಬುದು ನಿಸ್ಸಂದೇಹ.

ಹಾಗಾಗಿ ಈಗೇನೋ ಡಿ.ಕೆ.ಶಿವಕುಮಾರ್ ಅಧಿಕಾರ ಕಿರೀಟ ಧರಿಸಬಹುದು... ಆದರೆ, ನಂತರ ನಿರಾಳವಾಗಿರಬಹುದೇ? ಬಿಡಿ, ಎಲ್ಲವೂ ಸದ್ಯದಲ್ಲೇ ಗೊತ್ತಾಗಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಕ್ಕರೆ ಅದೇ ಸ್ವರ್ಗ

ಗುಂಡ : ನಾನು ಇವತ್ತು ನಿನಗೋಸ್ಕರ ಕುಡೀತಾ ಇದೀನಿ.
ತಿಮ್ಮ : ಯಾಕೋಲೆ... ಏನಾಯ್ತು?
ಗುಂಡ : ನಿನ್ನಿಂದ ತಗೊಂಡಿರೋ ಸಾಲ ಮರೆಯೋದಕ್ಕೆ.

ಮೈಸೂರು ಮಿತ್ರ
ಮಂಗಳವಾರ, ಜೂನ್ 2, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕಾಲಿಗೆ ಸಗಣಿ ಮೆತ್ತಿಕೊಂಡರೆ ಕಾಲು ತೊಳೆದುಕೊಂಡು ಹೋಗ್ತಾ ಇರಬೇಕೇ ವಿನಃ ಇಲ್ಲೆಲ್ಲ ಸಗಣಿ ಹಾಕಬಾರದೆಂದು ಎಮ್ಮೆಗೆ ಸಲಹೆ ಕೊಡಬಾರದು. ಹಾಗೆಂಯೇ ಕೆಲವರಿಗೆ ಸಲಹೆ ಮಾಡಬಾರದು.

ವೇದ ಸುಳ್ಳಾದರೂ } ಬೆಲ್ಲವಿಲ್ಲದಿದ್ದರೂ
ಗಾದೆ ಸುಳ್ಳಾಗದು } ಬೆಲ್ಲದಂತಾ ಮಾತು.

ನಿಮ್ಮ ಪತ್ರಗಳು

ರಘುಲಾಲ್ ರಾಘವನ್‌ರಿಗೆ ಧನ್ಯವಾದಗಳು


ರಾಘವನ್

ಮಾನ್ಯರೆ,

ಮೈಸೂರಿನ ಹೆಸರಾಂತ ಔಷಧಿ ಮಾರಾಟ ಮಳಿಗೆಯ ಮಾಲೀಕರಾದ ರಾಘವನ್ ಅವರು ಯಾವುದೇ ಪ್ರಚಾರದ ಗೀಳಿಲ್ಲದೇ ಅನೇಕ ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮೈಸೂರಿನ ಸಾಲುಮರಗಳಿಗೆ ಟ್ರೀ-ಗಾರ್ಡ್ ನೀಡಿ ಸಂರಕ್ಷಿಸುವುದು. ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು. ತಮ್ಮ ಔಷಧಿ ಮಳಿಗೆಯಲ್ಲಿ ರಿಯಾಯಿತಿ ದರದಲ್ಲಿ ಔಷಧಿಗಳನ್ನು ನೀಡುವುದು. ನಿರಾಶ್ರಿತರಿಗೆ ಬೆಡ್‌ಶೀಟ್ ನೀಡುವುದು, ಕೆ.ಆರ್.ಆಸ್ಪತ್ರೆ ಮುಂಭಾಗ ಶಿಥಿಲಾವಸ್ಥೆಯಲ್ಲಿ ಬೀಳುವ ಸ್ಥಿಯಲ್ಲಿದ್ದ ಸದಾ ಭಿಕ್ಷುಕರು, ಕುಡುಕರು ಮಲಗುತ್ತಿದ್ದ ಬಸ್ ಪ್ರಯಾಣಿಕರ ತಂಗುದಾಣವನ್ನು ತಮ್ಮ ವೈಯಕ್ತಿಕ ಹಣದಿಂದ ಸುಣ್ಣ ಬಣ್ಣ ಮಾಡಿಸಿ ನೂತನ ಮದುವಣ ಗಿತ್ತಿಯಂತೆ ಸಿಂಗರಿಸಿದ್ದಾರೆ. ಇದರಿಂದ ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ ತುಂಬಾ ಉಪಯೋಗವಾಗುತ್ತದೆ. ಇದನ್ನು ಸಾರ್ವಜನಿಕರು ಸೂಕ್ತ ನಿರ್ವಹಣೆ ಮಾಡಿ, ಶುಚಿಯಾಗಿ ಇಟ್ಟುಕೊಂಡು ಸಂರಕ್ಷಿಸಬೇಕು. ಮತ್ತೊಮ್ಮೆ ರಘುಲಾಲ್ ರಾಘವನ್‌ರಿಗೆ ಧನ್ಯವಾದಗಳು. ಅವರ ಜನಪರ ಕಾರ್ಯಗಳು ಹೀಗೆ ಮುಂದುವರೆಯಲಿ. **-ಜಿ.ಪಿ.ರಾಜೇಶ್ ಮತ್ತು ಸ್ನೇಹಿತರು, ವಾರ್ಡ್ ನಂ.19, ಮೈಸೂರು.**

ಗ್ರಾಹಕರೇ ಎಚ್ಚರ ಎಚ್ಚರ..

ಮಾನ್ಯರೇ

'ಮೈಸೂರು ಮಿತ್ರ'ನಲ್ಲಿ ಡಿಜಿಎಫ್ ಗೋಲ್ಡ್ ಮಾಲೀಕನ ಬಂಧನ ಸುದ್ದಿ ನೋಡಿ ಏನು ಹೇಳಬೇಕೆಂದು ತಿಳಿಯದಾಯಿತು. ಕಾರಣ ಈ ತಮಿಳುನಾಡು ಮೂಲದ ವ್ಯಕ್ತಿ ಬಂಧನಕ್ಕೆ ಇಷ್ಟು ತಡ ಆಗಿದ್ದೇಕೆ ಎಂಬ ಅನುಮಾನ ಕಾಡಿತು. ಈತ ಹಿಂದೆ ಎಸ್‌ಡಿಜೆ ಗೋಲ್ಡ್ ಅಂತ ಇಟ್ಟಿಗೆಗೂಡಿನಲ್ಲಿ, ಡಿಜಿಎಫ್ ಅಂತ ಶ್ರೀರಾಂಪುರದಲ್ಲೂ ವಂಚಿಸಿದ್ದ ಎಂಬ ಮಾಹಿತಿ ಇದೆ. ಪ್ರತಿಷ್ಠಿತ ಏರಿಯಾ ಎಂಬ ಮೈಸೂರಿನಲ್ಲಿ ಹೆಗ್ಗಳಿಕೆಯ ಕುವೆಂಪುನಗರದಲ್ಲೂ ವಿದ್ಯಾವಂತರೇ ಹೆಚ್ಚು, ಇಲ್ಲೂ ನರಸಿಂಹ ಜುವೆಲರ್ಸ್ ಎಂದು ಎಲ್ಲರಿಗೂ ಆಮಿಷ ಒಡ್ಡಿ ನಾಮ ಹಾಕಿದ್ದು ಆತನ ಬುದ್ಧಿವಂತಿಕೆಯೇ.

ಈ ನರಸಿಂಹ ಜುವೆಲರ್ಸ್ ಮುಂಭಾಗ ಪ್ರತಿದಿನ ಸಂಜೆಯಾದರೆ ಈತನ ಸಹಚರರದ್ದೇ ಕಾರುಬಾರು. ಅಲ್ಲಿ ಫುಟ್‌ಪಾತ್‌ನಲ್ಲಿ ಯಾರೂ ನಿಲ್ಲುವಂತಿರಲಿಲ್ಲ. ನಿಂತವರನ್ನು ಇವರು ಗದರಿಸಿ, ಬೆದರಿಸಿ ಕಳಿಸುತ್ತಿದ್ದರು. ಆದರೀಗ ಕಟ್ಟಡವೇ ಮೌನವಾಗಿದೆ. ಅಸಲಿಗೆ ಅಲ್ಲಿ ಜುವೆಲರಿ ಎಂದರೆ ಯಾವುದೇ ಆಭರಣಗಳೇ ಇರಲಿಲ್ಲ. ಚಿನ್ನ ತಂದವರಿಗೆ ಅಲ್ಲಿ ಮೊದಲು ಆಮಿಷದೊಂದಿಗೆ ಈತನ ಸಹಚರರು ತಲೆ ಕೆಡಿಸುತ್ತಿದ್ದರು ನಂತರ ವ್ಯವಹಾರ. ಗ್ರಾಹಕನಿಗೆ ದೋಖಾವಷ್ಟೇ. ಮುಂದೊಂದು ದಿನ ಮತ್ತೊಂದು ಮೈಸೂರಿನ ಪ್ರತಿಷ್ಠಿತ ಏರಿಯಾದಲ್ಲಿ ಮತ್ತೊಂದು ಹೆಸರಿನಲ್ಲಿ ವಂಚನೆಗೆ ಇಳಿಯಬಹುದು ಗ್ರಾಹಕರು ಎಚ್ಚರ ಎಚ್ಚರ.

-ಸುರೇಶ್‌ಕುಮಾರ್, ಕೇರ್ಗಳ್ಳಿ, ಮೈಸೂರು.

ಪ್ರಯಾಣಿಕರ ತಂಗುದಾಣ ದುರಸ್ತಿಗೊಳಿಸಿ

ಮಾನ್ಯರೇ,

ಜೆ.ಪಿ.ನಗರದ ಗೊಬ್ಬಳಿಮರ ಬಸ್ ಪ್ರಯಾಣಿಕರ ತಂಗುದಾಣವು ಶಿಥಿಲಾವಸ್ಥೆಯಲ್ಲಿದ್ದು, ಮಳೆ ಬಂದಾಗ ತಂಗುದಾಣದ ಮೇಲ್ಛಾವಣಿಯಿಂದ ನೀರು ತೊಟ್ಟಿಕ್ಕುತ್ತಿದ್ದು, ತಂಗುದಾಣದ ಆಸನದ ಮೇಲೆ ಮತ್ತು ತಂಗುದಾಣದ ಒಳಗೆ ನೀರು ನಿಂತಿರುತ್ತದೆ. ಸದರಿ ತಂಗುದಾಣವು ಸದಾ ಜನನಿಬಿಡವಾಗಿರುತ್ತದೆ.ಇನ್ನು ಕೆಲವೆ ದಿನಗಳಲ್ಲಿ ಮುಂಗಾರು ಮಳೆ ಪ್ರಾರಂಭವಾಗುತ್ತಿದ್ದು, ಅನಾಹುತಗಳು ಸಂಭವಿಸುವ ಮುನ್ನ ಸದರಿ ಬಸ್ ಪ್ರಯಾಣಿಕರ ತಂಗುದಾಣವನ್ನು ದುರಸ್ತಿಗೊಳಿಸಬೇಕಾಗಿದೆ.

ಎರಡನೇಯದಾಗಿ ಜೆ.ಪಿ.ನಗರ ಕೊನೆಯ ಬಸ್ ನಿಲ್ದಾಣದಿಂದ ನಗರ ಬಸ್ ನಿಲ್ದಾಣಕ್ಕೆ ಬೆಳಗ್ಗೆ 8.30 ರಿಂದ 9.30 ರವರೆಗಿನ ಅವಧಿಯಲ್ಲಿ ನಗರ ಸಾರಿಗೆ ಬಸ್ಸುಗಳ ಅಭಾವವಿದೆ. ಬಸ್ಸುಗಳು ಬಂದರೆ ಒಂದರ ಹಿಂದೆ ಒಂದು ಬರುತ್ತವೆ, ಇಲ್ಲದಿದ್ದರೆ ಬರುವುದೇ ಇಲ್ಲ. ಇದರಿಂದ ಶಾಲಾ- ಕಾಲೇಜು ವಿದ್ಯಾರ್ಥಿಗಳಿಗೆ, ನೌಕರರಿಗೆ ಮತ್ತು ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಅಲ್ಲದೆ ನಗರ ಸಾರಿಗೆ ಬಸ್ಸುಗಳ ವೇಳಾಪಟ್ಟಿಯನ್ನು ತಿಳಿಸುವ ಐಟಿಎಸ್ ಫಲಕಗಳು ಕಳೆದ 7 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ಪ್ರಯಾಣಿಕರು ನಗರ ಸಾರಿಗೆ ಬಸ್ಸುಗಳ ಆಗಮನದ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲದೆ ಅನಿಶ್ಚಿತತೆಯಿಂದ ಬಸ್ಸಿಗಾಗಿ ಕಾಯುವಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕಳಕಳಿಯಿಂದ ಈ ಸಮಸ್ಯೆ ಬಗೆಹರಿಸಬೇಕೆಂದು ಕೋರುತ್ತೇನೆ. **- ಸರೋಜಮ್ಮ, ನಿವೃತ್ತ ಶಿಕ್ಷಕಿ, ಜೆ.ಪಿ.ನಗರ.**

ಮೈಸೂರು ಪಾಲಿಕೆ ನಡೆ ಸ್ವಾಗತಾರ್ಹ

ಮಾನ್ಯರೇ,

ಮೈಸೂರು ಮಹಾನಗರ ಪಾಲಿಕೆಯು ಮೈಸೂರಿನೆಲ್ಲೆಡೆ ಕಸ ಮುಕ್ತವಾಗಿಸಲು ಪಣ ತೊಟ್ಟಿರುವುದು ನಿಜವಾಗಿಯೂ ಸ್ವಾಗತಾರ್ಹ. ಸಾರ್ವಜನಿಕರು ಎಲ್ಲೆಂದರಲ್ಲಿ ರಸ್ತೆ ಬದಿಯಲ್ಲಿ ಕಸ ಹಾಕುತ್ತಿದ್ದು, ಇದರಿಂದ ಮೈಸೂರಿನ ಅಂದವನ್ನು ಹಾಳು ಮಾಡುತ್ತಿದೆ. ಮೈಸೂರು ಮಹಾನಗರ ಪಾಲಿಕೆ ಎಷ್ಟೇ ಕಷ್ಟಪಟ್ಟು ಸ್ವಚ್ಛಗೊಳಿಸಿದ ಜಾಗದಲ್ಲೇ ಸಾರ್ವಜನಿಕರು ಪದೇ ಪದೆ ಕಸವನ್ನು ಹಾಕುತ್ತಿದ್ದು, ಪಾಲಿಕೆಗೆ ನುಂಗಲಾರದ ತುತ್ತಾಗಿದ್ದು ಸರಿಯಷ್ಟೆ. ಪಾಲಿಕೆ ಕೆಲವು ಕಡೆಗಳಲ್ಲಿ ಸಿಸಿ ಕ್ಯಾಮರವನ್ನು ಅಳವಡಿಸಿದ್ದರೂ ಕೆಲವು ಸಾರ್ವಜನಿಕರೂ ಮತ್ತೇ ಕಸ ಹಾಕುತ್ತಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯು ಸಾರ್ವಜನಿಕರಿಂದ ಬಿಸಾಕಲ್ಪಟ್ಟ ರಸ್ತೆ ಬದಿ ಕಸವನ್ನು ಸ್ವಚ್ಛಗೊಳಿಸಿ ಆ ಜಾಗದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲು ಕಲಾವಿದರಿಂದ ಸ್ವಚ್ಛತೆಯ ಸಂದೇಶವನ್ನು ಸಾರುವ ಚಿತ್ರಗಳನ್ನು ಬರೆಸುತ್ತಿದ್ದು ನಿಜವಾಗಿಯೂ ಪಾಲಿಕೆಯ ದಿಟ್ಟ ನಿರ್ಧಾರ ಜನರ ಪ್ರೀತಿಗೆ ಪಾತ್ರವಾಗಿದೆ.

ಕಲಾವಿದರ ಕೈ ಚಳಕದಿಂದ ಮೂಡಿಬಂದ ಸ್ವಚ್ಛತೆಯ ಸಂದೇಶ ಸಾರುವ ಚಿತ್ರಗಳು ಸಾರ್ವಜನಿಕರು ಮತ್ತದೇ ಜಾಗದಲ್ಲಿ ಕಸ ಹಾಕಲು ಮನಸ್ಸು ಬರದಂತೆ ಮಾಡುತ್ತಿರುವುದು ಉತ್ತಮ ನಡೆಯಾಗಿದೆ. ಇದರಿಂದ ಆ ಜಾಗ ಸ್ವಚ್ಛವಾಗುವುದರ ಜೊತೆಗೆ ಸಾರ್ವಜನಿಕರು ಕುಳಿತುಕೊಳ್ಳಲು ಸಹ ಯೋಗ್ಯವಾದ ಸ್ಥಳವಾಗುವುದರಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗಲಾರದು.

ಪಾಲಿಕೆಯು ಈ ಹಿಂದಿನ ರೀತಿಯ ಕಸದ ಡಬ್ಬಿ(ಸಿಮೆಂಟ್ ರಿಂಗ್) ಗಳನ್ನು ತೆಗೆದು ಮನೆ-ಮನೆ ಮುಂದೆಯೇ ಬಂದು ಸಾರ್ವಜನಿಕರಿಂದ ಕಸ ಸಂಗ್ರಹಣೆ ಮಾಡುತ್ತಿರುವುದು ಉತ್ತಮ ನಡೆಯಾದರೂ, ಕೆಲವು ಕಡೆ ಕಸ ಸಂಗ್ರಹ ವಾಹನಗಳು ಒಂದು ದಿನ ಬರದೇ ಇದ್ದರೆ ಅಥವಾ ಸಾರ್ವಜನಿಕರು ಹೊರ ಊರಿನ ಕಡೆ ಹೋದರೆ ಕಸ ಹಾಕಲು ಕಸದ ಡಬ್ಬಿ (ಸಿಮೆಂಟ್ ರಿಂಗ್) ಇಲ್ಲದೇ ಸಾರ್ವಜನಿಕರು ತುಂಬಾ ಕಷ್ಟಪಡಬೇಕಾದ ಸನ್ನಿವೇಶ ಉಂಟಾಗುತ್ತದೆ. ಮನೆಯಲ್ಲಿ ಸಮಾರಂಭ ನಡೆದಾಗ ಆ ಕಸವನ್ನು ಅನಿವಾರ್ಯವಾಗಿ ಮನೆಯ ಒಳಭಾಗದಲ್ಲೇ ಸಂಗ್ರಹಣೆ ಮಾಡಿಕೊಂಡು ಅದರ ವಾಸನೆ ಕುಡಿದುಕೊಂಡೇ ಮಲಗಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಆದ್ದರಿಂದ, ಮೈಸೂರು ಮಹಾನಗರ ಪಾಲಿಕೆಯು ಈ ಹಿಂದಿನ ರೀತಿಯ ರಸ್ತೆಯ ಬದಿಯಲ್ಲಿ ಕಸ ಹಾಕಲು ಕಸದ ಡಬ್ಬಿ (ಸಿಮೆಂಟ್ ರಿಂಗ್)ಗಳನ್ನು ಅಳವಡಿಸಿ ಪ್ರತಿದಿನವೂ ಅದನ್ನು ಸ್ವಚ್ಛಗೊಳಿಸಬೇಕಾಗಿ ಎಲ್ಲಾ ಸಾರ್ವಜನಿಕರ ಪರವಾಗಿ ಮೈಸೂರು ಪಾಲಿಕೆಯಲ್ಲಿ ಕಳಕಳಿಯಿಂದ ಕೋರುತ್ತೇನೆ.

-ಎಂ.ಕೆ.ಕಿರಣ್, ಟೆಲಿಕಾಂ ಕಾಲೋನಿ, ಮೈಸೂರು.

ಡಾ.ಮಹದೇವಪ್ಪರಿಗೆ ಡಿಸಿಎಂ ಸ್ಥಾನ ನೀಡುವಂತೆ ಅಭಿಮಾನಿಗಳ ಧರಣಿ

ತಮಗೆ ನೀಡಿದ ಖಾತೆಗಳಲ್ಲಿ ದಾಖಲೆ ಅಭಿವೃದ್ಧಿ ಮಾಡಿರುವುದನ್ನು ಹೈಕಮಾಂಡ್ ಪರಿಗಣಿಸಲು ಮನವಿ


ನೂತನ ಸರ್ಕಾರದಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಉಪಮುಖ್ಯಮಂತ್ರಿ ಮಾಡುವಂತೆ ಸೋಮವಾರ ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ಮಹದೇವಪ್ಪ ಅವರ ಬೆಂಬಲಿಗರು, ಅಭಿಮಾನಿಗಳು ಧರಣಿ ನಡೆಸಿದರು.

ಮೈಸೂರು,ಜೂ.1(ಎಂಟಿವೈ)-ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಹೆಚ್.ಸಿ.ಮಹದೇವಪ್ಪ ಅಭಿಮಾನಿಗಳ ಬಳಗ ಮತ್ತು ದಲಿತ ಸಂಘಟನೆಗಳ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಮೈಸೂರು ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಿದ ಅಭಿಮಾನಿಗಳು ನೂತನ ಸರ್ಕಾರದಲ್ಲಿ ದಲಿತ ಹಿರಿಯ ನಾಯಕ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಡಿಸಿಎಂ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ಡಾ.ಹೆಚ್.ಸಿ. ಮಹದೇವಪ್ಪ ಅವರು ಕಳೆದ ಐದು ದಶಕಗಳ ಸುದೀರ್ಘ ರಾಜಕಾರಣದಲ್ಲಿ ಐತಿಹಾಸಿಕವಾದ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಲೋಕೋಪಯೋಗಿ ಸಚಿವರಾಗಿ ರಸ್ತೆಗಳ ರಾಜ ಬಿರುದು ಪಡೆದಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿ ಸಂವಿಧಾನ ಪೀಠಿಕೆ ಓದು, ಪ್ರಜಾಪ್ರಭುತ್ವ ಉಳಿವಿಗಾಗಿ ಮಾನವ ಸರಪಳಿ ನಿರ್ಮಿಸಿ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರಕ್ಕೆ ಜಾಗತಿಕ ಮಟ್ಟದಲ್ಲಿ ಹೆಸರು ತಂದಿದ್ದಾರೆ. ಒಳ ಮೀಸಲಾತಿ ಜಾರಿ ಮಾಡುವಾಗ ಸಂವಿಧಾನದ ಆಶಯಕ್ಕೆ ಪೂರಕವಾಗಿ ನಿರ್ಧಾರ ಮಾಡಿದ್ದಾರೆ. ಪರಿಶಿಷ್ಟ ಜಾತಿ ಸಮುದಾಯಗಳ ಬಿಕ್ಕಟ್ಟನ್ನು ಬಗೆಹರಿಸಿದ್ದಾರೆ. ಕೋಮುವಾದಿ, ಮನುವಾದಿಗಳ ವಿರುದ್ಧ ತಕ್ಕ ಪ್ರತ್ಯುತ್ತರ ನೀಡಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷದ ವಿರುದ್ಧವಾಗಿ ಮಹದೇವಪ್ಪ ಎಂದೂ ನಡೆದುಕೊಂಡಿಲ್ಲ. ದಲಿತರು ಕಾಂಗ್ರೆಸ್ ಪಕ್ಷವನ್ನು ನಂಬಿರುವಷ್ಟು ಇನ್ಯಾವ ಪಕ್ಷವನ್ನು ನಂಬಿಲ್ಲ. ಕಾಂಗ್ರೆಸ್ ಪಕ್ಷವೇ ನಮ್ಮ ಬದುಕನ್ನು ಹಸನು ಮಾಡುತ್ತದೆ ಎಂದು ನಂಬಿರುವ ದಲಿತರ ಆತ್ಮ ಗೌರವಕ್ಕೆ ಧಕ್ಕೆ ತರಬೇಡಿ. ಕಾಂಗ್ರೆಸ್ ಪಕ್ಷಕ್ಕೆ ಹೃದಯವೇ ದಲಿತರು ಎಂಬುದನ್ನು ಹೈಕಮಾಂಡ್ ತಿಳಿಯಬೇಕು ಎಂದು ಹೇಳಿದರು.

ಮಹದೇವಪ್ಪರಿಗೆ ಡಿಸಿಎಂ ಸ್ಥಾನ ನೀಡಿ, ದಲಿತರು ಕಾಂಗ್ರೆಸ್ ನಂಬಿರುವುದನ್ನು ಗೌರವಿಸಬೇಕಾಗಿದೆ. ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡುವಂತೆ ಹೈಕಮಾಂಡ್‌ಗೆ ಒತ್ತಾಯಿಸಬೇಕು. ಯಾಕೆಂದರೆ ಸಿದ್ದರಾಮಯ್ಯರನ್ನು ಮಹದೇವಪ್ಪ ಯಾವತ್ತೂ ಬಿಟ್ಟುಕೊಟ್ಟಿಲ್ಲ ಎಂದರು.

ಒಂದು ವೇಳೆ ಡಾ.ಹೆಚ್.ಸಿ.ಮಹದೇವಪ್ಪರಿಗೆ ಡಿಸಿಎಂ ಸ್ಥಾನ ನೀಡದೆ ಹೋದಲ್ಲಿ ಭವಿಷ್ಯದಲ್ಲಿ ಕಾಂಗ್ರೆಸ್‌ಗೆ ಶೇ.80 ಮತ ನೀಡುವ ದಲಿತರನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಹೋರಾಟಗಾರರು ಕಾಂಗ್ರೆಸ್ ಹೈಕಮಾಂಡ್‌ಗೆ ಎಚ್ಚರಿಕೆ ನೀಡಿದರು.

ಈ ವೇಳೆ ಪ್ರತಿಭಟನೆಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ವಿ.ರಾಮಸ್ವಾಮಿ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ದಸಂಸ ವಿಭಾಗೀಯ ಸಂಚಾಲಕ ದೇವಗಳ್ಳಿ ಸೋಮಶೇಖರ್, ಮುಖಂಡರಾದ ಭರತ್ ರಾಮಸ್ವಾಮಿ, ಮರಿದೇವಯ್ಯ, ವಕೀಲರಾದ ತಿಮ್ಮಯ್ಯ, ಎ.ಆರ್.ಕಾಂತರಾಜು, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್, ಗೌರವ ಅಧ್ಯಕ್ಷ ಕಲ್ಲಹಳ್ಳಿ ಕುಮಾರ್, ಅಖಿಲ ಕರ್ನಾಟಕ ಡಾ.ಹೆಚ್.ಸಿ. ಮಹದೇವಪ್ಪರವರ ಅಭಿಮಾನಿ ಬಳಗದ ಅಧ್ಯಕ್ಷ ಹಿನಕಲ್ ನಂಜುಂಡ, ಗೌರವಾಧ್ಯಕ್ಷ ಎ.ಎನ್. ಸ್ವಾಮಿ, ಕಾರ್ಯಾಧ್ಯಕ್ಷ ಡಾ.ಬಸವರಾಜು ಕೆ.ಎನ್, ಭರತ್‌ರಾಜು, ತಿ.ನರಸೀಪುರ ತಾ.ಪಂ ಮಾಜಿ ಅಧ್ಯಕ್ಷ ಹೆಚ್.ಎನ್. ಉಮೇಶ್, ಚಲುವರಾಜು, ಭೂ ನ್ಯಾಯ ಮಂಡಳಿ ಸದಸ್ಯ ಕುಕ್ಕೂರು ಗಣೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹಿರಿಯೂರು ವೀರೇಂದ್ರ, ತಗಡೂರು ಬಿ.ಬಸವರಾಜು, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ಜಿ.ಪಂ ಮಾಜಿ ಸದಸ್ಯರಾದ ಹೊನ್ನನಾಯಕ, ಸೋಸಲೆ ಮಹದೇವಸ್ವಾಮಿ, ಮಂಡಲ ಪಂಚಾಯಿತಿ ಮಾಜಿ ಪ್ರಧಾನ ಹೆಚ್.ವಿ.ಶೇಷಾದ್ರಿ, ಬನ್ನೂರು ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.


ಗಣಪತಿ ಸಚ್ಚಿದಾನಂದ ಶ್ರೀಗಳಿಗೆ ಗುರುವಂದನೆ


ಅರಿವು ಸಂಸ್ಥೆ ವತಿಯಿಂದ ದತ್ತಪೀಠ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ 84ನೇ ವರ್ಷದ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಿತು.

ಮೈಸೂರು: ಅರಿವು ಸಂಸ್ಥೆಯ ವತಿಯಿಂದ ದತ್ತಪೀಠ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ 84ನೇ ವರ್ಷದ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ನಂಜನಗೂಡು ರಸ್ತೆಯಲ್ಲಿರುವ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ

ಗುರುಗಳು ಸಲ್ಲಿಸಿರುವ ಧಾರ್ಮಿಕ, ಆಧ್ಯಾತ್ಮಿಕ, ಸಂಗೀತ, ಆರೋಗ್ಯ, ವೈದ್ಯಕೀಯ, ಪರಿಸರ, ಅನ್ನ ದಾಸೋಹ ಧ್ಯಾನ ಇನ್ನು ಮುಂತಾದ ಸೇವೆಗಳನ್ನು ಸಮಾಜಕ್ಕೆ ನೀಡುತ್ತಾ ಬಂದಿರುವ ಪರಮ ಪೂಜ್ಯರಿಗೆ ಜೀವಮಾನದ ಸಾಧನೆಗಾಗಿ ಮೈಸೂರು ರತ್ನ ಪ್ರಶಸ್ತಿಯನ್ನು ಗುರುಗಳಿಗೆ ಸಮರ್ಪಿಸಲಾಯಿತು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳಿಗೆ ಮೈಸೂರು ರತ್ನ ಪ್ರಶಸ್ತಿ ಸಮರ್ಪಿಸುವ ಮೂಲಕ ಗುರುವಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ನಿವೃತ್ತ ಪೊಲೀಸ್ ಅಧಿಕಾರಿ ವಸಂತ್ ಕುಮಾರ್, ಮುರಳಿ, ಮಹೇಶ್ ಕುಮಾರ್ ಹಾಗೂ ಅರಿವು ಸಂಸ್ಥೆಯ ಪದಾಧಿಕಾರಿಗಳು ಹಾಜರಿದ್ದರು.

ಇಂದು ಮೈಸೂರಿನ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜೂ.1-ಬನ್ನಿಮಂಟಪ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ಕಾರ್ಯ ನಿಮಿತ್ತ ಜೂ.2ರಂದು ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಎಸ್.ಎಸ್.ನಗರ, ಕಾವೇರಿನಗರ, ಸಿದ್ದಿಖಿನಗರ, ಬನ್ನಿಮಂಟಪ 'ಬಿ' ಬಡಾವಣೆ, ಹೈವೆ ವೃತ್ತ, ಮೇದರ್ ಬ್ಲಾಕ್, ಹನುಮಂತನಗರ, ಅಲೀಮ್‌ನಗರ, ಬಾಲ ಭವನ, ಜೆ.ಎಸ್.ಎಸ್ ದಂತ ವೈದ್ಯಕೀಯ ಕಾಲೇಜು, ಸೆಂಟ್ ಜೋಸೆಫ್ ಆಸ್ಪತ್ರೆ, ಲಕ್ಷ್ಮೀಪುರ, ಸಿದ್ದಲಿಂಗಪುರ, ಕಳಸ್ತವಾಡಿ, ಶ್ಯಾದನಹಳ್ಳಿ, ನಾಗನಹಳ್ಳಿ, ಕೆ.ಆರ್ ಮಿಲ್ ಕಾಲೋನಿ ಹಾಗೂ ಸುತ್ತ-ಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಹುಟ್ಟುಹಬ್ಬದ ಶುಭಾಶಯ...


ಮಾಜಿ ಕಾರ್ಪೊರೇಟರ್ ಶ್ರೀಮತಿ ಪ್ರೇಮಾ ಶಂಕರೇಗೌಡ ಹಾಗೂ ಮಾಜಿ ಸದಸ್ಯ ಶಿವಣ್ಣ ಅವರಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಜನ್ಮದಿನದ ಶುಭಾಶಯ ಕೋರಿದರು. ಈ ವೇಳೆ ಉದ್ಯಮಿ ದೇವರಾಜ್ ಪಾಲಹಳ್ಳಿ, ಗುಣಶೇಖರ್, ಸಲೀಂ, ಮನು, ಮಹೇಶ್ ಹಾಗೂ ಇತರರು ಉಪಸ್ಥಿತರಿದ್ದರು.

ಡಿ.ಕೆ.ಶಿವಕುಮಾರ್‌ಗೆ ಅಭಿನಂದನೆ...


ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಯುವ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ನಾಗೇಶ್ ಕರಿಯಪ್ಪ, ಕೃಷ್ಣರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಹೊಯ್ಸಳ ಎಂ.ಆರ್. ಇನ್ನಿತರರು ನವದೆಹಲಿಯಲ್ಲಿ ಭೇಟಿಯಾಗಿ ಹೂಗುಚ್ಛ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು ಮಿತ್ರ

ಮಂಗಳವಾರ 2 ಜೂನ್ 2026

ದೇವೇಗೌಡರ ಮನೆಯಲ್ಲಿ ಸೂತಕದ ಛಾಯೆ ಎಂಬ ಚಲುವರಾಯಸ್ವಾಮಿ ಹೇಳಿಕೆಗೆ ತಿರುಗೇಟು

ಅವರು ದೇವೇಗೌಡರ ಮನೆಯಲ್ಲಿ ಯಾರ ಸಾವು ಬಯಸುತ್ತಿದ್ದಾರೆ?

ಮಾಜಿ ಶಾಸಕ ಸುರೇಶ್ ಗೌಡ ಪ್ರಶ್ನೆ

ಅಧಿಕಾರದ ಮದ, ಹಣದ ದರ್ಪದಿಂದ ಚಲುವರಾಯಸ್ವಾಮಿ ಭ್ರಮೆಯಲ್ಲಿದ್ದಾರೆ. ದ್ವೇಷ ರಾಜಕಾರಣ ಮಾಡುತ್ತಾ, ಭ್ರಷ್ಟಾಚಾರದಲ್ಲಿ ತೊಡಗಿ ಅಭಿವೃದ್ಧಿ ಕೆಲಸ ಮರೆತ್ತಿದ್ದಾರೆ. ದೇವೇಗೌಡರ ಕುಟುಂಬದ ಬಗ್ಗೆ ಹೀಗೆ ಮಾತನಾಡುತ್ತಿದ್ದರೆ, ಅವರ ನಾಲಿಗೆ ಕತ್ತರಿಸುವ ಸಮಯ ಬಹುಬೇಗ ಬರಲಿದೆ.
– ಸುರೇಶ್ ಗೌಡ, ಮಾಜಿ ಶಾಸಕ


ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಕೆ.ಸುರೇಶ್‌ಗೌಡ ಮಾತನಾಡಿದರು.

ಮಂಡ್ಯ, ಜೂ.1– ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆಯಾಗುತ್ತಿದ್ದು, ಅದು ಕಾಂಗ್ರೆಸ್ ಪಕ್ಷಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಅದರೆ ಕೆಲ ಕಿಡಿಗೇಡಿಗಳು ನಾಯಕತ್ವ ಬದಲಾವಣೆ ವಿಚಾರದಲ್ಲಿ ದೇವೇಗೌಡರ ಮನೆಯಲ್ಲಿ ಸೂತಕದ ಛಾಯೆ ಆವರಿಸಿದೆ ಎಂದು ಬಾಲಿಶ ಹೇಳಿಕೆ ನೀಡಿದ್ದು, ಗೌಡರ ಮನೆಯಲ್ಲಿ ಅವರು ಯಾರ ಸಾವನ್ನು ಬಯಸುತ್ತಿದ್ದಾರೆ ಎಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ಕಿಡಿಕಾರಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಜನ ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿದ್ದು, ಈವರೆಗೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಟ್ಟಿದ್ದಾರೆ. ಆದರೆ ಡಿ.ಕೆ. ಶಿವಕುಮಾರ್ ಸಂಪುಟ ಸೇರಲು ಜೊತೆಗೆ ಯಾರನ್ನೋ ಮೆಚ್ಚಿಸಲು ನಾಗಮಂಗಲ ಶಾಸಕ ಎನ್.ಚಲುವರಾಯಸ್ವಾಮಿ ದೇವೇಗೌಡರ ಕುಟುಂಬದ ಬಗ್ಗೆ ಲಘು ಹೇಳಿಕೆ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ಸುದ್ದಿಗಾರರೊಂದಿಗೆ ಮಾತನಾಡುವಾಗ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಿರುವ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮನೆಯಲ್ಲಿ ಸೂತಕದ ಛಾಯೆ ಆವರಿಸಿದೆ ಎಂದು ಚಲುವರಾಯಸ್ವಾಮಿ ಹೇಳಿದ್ದಾರೆ. ನಮ್ಮಲ್ಲಿ ಒಂದು ಮನೆಯಲ್ಲಿ ಸೂತಕದ ಛಾಯೆ ಆವರಿಸಿದೆ ಎಂದರೆ ಅಲ್ಲಿ ಸಾವಾಗಿದೆ ಎಂದರ್ಥ. ಹಾಗಾದರೆ ಚಲುವರಾಯಸ್ವಾಮಿ ದೇವೇಗೌಡರ ಮನೆಯಲ್ಲಿ ಯಾರ ಸಾವನ್ನು ಬಯಸುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಮಾಜಿ ಪ್ರಧಾನಿ ದೇವೇಗೌಡರ ಇತಿಹಾಸ ಅವರ ಪಕ್ಕದಲ್ಲಿಯೇ ಇದ್ದ ಚಲುವರಾಯಸ್ವಾಮಿಗೆ ಸ್ವಲ್ಪವೂ ಗೊತ್ತಿಲ್ಲ. ಎಸ್.ಎಂ.ಕೃಷ್ಣ ಅವರು ರಾಜಕೀಯ ಸಂಕಷ್ಟದಲ್ಲಿದ್ದಾಗ ಅವರನ್ನು ರಾಜ್ಯಸಭೆಗೆ ಕಳುಹಿಸಲು ಸಹಾಯ ಮಾಡಿದ್ದು ದೇವೇಗೌಡರು. ಎಲ್ಲಕ್ಕಿಂತ ಹೆಚ್ಚಾಗಿ ಎಸ್.ಎಂ.ಕೃಷ್ಣ 1999ರಲ್ಲಿ ಮುಖ್ಯಮಂತ್ರಿಯಾಗಲು ಹಾಗೂ ಅಧಿಕಾರ ನಡೆಸಲು ಪರೋಕ್ಷವಾಗಿ ದೇವೇಗೌಡರು ಸಹಕಾರ ನೀಡಿದ್ದಾರೆ. ಡಿ.ವಿ.ಸದಾನಂದಗೌಡರು ಮುಖ್ಯ ಮಂತ್ರಿಯಾಗಿದ್ದಾಗ ಜೊತೆಗೆ ಅವಮಾನ ಆಗಿಸುವ ಸಂದರ್ಭ ಬಂದಾಗ ಪಕ್ಷಾತೀತವಾಗಿ ಅವರ ಪರ ನಿಂತಿದ್ದು ದೇವೇಗೌಡರು ಎಂಬುದು ಇತಿಹಾಸ ಎಂದು ಸ್ಪಷ್ಟಪಡಿಸಿದರು.

ಒಕ್ಕಲಿಗ ಸಮುದಾಯದ ಎಸ್.ಎಂ.ಕೃಷ್ಣ, ಡಿ.ವಿ.ಸದಾನಂದಗೌಡ ಅವರಿಗೆ ಮುಖ್ಯಮಂತ್ರಿಯಾಗುವಾಗ ಸಹಕಾರ ನೀಡಿದ್ದ ದೇವೇಗೌಡರು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಿರುವಾಗ ಏಕೆ ವಿರೋಧ ಮಾಡುತ್ತಾರೆ. ಜೊತೆಗೆ ಅವರ ಮನೆಯಲ್ಲಿ ಸೂತಕದ ಛಾಯೆ ಹೇಗೆ ಮೂಡುತ್ತದೆ. ಒಕ್ಕಲಿಗ ನಾಯಕರು ಅಧಿಕಾರಕ್ಕೇರುವಾಗ ಎಂದೂ ವಿರೋಧಿಸಿದ ಇತಿಹಾಸವಿಲ್ಲ ಎಂದು ಹೇಳಿದರು.

ಈ ಹಿಂದೆ ಮಂಡ್ಯ ಜಿಲ್ಲೆಯ ಎಚ್.ಕೆ. ವೀರಣ್ಣಗೌಡರು, ನಾಗೇಗೌಡರು, ಜಿ. ಮಾದೇಗೌಡರ ಮನೆಗೆ ಸಚಿವ ಸ್ಥಾನಗಳು ಹುಡುಕಿ ಬರುತ್ತಿದ್ದವು. ಆದರೆ ಚಲುವರಾಯಸ್ವಾಮಿ ಸಚಿವ ಸ್ಥಾನ ಪಡೆಯಲು ದೇವೇಗೌಡರ ಕುಟುಂಬದ ವಿರುದ್ಧ ಮಾತನಾಡುತ್ತಿದ್ದಾರೆ. ಅಧಿಕಾರಕ್ಕಾಗಿ ಇಂಥ ನಾಟಕಗಳನ್ನು ಮಾಡಬೇಕೇ ಎಂದು ಪ್ರಶ್ನಿಸಿದರು.

ಮಂಡ್ಯ ಮನ್‌ಮುಲ್‌ನಲ್ಲಿ ಜೆಡಿಎಸ್ ಅಧಿಕಾರದಲ್ಲಿದ್ದಾಗ ಹಾಲು ಹಗರಣ ಅಂದಿನ ಅಧ್ಯಕ್ಷ ಬಿ.ಆರ್.ರಾಮಚಂದ್ರು ಹೊರಗೆ ತಂದಿದ್ದರು. ಈ ಬಗ್ಗೆ ಸಮಗ್ರ ತನಿಖೆ ಮಾಡಿಸುವುದಾಗಿ ಇದೇ ಚಲುವರಾಯಸ್ವಾಮಿ ಬೊಬ್ಬೆ ಹೊಡೆದಿದ್ದರು. ಇದೀಗ ಅವರ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದರೂ ಮನ್‌ಮುಲ್ ಹಗರಣದ ಬಗ್ಗೆ ತನಿಖೆಯೇ ನಡೆದಿಲ್ಲ ಏಕೆ ಎಂದು ಪ್ರಶ್ನಿಸಿದರು.

ನಾಗಮಂಗಲದಲ್ಲಿ ನಡೆದಿರುವ ಭೂ ಹಗರಣಕ್ಕೆ ಸಂಬಂಧಿಸಿದಂತೆ ಕನಿಷ್ಠ 2ರಿಂದ 3 ಸಾವಿರ ಹೆಕ್ಟೇರ್ ಪ್ರದೇಶ ರಿಯಲ್ ಎಸ್ಟೇಟ್ ದಂಧೆಕೋರರ ಪಾಲಾಗಿದೆ. ಈ ಪೈಕಿ ಶೇ.85ರಿಂದ 90ರಷ್ಟು ಚಲುವರಾಯಸ್ವಾಮಿ ಬೆಂಬಲಿಗರೇ ಆಗಿದ್ದಾರೆ. ಸುಮಾರು 1994ರಿಂದ ಈ ಹಗರಣ ನಡೆದು ಬಂದಿದ್ದು, 2018ರಲ್ಲಿ ನಾನು ಶಾಸಕನಾಗಿದ್ದಾಗ ಸದನದಲ್ಲಿ ಈ ಬಗ್ಗೆ ಮಾತನಾಡಿದ್ದೇನೆ. ಸಂಬಂಧಿಸಿದವರಿಗೆ ದೂರು ನೀಡಿದ್ದೇನೆ. ಆದರೂ ಕ್ರಮವಾಗಿಲ್ಲ. ನಾನು ಅಧಿಕಾರದಲ್ಲಿದ್ದಾಗ ನಮ್ಮ ಪಕ್ಷ ಅಧಿಕಾರದಲ್ಲಿರಲಿಲ್ಲ. ಶಕ್ತಿ ಮೀರಿ ಹೋರಾಟ ನಡೆಸಿದ್ದು, ಪ್ರಸ್ತುತ ಶಾಸಕ ಚಲುವರಾಯಸ್ವಾಮಿ ಅವರು ತಮ್ಮ ಸರ್ಕಾರದ ಗಮನ ಸೆಳೆದು ಭೂಗಳ್ಳರಿಗೆ ತಕ್ಕಶಿಕ್ಷೆ ಕೊಡಿಸಲಿ ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರು, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಯುವ ಘಟಕದ ಜಿಲ್ಲಾಧ್ಯಕ್ಷ ಕುಶಾಲ ರವಿ ಇದ್ದರು.

ಸರಳ, ಅರ್ಥಪೂರ್ಣವಾಗಿ ಮಾಜಿ ಸಚಿವ ಚಲುವರಾಯಸ್ವಾಮಿ ಹುಟ್ಟುಹಬ್ಬ ಆಚರಣೆ

ತಾ.ಪಂ. ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು ನೇತೃತ್ವದಲ್ಲಿ ಹಣ್ಣು-ಹಂಪಲು, ಉಪಹಾರ ವಿತರಣೆ, ದೇಗುಲದಲ್ಲಿ ವಿಶೇಷ ಪೂಜೆ


ಆಸ್ಪತ್ರೆಯಲ್ಲಿ ಹಣ್ಣು–ಹಂಪಲು ವಿತರಿಸುತ್ತಿರುವುದು.

ಮಂಡ್ಯ, ಜೂ.1– ಮಾಜಿ ಕೃಷಿ ಸಚಿವ ಹಾಗೂ ನಾಗಮಂಗಲ ಕ್ಷೇತ್ರದ ಕಾಂಗ್ರೆಸ್ ಶಾಸಕ ಎನ್.ಚಲುವರಾಯಸ್ವಾಮಿ ಅವರ ಹುಟ್ಟುಹಬ್ಬವನ್ನು ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು ಅವರ ನೇತೃತ್ವದಲ್ಲಿ ಜಿಲ್ಲಾ ಕಾಂಗ್ರೆಸ್ ಘಟಕ ಹಾಗೂ ಅವರ ಅಭಿಮಾನಿಗಳು ಸೋಮವಾರ ಅರ್ಥಪೂರ್ಣವಾಗಿ ಆಚರಿಸಿದರು.

ನಗರದ ಶ್ರೀ ವಿದ್ಯಾಗಣಪತಿ ದೇಗುಲದಲ್ಲಿ ನೂರಾರು ಮಂದಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಜಮಾಯಿಸಿ, ಚಲುವರಾಯಸ್ವಾಮಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಅವರಿಗೆ ಸಚಿವ ಸ್ಥಾನ ಸಿಗಲಿ ಎಂದು ಆಶಿಸಿದರು. ಬಳಿಕ ಮಿಮ್ಸ್ ಆವರಣದಲ್ಲಿ ರೋಗಿಗಳಿಗೆ ಹಣ್ಣು, ಹಂಪಲು ವಿತರಿಸಿ, ನಂತರ ಬೆಳಗ್ಗಿನ ಉಪಹಾರವನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಾಪಂ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು, ಸಚಿವ ಚಲುವರಾಯಸ್ವಾಮಿಗೆ ಒಳಿತಾಗಿ ಮತ್ತೆ ಸಚಿವ ಸ್ಥಾನ ಸಿಗಬೇಕೆಂಬ ನಿಟ್ಟಿನಲ್ಲಿ ದೇಗುಲದಲ್ಲಿ ಪೂಜೆ ಸಲ್ಲಿಸಿ, ಹಣ್ಣು, ಹಂಪಲು, ಉಪಹಾರ ವಿತರಿಸಿದ್ದೇವೆ. ಅವರಿಗೆ ದೇವರು ಆಯುರಾರೋಗ್ಯ, ಐಶ್ವರ್ಯ ನೀಡಿ ಕಾಪಾಡಲಿ. ಜೂ.3ರಂದು ನಡೆಯುವ ಸಿಎಂ ಪ್ರಮಾಣವಚನ ಕಾರ್ಯಕ್ರಮದಲ್ಲಿ ಅವರು ಸಹ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವಂತಾಗಲಿ ಎಂದು ಆಶಿಸಿದರು.

ಮಾಜಿ ಶಾಸಕ ಹೆಚ್.ಬಿ.ರಾಮು ಮಾತನಾಡಿ, 64ನೇ ವರ್ಷಕ್ಕೆ ಕಾಲಿಡುತ್ತಿರುವ ಚಲುವರಾಯಸ್ವಾಮಿ ಅವರಿಗೆ ದೇವರು ಆಯಸ್ಸು, ಆರೋಗ್ಯ ನೀಡಲಿ. ಸಕ್ರೀಯ ರಾಜಕಾರಣಕ್ಕೆ ಬಂದ ನಂತರ ಅವರು ಜನಸೇವೆಯಲ್ಲಿ ನಿರತರಾಗಿದ್ದಾರೆ. ಇನ್ನಷ್ಟು ಜನ ಸೇವೆ ಮಾಡಲು ಅವರಿಗೆ ಮತ್ತೆ ಸಚಿವ ಸ್ಥಾನ ಸಿಗಲಿ ಎಂದು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಮುಖಂಡರಾದ ತಗ್ಗಹಳ್ಳಿ ವೆಂಕಟೇಶ್, ಸಿ.ಎಂ.ದ್ಯಾವಪ್ಪ ವಿಜಯಲಕ್ಷ್ಮಿ, ರಘುನಂದನ್, ಹಾಲಹಳ್ಳಿ ಅಶೋಕ್, ಸೋಮಶೇಖರ್, ಚಂದಗಾಲು ವಿಜಯ್ ಕುಮಾರ್, ದೀಪಕ್, ಸುಂಡಹಳ್ಳಿ ಮಂಜುನಾಥ್, ಅಭಿಲಾಶ್, ಸಂದೇಶ್, ಕಂಬದಹಳ್ಳಿ ಮುಟ್ಟಸ್ವಾಮಿ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಸೇವಾ ಕಾರ್ಯಕ್ರಮಗಳ ಮೂಲಕ ಹುಟ್ಟುಹಬ್ಬ ಆಚರಣೆ

ಮಳವಳ್ಳಿ, ಜೂ.1– ನಗರದ ಭಗವಾನ್ ಬುದ್ಧ ಸಾಮಾಜಿಕ ಹಾಗೂ ಶೈಕ್ಷಣಿಕ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಡಾ.ಯಮದೂರು ಸಿದ್ದರಾಜು ಅವರ ಹುಟ್ಟುಹಬ್ಬ



ಅಂಗವಾಗಿ ಜೂ.2ರಂದು ಬೆಳಗ್ಗೆ 11 ಗಂಟೆಗೆ ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಸಂಸದ ಯದುವೀರ್ ಉದ್ಘಾಟಿಸಲಿದ್ದಾರೆ. ಈ ವೇಳೆ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಲಿದ್ದು, ಅನೇಕ ಗಣ್ಯರು ಕಾರ್ಯ ಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಲೆ ದಡದಲ್ಲಿ ಕೂತು ಕುಡಿದ ಬಳಿಕ ಜಲಸಮಾಧಿಯಾದ ವ್ಯಕ್ತಿ

ಶ್ರೀರಂಗಪಟ್ಟಣ: ನಾಲಾ ದಡದಲ್ಲಿ ಕುಳಿತು ಮದ್ಯ ಸೇವಿಸುತ್ತಿದ್ದ ಯುವಕನೋರ್ವ ನಾಲೆಗೆ ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ನಗುವನಹಳ್ಳಿ ಗ್ರಾಮದ ಬಳಿಯ ವಿರಿಜಾ ನಾಲೆಯಲ್ಲಿ ಸಂಭವಿಸಿದೆ.

ನಗುವನಹಳ್ಳಿ ಕಾಲೋನಿ ನಿವಾಸಿ ಚರಣ್ (35) ಸಾವನ್ನಪ್ಪಿರುವ ವ್ಯಕ್ತಿ. ಈತ ತನ್ನ ಸ್ನೇಹಿತ ಪವನ್ ಜೊತೆ ಭಾನುವಾರ ರಾತ್ರಿ ನಾಲೆಯ ದಡದ ಮೇಲೆ ಕುಳಿತು ಮದ್ಯ ಸೇವಿಸುತ್ತಿದ್ದಾಗ ಈ ದುರಂತ ಸಂಭವಿಸಿದೆ. ಸೋಮವಾರ ಬೆಳಿಗ್ಗೆ ಶವ ಪತ್ತೆಯಾಗಿದೆ. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಎಸ್‌ಟಿಜಿ ಕಾಲೇಜಲ್ಲಿ ವಿದ್ಯಾರ್ಥಿಗಳು–ಪೋಷಕರ ಅಭಿಯಾನ

ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ 10 ಗ್ರಾಂ ಚಿನ್ನದ ನಾಣ್ಯ ನೀಡಿ ಸನ್ಮಾನಿಸಿದ ಸಿಎಸ್‌ಪಿ


ಪ್ರತಿಭಾವಂತರಿಗೆ ಚಿನ್ನದ ನಾಣ್ಯ ನೀಡಿ ಅಭಿನಂದಿಸುತ್ತಿರುವ ಸಿ.ಎಸ್.ಪುಟ್ಟರಾಜು.

ಚಿನಕುರಳಿ: ಇಲ್ಲಿನ ಎಸ್‌ಟಿಜಿ ಕಾಲೇಜಿನಲ್ಲಿ ಭಾನುವಾರ ಪ್ರಥಮ ಪಿಯುಸಿ ವಿದ್ಯಾರ್ಥಿಗಳ–ಪೋಷಕರ ಅಭಿಯಾನ ಹಾಗೂ ಕಾಲೇಜು ಪ್ರಾರಂಭೋತ್ಸವ ಕಾರ್ಯಕ್ರಮ ನಡೆಸಲಾಯಿತು.

ಈ ಸಂದರ್ಭದಲ್ಲಿ ಸಾವಿರಾರು ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ವೇಳೆ 2024–25ನೇ ಶೈಕ್ಷಣಿಕ ಸಾಲಿನಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸ್ಟೆತಸ್ಕೋಪ್ ಹಾಗೂ ಏಪ್ರಾನ್ ನೀಡಿ ಗೌರವಿಸಲಾಯಿತು.

2025–26ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಸಂಸ್ಥಾಪಕರು ಹಾಗೂ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರು ತಲಾ 10 ಗ್ರಾಂ ಚಿನ್ನದ ನಾಣ್ಯ ನೀಡಿ ಗೌರವಿಸಿದರು.

ನಂತರ ಮಾತನಾಡಿ ಎಸ್‌ಟಿಜಿ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಶ್ರಮಿಸುತ್ತಿದೆ. ಅದಕ್ಕಾಗಿ ಪೂರಕವಾದ ಅತ್ಯುತ್ತಮ ಸೌಲಭ್ಯವನ್ನು ಒದಗಿಸಿ ಅನುಭವಿ ಉಪನ್ಯಾಸಕರಿಂದ ಬೋಧನೆ ಮಾಡಿಸಲಾಗುತ್ತಿದೆ. ಪೋಷಕರು ಮಕ್ಕಳ ಶಿಕ್ಷಣ ಹಾಗೂ ಸುರಕ್ಷತೆಯ ಬಗ್ಗೆ ಯಾವುದೇ ಆತಂಕ ಪಡುವುದು ಬೇಡ. ನಿಮ್ಮ ಮಕ್ಕಳನ್ನು ನಮ್ಮ ಮಕ್ಕಳಂತೆ ಪಾಲನೆ ಪೋಷಣೆ ಮಾಡುವುದು ನಮ್ಮ ಜವಬ್ದಾರಿ ಎಂದರು.

ನಂತರ ಸಂಸ್ಥೆಯ ಸಿಇಓ ಶಿವರಾಜು.ಸಿ.ಪಿ ಮಾತನಾಡಿ, ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ಎಸ್‌ಟಿಜಿ ಅಕಾಡೆಮಿ ಪ್ರಾರಂಭಿಸಿ ನುರಿತ ಉಪನ್ಯಾಸಕರಿಂದ ನೀಟ್, ಸಿಇಟಿ ಹಾಗೂ ಜೆಇಇ ತರಬೇತಿಯನ್ನು ಕೊಡಿಸಲಾಗುತ್ತಿದೆ. ಈಗಾಗಲೇ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ವೈದ್ಯಕೀಯ ಹಾಗೂ ತಾಂತ್ರಿಕ ವಿಶ್ವವಿದ್ಯಾಲಯಗಳಲ್ಲಿ ಆಯ್ಕೆಯಾಗಿ ಉನ್ನತ ಶಿಕ್ಷಣ ಪಡೆಯುತ್ತಿರುವುದು ನಮ್ಮ ಪರಿಶ್ರಮಕ್ಕೆ ಸಿಕ್ಕ ಫಲ ಎಂದರು.

ಈ ವೇಳೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಸುಮಾರು 4000 ಪೋಷಕರಿಗೆ ಹೋಳಿಗೆ ಭೋಜನದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು. ಪೋಷಕರು ಬಹಳ ಸಂತೋಷದಿಂದ ಕಾರ್ಯಕ್ರಮದಲ್ಲಿ ಭಾಗಿಯಾಗಿ ತಮ್ಮ ಮಕ್ಕಳ ಶಿಕ್ಷಣಕ್ಕೆ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯೆ ನಾಗಮ್ಮ ಪುಟ್ಟರಾಜು, ಕಾಲೇಜಿನ ಪ್ರಾಂಶುಪಾಲ ಟಿ.ಮಾರುತಿ, ಆಡಳಿತಾಧಿಕಾರಿ ನಿವೇದಿತಾ ನಾಗೇಶ್, ಜೀವಶಾಸ್ತ್ರ ಮುಖ್ಯಸ್ಥ ವಿ.ಟಿ.ರಘುಸ್ವಾಮಿ, ನೀಟ್ ಮುಖ್ಯಸ್ಥ ದೇವಿಪ್ರಸಾದ್, ಜೆಇಇ ಮುಖ್ಯಸ್ಥ ವಿಜಯ್ ಪ್ರಕಾಶ್ ಹಾಗೂ ಸಿಬ್ಬಂದಿ ವರ್ಗದವರು, ಪೋಷಕರು, ವಿದ್ಯಾರ್ಥಿಗಳು ಇದ್ದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ: ಜೂ.2 ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯ ವರೆಗೆ ಕೋಲ್ಕರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದ ಪುರ ಫೀಡರ್‌ನ ಪ್ರದೇಶಗಳಾದ ಟಿ.ಮಲ್ಲಿಗೇರೆ, ತಗ್ಗಹಳ್ಳಿ, ಹಳುವಾಡಿ, ಪುರ, ಮರಸಿಂಗನಹಳ್ಳಿ, ತಿಮ್ಮನಹೊಸುರು, ಲೋಕಸರ, ಲೋಕಸರ ಫಾರಂ, ಚೀರನಹಳ್ಳಿ, ಹನಿಯಂಬಾಡಿ, ಮಂಗಲ, ಸಂತೆಕಸಲಗೆರೆ, ಹೆಬ್ಬಕವಾಡಿ, ಮತ್ತು ಕಮ್ಮನಾಯಕನಹಳ್ಳಿ ಹಾಗೂ ಈ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಮೂರನೇ ಪುಟದಿಂದ

ಶೈಕ್ಷಣಿಕ ಸಾಲಿನ ಶಾಲಾ ಪ್ರಾರಂಭೋತ್ಸವ

ಶಿಕ್ಷಕಿಯರ ಬೈಕ್ ರ್‍ಯಾಲಿ, ವಿದ್ಯಾರ್ಥಿಗಳ ಕಾಲ್ನಡಿಗೆ ಹಾಗೂ ತೆರೆದ ವಾಹನದಲ್ಲಿ ಜಾಗೃತಿ ಮೆರವಣಿಗೆ ನಡೆಸುವ ಮೂಲಕ ಸಾರ್ವಜನಿಕರ ಗಮನ ಸೆಳೆಯಲಾಯಿತು. ಮೆರವಣಿಗೆಯಲ್ಲಿ ತಮಟೆ ಸದ್ದಿಗೆ ಕುಣಿಯುತ್ತಾ, ಜಾಗೃತಿ ಸಂದೇಶ ಗಳನ್ನು ಹಿಡಿದು ನೂರಾರು ವಿದ್ಯಾರ್ಥಿಗಳು ಸಾಗಿದರೆ, ತೆರೆದ ವಾಹನದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆ ಕಾಲೇಜು ವಿಭಾಗದ ಪ್ರಾಂಶುಪಾಲ ಗುಬ್ಬಿಗೂಡು ರಮೇಶ್ ಗಮನ ಸೆಳೆದರು.

ಮೂಗು ಮುರಿಯುವ ಕಾಲ ದೂರ: ನಂತರ ಕೆಪಿಎಸ್ ಶಾಲೆಯ ಎಲ್‌ಕೆಜಿ ಮತ್ತು ಯುಕೆಜಿ ತರಗತಿ ಕೊಠಡಿಯಲ್ಲಿ ಸರಸ್ವತಿ ಪೂಜೆ ನಡೆಸಿ, ಪುಟಾಣಿಗಳ ಕೈಯಿಂದ ಅಕ್ಷರಾಭ್ಯಾಸ ಮಾಡಿಸ ಲಾಯಿತು. ಬಳಿಕ ವಿದ್ಯಾಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಣೆ ಮಾಡಿದ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಸರ್ಕಾರಿ ಶಾಲೆ ಎಂದರೆ ಮೂಗು ಮುರಿಯುವ ಕಾಲ ಈಗ ದೂರವಾಗಿದೆ. ಗುಣಮಟ್ಟದ ಶಿಕ್ಷಣ ಮತ್ತು ಅತ್ಯಾಧುನಿಕ ಸೌಲಭ್ಯಗಳ ಮೂಲಕ ಸರ್ಕಾರಿ ಶಾಲೆಗಳಿಂದು ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುತ್ತಿವೆ ಎಂದರು.

ಮಕ್ಕಳಿಗೆ ಪ್ರಾಯೋಗಿಕ ಜ್ಞಾನ: 2023ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರ್ಕಾರಿ ಶಾಲೆಯ ಕೇವಲ ನಾಲ್ಕು ವಿದ್ಯಾರ್ಥಿಗಳು 620 ಅಂಕ ಪಡೆದಿದ್ದರು. ಆದರೆ, ಈ ವರ್ಷ 620 ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುವುದು ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ಹೊಸ ಕಟ್ಟಡಗಳು, ಅತ್ಯಾಧುನಿಕ ಶೌಚಾಲಯಗಳು ಮತ್ತು ಪೂರಕವಾದ ಶೈಕ್ಷಣಿಕ ವಾತಾವರಣ ನಿರ್ಮಾಣವಾಗಿದೆ. ಖಾಸಗಿ ಸಹ ಭಾಗಿತ್ವದಲ್ಲಿ ಸರ್ಕಾರಿ ಶಾಲೆಗಳಲ್ಲಿ 'ಸ್ಟೆಮ್ ಲ್ಯಾಬ್'ಗಳ ಸ್ಥಾಪನೆಯಾಗಿದ್ದು, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನ ಲಭ್ಯವಾಗುತ್ತಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಗಳಿಸುವುದರಲ್ಲಿ, ರಜೆ ಮುಗಿಸಿ ಮಕ್ಕಳ ಮರಳಿ ಶಾಲೆಗೆ ಬರುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಅದರಂತೆ ಶಿಕ್ಷಕರು ಕೂಡ ಬಹಳ ಉತ್ಸಾಹದಿಂದ ಆಗಮಿಸಿದ್ದು, ಮಕ್ಕಳ ಉಜ್ವಲ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಶ್ರಮ ಅನನ್ಯ ಎಂದು ಸ್ಮರಿಸಿದರು.

ಮೈಸೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಶ್ರೀಕಂಠಸ್ವಾಮಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎಂ.ಎಸ್.ವಿಜಯ್ ಕುಮಾರ್, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಬಿ.ಸುರೇಶ್, ಕುವೆಂಪು ನಗರದ ಕರ್ನಾಟಕ ಪಬ್ಲಿಕ್ ಶಾಲೆ ಕಾಲೇಜು ವಿಭಾಗದ ಪ್ರಾಂಶುಪಾಲ ಗುಬ್ಬಿಗೂಡು ರಮೇಶ್, ಶಾಲೆ ವಿಭಾಗದ ಉಪ ಪ್ರಾಂಶುಪಾಲರಾದ ಭಾಗ್ಯ ಮತ್ತಿತರರಿದ್ದರು.

ಮಂತ್ರಿ ಮಂಡಲ ರಚಿಸಿ

ಪ್ರತ್ಯೇಕ ಪಟ್ಟಿ: ರಾಹುಲ್ ಸೂಚನೆ ಮೇರೆಗೆ ಶಿವಕುಮಾರ್ ಮತ್ತು ಸಿದ್ದರಾಮಯ್ಯ ಪ್ರತ್ಯೇಕ ಪಟ್ಟಿಗಳನ್ನು ತೆಗೆದು ಕೊಂಡು ವರಿಷ್ಠರ ಅನುಮೋದನೆ ಪಡೆ ಯಲು ಇಂದು ದೆಹಲಿಗೆ ತೆರಳಿದರು.

ಉಭಯ ನಾಯಕರು ವಿಶೇಷ ವಿಮಾನ ದಲ್ಲಿ ಒಟ್ಟಾಗಿ ತೆರಳಿದ್ದು, ಈ ಸಂಬಂಧ ವರಿಷ್ಠರೊಟ್ಟಿಗೆ ಚರ್ಚಿಸಿ, ಮಂಗಳವಾರ ನಗರಕ್ಕೆ ಹಿಂತಿರುಗುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಹೊರತುಪಡಿಸಿ, ಉಳಿದ 33 ಸ್ಥಾನಗಳಿಗೆ ಕಾಂಗ್ರೆಸ್‌ನ 96 ಸದಸ್ಯರು ಮಂತ್ರಿ ಯಾಗಲು ಲಾಬಿ ನಡೆಸಿದ್ದಾರೆ. ಇದರಲ್ಲಿ ಬಹುತೇಕರು ವರಿಷ್ಠರ ಮತ್ತು ತಮ್ಮ ನಾಯಕರ ಮನವೊಲಿಸಲು ದೆಹಲಿಯಲ್ಲೇ ಬಿಡಾರ ಹೂಡಿದ್ದಾರೆ. ದೆಹಲಿಗೆ ತೆರಳುತ್ತಿದ್ದಂತೆ, ಸಿದ್ದ ರಾಮಯ್ಯ ಮತ್ತು ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜಕೀಯ ಕಾರ್ಯ ದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೆವಾಲ, ಅವರ ಜೊತೆ ಸಂಪುಟ ರಚನೆ ಕುರಿತು ಚರ್ಚೆ ನಡೆಸಿದ್ದಾರೆ. ಪಟ್ಟಿ ಅಂತಿಮಗೊಂಡ ನಂತರ ರಾಹುಲ್ ಗಾಂಧಿ ಅವರ ಒಪ್ಪಿಗೆ ಪಡೆದು, ಶಿವಕುಮಾರ್ ಬುಧ ವಾರ ಅಧಿಕಾರ ವಹಿಸಿಕೊಳ್ಳುವ ಸಂದರ್ಭ ದಲ್ಲೇ ಉಳಿದ ಸದಸ್ಯರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ರಾಜ್ಯಸಭೆ, ಪರಿಷತ್‌ಗೆ ಅಭ್ಯರ್ಥಿಗಳ ಆಯ್ಕೆ: ಮಂತ್ರಿಮಂಡಲ ರಚನೆಯ ಕಸರತ್ತಿನ ಜೊತೆಗೆ ವಿಧಾನಸಭೆಯಿಂದ ರಾಜ್ಯಸಭೆಯ ಮೂರು ಹಾಗೂ ವಿಧಾನಪರಿಷತ್ತಿಗೆ ಐವರು ಪಕ್ಷದ ಅಭ್ಯರ್ಥಿಗಳ ಆಯ್ಕೆಯು ಇದೇ ಸಂದರ್ಭದಲ್ಲಿ ಅಂತಿಮಗೊಳ್ಳಲಿದೆ.

ಸಿದ್ದರಾಮಯ್ಯ ಸಂಪುಟದಲ್ಲಿದ್ದ ಕೆಲವರನ್ನು ಪಕ್ಷಕ್ಕೆ ನಿಯೋಜಿಸಲು ಎಐಸಿಸಿ ತೀರ್ಮಾನಿಸಿದೆ, ಅದರಂತೆ ಕೆಪಿಸಿಸಿಯು ದೊಡ್ಡ ಪ್ರಮಾಣದಲ್ಲಿ ಪುನಾರಚನೆಯಾಗಲಿದೆ. ಪಕ್ಷ ಸಂಘಟನೆಗೂ ಸಂಬಂಧಿಸಿದಂತೆ ಶಿವಕುಮಾರ್, ಸಿದ್ದರಾಮಯ್ಯ ಪಕ್ಷದ ವರಿಷ್ಠರ ಜೊತೆ ಚರ್ಚಿಸಿ, ಅದಕ್ಕೂ ಒಂದು ಸ್ವರೂಪ ಪಡೆದುಕೊಳ್ಳಲಿದ್ದಾರೆ ಎನ್ನಲಾಗಿದೆ.

ಪಾಲನೆ ಮಾಡ್ತಾರೆ!

ಮೂರು ವರ್ಷಗಳ ಹಿಂದೆ ನಡೆದ ಪ್ರಕರಣದಲ್ಲಿ ಬಂಧಿಸಿ ಈಗ ಅವರನ್ನು ಜೈಲಿನಲ್ಲಿ ಇರಿಸಲಾಗಿದೆ. ಅರವತ್ತು ದಿನಗಳಿಂದ ಜೈಲಿನಲ್ಲಿದ್ದಾರೆ. ಇದು ಅವರ ವೃತ್ತಿ ಬದುಕಿಗೆ ಹಾನಿಯುಂಟು ಮಾಡಲಿದೆ. ಆದ್ದರಿಂದ, ಜಾಮೀನು ನೀಡಬೇಕು ಎಂದು ಮನವಿ ಮಾಡಿದ್ದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದ ನ್ಯಾಯಮೂರ್ತಿಗಳು, ನಮ್ಮ ಪ್ರಜಾಪ್ರಭುತ್ವದಲ್ಲಿ ಅಪರಾಧ ಎಸಗುವುದು ಸುಲಭ ಎನಿಸಿಬಿಟ್ಟಿದೆ. ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೇ ಇರುವ ಕಾರಣ ನಮ್ಮ ಕಾನೂನುಗಳು ಹಲ್ಲು ಕಳೆದುಕೊಂಡಿವೆ. ಬಹುಶಃ ಮಧ್ಯಪ್ರಾಚ್ಯ ದೇಶಗಳಲ್ಲಿ ನೀಡಲಾಗುವ ಕಠಿಣ ಶಿಕ್ಷೆಯನ್ನು ನಮ್ಮಲ್ಲೂ ತಪ್ಪಿತಸ್ಥರಿಗೆ ನೀಡುವಂತಾದರೆ ನಮ್ಮ ಜನರು ತಕ್ಕ ರೀತಿಯಲ್ಲಿ ಕಾನೂನು ಪಾಲಿಸುತ್ತಾರೆ ಎಂದು ನುಡಿದಿದ್ದಾರೆ.

ಅರ್ಜಿದಾರ ಇನ್ನೂ ನಾಲ್ಕೈದು ದಿನ ಜೈಲಿನಲ್ಲಿರಲಿ ಬಿಡಿ. ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು. ಜೈಲಿನ ಅನುಭವವಾಗಲಿ. ಯಾರಿಗೆ ಗೊತ್ತು, ಪ್ರಕರಣದಲ್ಲಿ ಒಂದೊಮ್ಮೆ ಶಿಕ್ಷೆ ವಿಧಿಸಿದರೆ ಆತ ಮತ್ತೆ ಜೈಲಿಗೆ ಹೋಗಬೇಕಾಗಬಹುದೇನೋ ಎಂದಿರುವ ನ್ಯಾಯಮೂರ್ತಿಗಳು ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿದ್ದಾರೆ.

ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 375(ಎ) (ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ) ಮತ್ತು 376ರ (ಅತ್ಯಾಚಾರ) ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣವೇನು: ತರುಣಿ (23) ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿ, ಆರೋಪಿ ಮತ್ತು ನಾನು ಕರ್ನಾಟಕದಲ್ಲಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದೆವು. 2023ರ ಜುಲೈನಲ್ಲಿ ಆತ ನನಗೆ ಪ್ರೇಮ ನಿವೇದನೆ ಮಾಡಿದ್ದ. ಅದಕ್ಕೆ ನಾನು ಸ್ಪಂದಿಸಿದ್ದೆ. ನಂತರದಲ್ಲಿ ಅವನ ನಡವಳಿಕೆ ಇಷ್ಟವಾಗದ ಕಾರಣ ಅಂತರ ಕಾಯ್ದುಕೊಂಡಿದ್ದೆ. 2023ರ ಸೆಪ್ಟೆಂಬರ್ 12ರಂದು ಆತ ನನ್ನನ್ನು ಪುಸಲಾಯಿಸಿ ನಮ್ಮ ಸಂಬಂಧದ ಬಗ್ಗೆ ಚರ್ಚಿಸಲು ತಾನಿದ್ದ ಅಪಾರ್ಟ್‌ಮೆಂಟ್‌ಗೆ ಕರೆಯಿಸಿಕೊಂಡಿದ್ದ. ಈ ವೇಳೆ ಆತ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಇದರಿಂದ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನೂ ಪಡೆದಿದ್ದೇನೆ ಎಂದು ದೂರಿನಲ್ಲಿ ವಿವರಿಸಿದ್ದರು. ಇದರ ಆಧಾರದಲ್ಲಿ ಪೊಲೀಸರು ಅರ್ಜಿದಾರರ ವಿರುದ್ಧ ಅತ್ಯಾಚಾರ ಆರೋಪದ ಪ್ರಕರಣ ದಾಖಲಿಸಿ ಬಂಧಿಸಿದ್ದರು.

ತೆರಳಿದ ಸ್ಟಾಲಿನ್ ಕುಟುಂಬ

ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಹಿನ್ನಲೆಯಲ್ಲಿ ಪೊಲೀಸರು ಕುಶಾಲನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭದ್ರತಾ ವ್ಯವಸ್ಥೆ ಹೆಚ್ಚಿಸಿದ್ದರು. ಮಡಿಕೇರಿ–ಕುಶಾಲನಗರ ಹೆದ್ದಾರಿ ಮತ್ತು ಇತರ ಸೂಕ್ಷ್ಮ ಸ್ಥಳಗಳಲ್ಲಿ ಜಿಲ್ಲಾ ಸಶಸ್ತ್ರ ಪೊಲೀಸರು ಸೇರಿದಂತೆ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಕುಶಾಲನಗರ ಪಟ್ಟಣ ವೃತ್ತ ನಿರೀಕ್ಷಕ ಪ್ರದೀಪ್ ಕುಮಾರ್ ಭದ್ರತಾ ವ್ಯವಸ್ಥೆಗಳ ಮೇಲ್ವಿಚಾರಣೆಯಲ್ಲಿದ್ದರು.

ಮಾರ್ಗ ಬದಲಾವಣೆಯ ಹೊರತಾಗಿಯೂ, ಕುಶಾಲನಗರದ ಗಣಪತಿ ದೇವಸ್ಥಾನದ ಬಳಿ ಹಿಂದೂ ಕಾರ್ಯಕರ್ತರು ಜಮಾಯಿಸಿ ಸ್ಟಾಲಿನ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆ ಶಾಂತಿಯುತವಾಗಿ ನಡೆಯಿತು ಮತ್ತು ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ. ಸ್ಟಾಲಿನ್ ಅವರ ಕುಟುಂಬ ಪರ್ಯಾಯ ಮಾರ್ಗದಲ್ಲಿ ಕೊಡಗಿನಿಂದ ಸುರಕ್ಷಿತವಾಗಿ ಸಾಗಿ, ಪಿರಿಯಾಪಟ್ಟಣದ ಮೂಲಕ ತಮಿಳುನಾಡು ಕಡೆಗೆ ಸಾಗಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಹಾವಳಿ ದೇಶದ ಹಿತಾಸಕ್ತಿಗೆ ವಿರುದ್ಧ

ಒಳಗೆ ಬರಲು ಬಿಡುತ್ತೀರಿ. ನಿಮ್ಮ ಮನೆ ಬಾಗಿಲಿಗೆ ಯಾರು ಬಂದರೂ ಆಧಾರ್ ಕಾರ್ಡ್ ಮಾಡಿಕೊಡುತ್ತೀರಾ. ನಿಮ್ಮಂಥವರಿಂದ ವ್ಯವಸ್ಥೆ ಎಲ್ಲಾ ನಾಶವಾಗುತ್ತಿದೆ. ನಕಲಿ ಆಧಾರ್ ಕಾರ್ಡ್ ಮಾಡಿಕೊಡುವುದು ವ್ಯಾಪಕವಾಗಿದೆ. ಆದರೂ ನೀವು ಯಾವುದೇ ಅಪರಾಧವಾಗಿಲ್ಲ ಎನ್ನುತ್ತಿದ್ದೀರಿ. ದೇಶದ ಬಗ್ಗೆ ಸ್ವಲ್ಪ ಕಾಳಜಿ ಇರಲಿ ಎಂದು ಕಿವಿಮಾತು ಹೇಳಿತು. ಅರ್ಜಿದಾರರು ಜೈಲಿನಲ್ಲಿರುವುದು ಸರಿಯಾಗೇ ಇದೆ. ನೀವೇನಾದರೂ ಬೇರೆ ಪರಿಹಾರ ಕೇಳಿದ್ದರೆ ಪರಿಶೀಲನೆ ಮಾಡಬಹುದಿತ್ತು ಬಿಡುಗಡೆಗಂತೂ ಆದೇಶಿಸಲಾಗದು. ಪ್ರಕರಣ ರದ್ದುಪಡಿಸಲೂ ಕೇಳಲೇಬೇಡಿ. ಒಂದು ವೇಳೆ ನಾನೇದಾರೂ ಆದೇಶ ಬರೆಯಿಸಿದರೆ ಜಾಮೀನು ಅರ್ಜಿ ಹಾಕಿಕೊಳ್ಳಲೂ ನಿಮಗೆ ಕಷ್ಟವಾಗುತ್ತದೆ. ವಿಚಾರಣೆ ಪೂರ್ಣಗೊಳಿಸಲು ಸಕ್ಷಮ ನ್ಯಾಯಾಲಯಕ್ಕೆ ಆದೇಶಿಸುತ್ತೇನೆ ಎಂದು ಎಚ್ಚರಿಸಿದರು. ಈ ಹಿನ್ನೆಲೆಯಲ್ಲಿ ವಕೀಲರು ಅರ್ಜಿ ಹಿಂಪಡೆದರು. ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಹಾಜರಿದ್ದರು.

ಸಿಬಿಟಿ ಮಾದರಿ: ಸುಪ್ರೀಂಕೋರ್ಟ್ ನಕಾರ

ಇದೇ ರೀತಿಯ ಅರ್ಜಿಗಳನ್ನು ಈಗಾಗಲೇ ವಜಾಗೊಳಿಸಲಾಗಿದೆ ಎಂದು ಹೇಳಿದ ನ್ಯಾಯ ಮೂರ್ತಿ ನರಸಿಂಹ, 'ನೀಟ್–ಯುಜಿ' ಮರುಪರೀಕ್ಷೆ ನಡೆಸಲು ಇರುವ ಸವಾಲುಗಳನ್ನು ಎತ್ತಿ ತೋರಿಸಿದರು. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯಲ್ಲಿನ (ಎನ್‌ಟಿಎ) ಸುಧಾರಣೆಗಳು ಮತ್ತು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಿಗೆ ಸಂಬಂಧಿಸಿದ ಅರ್ಜಿಗಳೊಂದಿಗೆ ಈ ಅರ್ಜಿಯನ್ನು ಜುಲೈನಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುವುದು ಎಂದು ಪೀಠವು ಹೇಳಿತು. ಮುಂದಿನ ವರ್ಷದಿಂದ (2027) 'ನೀಟ್–ಯುಜಿ'ಗೆ ಕಂಪ್ಯೂಟರ್ ಮೂಲಕ ಪರೀಕ್ಷೆ ನಡೆಸಲು ಸಿದ್ಧವಾಗಿರುವುದಾಗಿ ಎನ್‌ಟಿಎ ಈಗಾಗಲೇ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಮಕ್ಕಳ ಕಲಿಕೆಗೆ ಚಾಲನೆ...

ಬರುತ್ತವೆ ಎಂದು ತಿಳಿಸಿದರು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಶಿಕ್ಷಣದ ಮೌಲ್ಯ ಹೆಚ್ಚಾಗಿದೆ. ವಿಶೇಷವಾಗಿ 10ನೇ ತರಗತಿ ವಿದ್ಯಾರ್ಥಿಗಳು ಈಗಿನಿಂದಲೇ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಶಿಕ್ಷಕರು ಮಾಡುವ ಪಾಠ–ಪ್ರವಚನಗಳನ್ನು ಶ್ರದ್ಧೆಯಿಂದ ಕೇಳಿ, ಮುಂಬರುವ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಬೇಕು. ಆಗ ಮಾತ್ರವೇ ಮುಂದಿನ ಉನ್ನತ ಶಿಕ್ಷಣಕ್ಕಾಗಿ ಉತ್ತಮ ಕಾಲೇಜುಗಳಿಗೆ ಪ್ರವೇಶ ಪಡೆಯಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಎಲ್ಲಾ ಸೌಲಭ್ಯಗಳ ಸದ್ಬಳಕೆ ಮಾಡಿಕೊಳ್ಳಿ: ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ ಅವರು ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳ ಬೇಕು. ಸರ್ಕಾರವು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಹಲವಾರು ಉಚಿತ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿದೆ. ಈ ಎಲ್ಲಾ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಆ ಮೂಲಕ ಜ್ಞಾನವಂತರಾಗಿ, ವಿವಿಧ ಕ್ಷೇತ್ರಗಳಲ್ಲಿ ಪರಿಣಿತಿ ಪಡೆದು ದೇಶದ ಅಭಿವೃದ್ಧಿ ಕೊಡುಗೆ ನೀಡಬೇಕು ಎಂದರು. ಕುಕ್ಕರಹಳ್ಳಿ ಸರ್ಕಾರಿ ಪ್ರೌಢ ಶಾಲೆ ಮುಖ್ಯ ಶಿಕ್ಷಕ ಆರ್.ಚಂದ್ರ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕರಾದ ಎನ್.ವಿಕ್ಟೋರಿಯ, ಸುಧೀರ್, ಸುರೇಶ, ದಾನಿಗಳಾದ ವಿಶ್ವನಾಥ್, ಮಲ್ಲಮ್ಮ, ಶಶಿ ಪೈ ಮತ್ತಿತರರು ಉಪಸ್ಥಿತರಿದ್ದರು.

ಡಿ.ಕೆ.ಶಿವಕುಮಾರ್ ಶುಭ ಕೋರಿಕೆ

ಯಶಸ್ಸು ಸಿಗಲಿ. ಸರ್ಕಾರಿ ಶಾಲಾ ಮಕ್ಕಳು ಆತ್ಮ ವಿಶ್ವಾಸ ಕಳೆದುಕೊಳ್ಳಬಾರದು. ನಮ್ಮ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಕರಿದ್ದಾರೆ. ಖಾಸಗಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಷ್ಟೇ ಪ್ರತಿಭೆ ನಿಮ್ಮಲ್ಲೂ ಇದೆ ಎಂದು ತಿಳಿಸಿದರು.

ಶಾಲಿನ ಬಗ್ಗೆ ಬಳಿಕ ಚರ್ಚೆ: ಹಿಜಾಬ್‌ಗೆ ಪರ್ಯಾಯವಾಗಿ ಕೇಸರಿ ಶಾಲು ಕೊಡುವ ಕರೆ ಬಗ್ಗೆ ಕೇಳಿದಾಗ, ಕೇಸರಿ ಶಾಲು ಬೇಕೇ, ರಾಷ್ಟ್ರ ಧ್ವಜದ ಶಾಲು ಬೇಕೇ ಎಂದು ಮುಂದೆ ಚರ್ಚೆ ಮಾಡೋಣ ಎಂದು ತಿಳಿಸಿದರು.

ದೆಹಲಿ ಭೇಟಿ ಬಗ್ಗೆ ಕೇಳಿದಾಗ, ನಾನು ಹಾಗೂ ಸಿದ್ದರಾಮಯ್ಯ ಅವರು ದೆಹಲಿಗೆ ಹೋಗುತ್ತಿದ್ದೇವೆ ಎಂದು ತಿಳಿಸಿದರು.

ಐಪಿಎಲ್‌ನಲ್ಲಿ ನಮ್ಮ ತಂಡ ಗೆದ್ದಿದೆ: ಐಪಿಎಲ್ ಟೂರ್ನಿಯಲ್ಲಿ ಆರ್‌ಸಿಬಿ ವಿಜೇತವಾಗಿರುವ ಬಗ್ಗೆ ಕೇಳಿದಾಗ, ಐಪಿಎಲ್ ಫೈನಲ್ ಪಂದ್ಯ ಬೆಂಗಳೂರಿನಲ್ಲಿ ನಡೆಯಬೇಕಿತ್ತು. ನಾವು ಅದಕ್ಕೆ ಅನುಮತಿ ನೀಡಿದ್ದೆವು. ಆದರೆ, ಗುಜರಾತಿನವರು ತಮ್ಮ ಪ್ರಭಾವ ಬಳಸಿ ನಮ್ಮಿಂದ ಪಂದ್ಯ ಕಿತ್ತುಕೊಂಡಿದ್ದಾರೆ. ಮುಂದೆ ಮತ್ತೆ ಈ ರೀತಿ ಕಿತ್ತುಕೊಳ್ಳದಂತೆ ಅಗತ್ಯ ಸಿದ್ಧತೆ ಮಾಡುತ್ತಿದ್ದೇವೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ನಮ್ಮ ಕ್ರೀಡಾಪ್ರೇಮಿಗಳಿಗೆ ಅನ್ಯಾಯ ಆಗಿರಬಹುದು. ನಮ್ಮ ರಾಜ್ಯದ ಹೆಸರಿನಲ್ಲಿ ಪ್ರತಿನಿಧಿಸುವ ತಂಡ ಉತ್ತಮವಾಗಿ ಆಡಿ ಗೆದ್ದಿದ್ದಾರೆ. ನಮ್ಮೆಲ್ಲರಿಗೂ ಹೆಮ್ಮೆ ತಂದಿದ್ದಾರೆ. ಕರ್ನಾಟಕ ರಾಜ್ಯದ ಜನರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಕುಮಾರ ಕೃಪಾ ಮುಖ್ಯಮಂತ್ರಿ ನಿವಾಸ

ಕುಮಾರ ಕೃಪಾ ರಸ್ತೆಯಲ್ಲಿರುವ ಈ ಭವ್ಯ ಕಟ್ಟಡವನ್ನು ಸುಮಾರು 100 ವರ್ಷಗಳಿಗಿಂತಲೂ ಹಿಂದೆ ನಿರ್ಮಿಸ ಲಾಗಿದೆ. ಈ ಹಳೆಯ ಬಂಗಲೆಯು ಯುರೋಪಿಯನ್ ಶೈಲಿಯ ಶಾಸ್ತ್ರೀಯ ವಾಸ್ತುಶಿಲ್ಪವನ್ನು ಹೋಲುತ್ತದೆ. ಕಟ್ಟಡದಲ್ಲಿ ಎತ್ತರವಾದ ಸೀಲಿಂಗ್‌ಗಳು, ವಿಶಾಲವಾದ ವರಾಂಡಾಗಳು, ಕಮಾನು ಮಾದರಿಯ ಕಿಟಕಿಗಳು ಮತ್ತು ಸುತ್ತಲೂ ಹರಡಿರುವ ಹಸಿರು ಉದ್ಯಾನವನ ಇದರ ರಾಜ ಗಾಂಭೀರ್ಯವನ್ನು ಇಉಳಿಸಿಕೊಂಡಿವೆ. ಮೈಸೂರಿನ ದಿವಾನರಾಗಿದ್ದ ಸರ್ ಕೆ. ಶೇಷಾದ್ರಿ ಅಯ್ಯರ್ ಅವರ ನಿವಾಸವಾಗಿ ಇದನ್ನು ನಿರ್ಮಿಸಲಾಗಿತ್ತು. ಶೇಷಾದ್ರಿ ಅಯ್ಯರ್ ಅವರ ನಿಧನದ ನಂತರ, ಈ ಆಸ್ತಿಯನ್ನು ಮೈಸೂರು ರಾಜಮನೆತನದವರು ಖರೀದಿಸಿದರು. ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬೆಂಗಳೂರಿಗೆ ಬಂದಾಗ ತಂಗಲು ಮತ್ತು ಅವರ ಆಪ್ತ ಅತಿಥಿಗಳಿಗೆ ಆತಿಥ್ಯ ನೀಡಲು ಈ ಬಂಗಲೆಯನ್ನು ಬಳಸುತ್ತಿದ್ದರು.

1923 ರ ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಸುಮಾರು ನಾಲ್ಕು ತಿಂಗಳ ಕಾಲ ಗಾಂಧೀಜಿಯವರು ತಮ್ಮ ಆರೋಗ್ಯ ಸುಧಾರಣೆಗಾಗಿ ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದ್ದರು. ಆ ಸಮಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಗಾಂಧೀಜಿಯವರನ್ನು ಮೈಸೂರು ರಾಜ್ಯದ ಅಧಿಕೃತ ಅತಿಥಿಯನ್ನಾಗಿ ಘೋಷಿಸಿ, ಅವರಿಗೆ ಕುಮಾರಕೃಪಾ ಬಂಗಲೆಯಲ್ಲಿ ಉಳಿದುಕೊಳ್ಳಲು ರಾಜಾತಿಥ್ಯದ ವ್ಯವಸ್ಥೆ ಮಾಡಿಕೊಟ್ಟಿದ್ದರು.

ಗಾಂಧೀಜಿಯವರು ಇಲ್ಲಿ ತಂಗಿದ್ದಾಗ ಪ್ರತಿದಿನ ಸಂಜೆ ಇಲ್ಲಿನ ವಿಶಾಲ ಮೈದಾನದಲ್ಲಿ ಸಾರ್ವಜನಿಕ ಪ್ರಾರ್ಥನಾ ಸಭೆಗಳು ನಡೆಯುತ್ತಿದ್ದವು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ, ಇದು ಕರ್ನಾಟಕ ಸರ್ಕಾರದ ಅಧಿಕೃತ ರಾಜ್ಯ ಅತಿಥಿ ಗೃಹವಾಗಿ ಮಾರ್ಪಟ್ಟಿತು. ಈಗ ಇದನ್ನು ಮುಖ್ಯಮಂತ್ರಿಗಳ ಅಧಿಕೃತ ನಿವಾಸವಾಗಿ ಮಾರ್ಪಡಿಸಲಾಗುತ್ತಿದೆ. ಸದ್ಯ ಮುಖ್ಯಮಂತ್ರಿಗಳ ಅಧಿಕೃತ ನಿವಾಸವಾಗಿರುವ ಕಾವೇರಿ ಬಂಗ್ಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗಷ್ಟೇ ಆಧುನೀಕರಣಗೊಳಿಸಿದ್ದರು. ಹೀಗಾಗಿ ಇನ್ನು ಕೆಲವು ದಿನಗಳ ಕಾಲ ಸಿದ್ದರಾಮಯ್ಯ ಅವರು ಅದೇ ಮನೆಯಲ್ಲಿ ವಾಸಿಸಲಿ ಎಂದು ಬಯಸಿರುವ ಡಿ.ಕೆ.ಶಿವಕುಮಾರ್ ಕುಮಾರ ಕೃಪಾ ಅತಿಥಿಗೃಹವನ್ನು ತಮ್ಮ ಅಧಿಕೃತ ನಿವಾಸವಾಗಿ ಬಳಸಲು ತೀರ್ಮಾನಿಸಿದ್ದಾರೆ

IN THE COURT OF THE PRINCIPAL CIVIL JUDGE AND JMFC AT HUNSUR

O.S. No.243/2009
Sri.Mahesh : Plaintiff
V/S
Smt. Jayamma & Others : Defendants
FOR PAPER PUBLICATION,

Address for service To.

To Defendants - 7(C). Smt. Mahadevamma, D/o.Late Kalegowda, Aged about 57 years. ; 7(D). Smt.Bhagyamma, D/o Late Kalegowda, Aged about 52 years. ; 7(E). Smt. Shantamma, D/o Late Kalegowda, Aged about 48 years. Sri Chandrashekara V.K, S/o Late Kalegowda, Aged about 43 years. All the defendant 7 LRS 7(C) to 7(F)

R/a, Valalekattekoppalu village, Chinnakuruli Hobli, Pandavapura taluk, Mandya district.

Whereas the above named plaintiff has filed this suit against you for partition and separate possession over the suit schedule property. You are hereby summoned to appear in this court in person or your pleader on the 4/7/26 day of 2026 at 11 0' clock in the morning to answer the claims and you are directed to produce on that day all the documents upon which you intend to relay in support of your defense. Take notice that, in default of your appearance on the day before mentioned, the suit will be heard and determined in your absence. Given under my hand and seal of the court, this 30/4/26 By order of Court

Place: Hunsur
Date: 25-04-2026

Sd/- In the court of the Hon'ble Principal Civil Judge and JMFC at Hunsur

ಅಕ್ರಮ ಸಂಬಂಧ ಪ್ರಶ್ನಿಸಿದ ಪತ್ನಿ ಕೊಲೆ ಮಾಡಿದ ಪತಿ, ಆತನ ಸಹಚರನಿಗೆ ಜೀವಾವಧಿ ಶಿಕ್ಷೆ

ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು



ಮೈಸೂರು, ಜೂ.1(ಬಿಎಲ್‌ಯು)– ವ್ಯಾಪಾರ ಮಾಡುವ ಸ್ಥಳದಲ್ಲಿ ಬೇರೊಬ್ಬ ಮಹಿಳೆಯ ಜೊತೆ ಅಕ್ರಮ ಸಂಬಂಧ ಹೊಂದಿರುವುದನ್ನು ಆಕ್ಷೇಪಿಸಿದ ಪತ್ನಿಯನ್ನು ಕೊಲೆ ಮಾಡಿದ ಪತಿ ಹಾಗೂ ಆತನ ಸಹಚರನಿಗೆ ಮೈಸೂರು ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಮೈಸೂರಿನ ರಾಮಕೃಷ್ಣನಗರದ ನಿವಾಸಿ ಚಿಕ್ಕಣ್ಣ ಹಾಗೂ ಆತನ ಸಹಚರ ಭರತ ಬಂಧಿತ ಶಿಕ್ಷೆಗೊಳಗಾದವರು.

ಚಿಕ್ಕಣ್ಣ ಕಳೆದ 16 ವರ್ಷಗಳ ಹಿಂದೆ ರೂಪಾಳನ್ನು ಮದುವೆ ಆಗಿದ್ದನು. ಇತ್ತೀಚಿಗೆ ತಾನು ವ್ಯಾಪಾರ ಮಾಡುತ್ತಿದ್ದ ಸ್ಥಳದಲ್ಲಿ ಧನಲಕ್ಷ್ಮಿ ಎಂಬಾಕೆ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ.

ಚಿಕ್ಕಣ್ಣನ ಅಕ್ರಮ ಸಂಬಂಧದ ಬಗ್ಗೆ ಪತ್ನಿ ರೂಪ ಆಕ್ಷೇಪಿಸಿದ್ದಳು. ಈ ವಿಚಾರವಾಗಿ ರಾಜೀ ಪಂಚಾಯಿತಿ ನಡೆದು ಹಿರಿಯರು ಬುದ್ಧಿವಾದ ಹೇಳಿದ್ದರು.

ಈ ವರ್ತನೆಯನ್ನು ಪ್ರಶ್ನಿಸಿದ ಮಕ್ಕಳನ್ನು ಚಿಕ್ಕಣ್ಣ ಬಲವಂತವಾಗಿ ಕರೆದೊಯ್ದು ಹಾಸ್ಟೆಲ್‌ಗೆ ಸೇರಿಸಿದ್ದನು. ಯಾರ ಮಾತಿಗೂ ಮನ್ನಣೆ ನೀಡದ ಆತ, ಧನಲಕ್ಷ್ಮಿ ಸಹವಾಸ ಬಿಟ್ಟಿರಲಿಲ್ಲ. ಈ ವಿಚಾರವಾಗಿ ಮನೆಯಲ್ಲಿ ಆಗಾಗ ಜಗಳ ನಡೆಯುತ್ತಿತ್ತು.

ಧನಲಕ್ಷ್ಮಿ ಸಹವಾಸ ಬಿಡಬೇಕೆಂದು ರೂಪ ಒತ್ತಾಯ ಮಾಡಿದ್ದರಿಂದ ಆಕ್ರೋಶಗೊಂಡ ಚಿಕ್ಕಣ್ಣ ಆಗಸ್ಟ್ 13, 2024ರಂದು ಸೀರೆಯಿಂದ ರೂಪಾಳ ಕತ್ತು ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿದ್ದನು. ಇದು ಕೊಲೆ ಎಂದು ಅನುಮಾನ ಬರಬಾರದೆಂದು ಸಹಚರ ಭರತನ ಜೊತೆ ಸೇರಿ ರೂಪಾಳನ್ನು ನೇಣು ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ನಾಟಕ ಆಡಿದ್ದನು.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಕುವೆಂಪುನಗರ ಪೊಲೀಸ್ ಇನ್ಸ್‌ಪೆಕ್ಟರ್ ಅರುಣ್ ಅವರು ತನಿಖೆ ನಡೆಸಿ ದೋಷಾರೋಪಣಾ ವರದಿ ಸಲ್ಲಿಸಿದ್ದರು.

ಈ ಬಗ್ಗೆ ವಾದ–ಪ್ರತಿವಾದ ಆಲಿಸಿದ ಮೈಸೂರಿನ 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರೂಪಾ ಕೆ.ಎಸ್. ಅವರು ಅಭಿಯೋಜನೆ ಪರ ಹಾಜರುಪಡಿಸಿದ ಸಾಕ್ಷ್ಯಾಧಾರ ಗಳನ್ನು ಪರಿಗಣಿಸಿ ಆರೋಪಿ ಚಿಕ್ಕಣ್ಣ ಹಾಗೂ ಭರತನಿಗೆ ಜೀವಾವಧಿ ಶಿಕ್ಷೆ ಹಾಗೂ ತಲಾ 1 ಲಕ್ಷ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಅಲ್ಲದೆ ಮೊದಲ ಆರೋಪಿ ಚಿಕ್ಕಣ್ಣನ ಘೋರ ಅಪರಾಧದ ಹಿನ್ನೆಲೆಯಲ್ಲಿ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 50 ಸಾವಿರ ರೂಪಾಯಿ ದಂಡ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕರಾದ ಎ.ಎನ್.ಮಧು ಅವರು ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.

ಡಾ.ರಾಧಾಕೃಷ್ಣನ್ ಬಂಗಲೆ ನವೀಕರಣ ಸಂಬಂಧ ಮೈಸೂರು ವಿವಿ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಚರ್ಚೆ

- ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಪ್ರಸ್ತಾಪ
- ಸರ್ಕಾರ ಇಲ್ಲವೇ ದಾನಿಗಳ ಮೂಲಕ ನವೀಕರಿಸಿ
- ಶತಮಾನೋತ್ಸವ ಸಂಭ್ರಮದ ಪಾರಂಪರಿಕ ಕಟ್ಟಡ ಸಂರಕ್ಷಿಸಿ
- ನವೀಕರಣಕ್ಕೆ ಕ್ರಿಯಾ ಯೋಜನೆ ತಯಾರು
- ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಲಾಗುವುದು

ಮೈಸೂರು, ಜೂ.1 (ಬಿಎಲ್‌ಯು)– ಶಿಥಿಲಗೊಂಡಿರುವ ಮೈಸೂರಿನ ಸರಸ್ವತಿಪುರಂನ ಡಾ.ರಾಧಾಕೃಷ್ಣನ್ ಬಂಗಲೆ ಬಗ್ಗೆ ಸೋಮವಾರ ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಚರ್ಚೆ ನಡೆಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಅಕಾಡೆಮಿಕ್ ಕೌನ್ಸಿಲ್ ಸಭಾಂಗಣದಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಈ ವಿಚಾರ ಪ್ರಸ್ತಾಪಿಸಿದರು.

ರಾಧಾಕೃಷ್ಣನ್ ಬಂಗಲೆಯ ಎಡಭಾಗದ ಮೇಲ್ಛಾವಣಿ ಕುಸಿದಿರುವ ಬಗ್ಗೆ 'ಮೈಸೂರು ಮಿತ್ರ'ನ ಮೇ 18ರ ಸಂಚಿಕೆಯಲ್ಲಿ 'ಮಾಜಿ ರಾಷ್ಟ್ರಪತಿ ಡಾ.ರಾಧಾಕೃಷ್ಣನ್ ನೆಲೆಸಿದ್ದ ಬಂಗಲೆ ಭಾಗ ಕುಸಿತ' ಶೀರ್ಷಿಕೆ ವರದಿಯನ್ನು ಉಲ್ಲೇಖಿಸಿದ ವಿವೇಕಾನಂದ ಅವರು, ಶತಮಾನೋತ್ಸವದ ಸಂಭ್ರಮ ಕಂಡ ಈ ಕಟ್ಟಡವನ್ನು ಕೂಡಲೇ ನವೀಕರಣ ಮಾಡದಿದ್ದರೆ ಧರಶಾಯಿ ಆಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ವಿಶ್ವವಿದ್ಯಾನಿಲಯದ ಸ್ವಂತ ಹಣದಿಂದ ಅಥವಾ ದಾನಿಗಳಿಂದ ಕಟ್ಟಡ ನವೀಕರಣ ಮಾಡಿಸಲು ಏನಾದರೂ ಕ್ರಮ ಕೈಗೊಂಡಿದ್ದೀರಾ ಎಂದು ಪ್ರಶ್ನಿಸಿದರು. ಪಾರಂಪರಿಕ ಶೈಲಿ ಈ ಕಟ್ಟಡ ಸಂರಕ್ಷಿಸುವುದು ಅತ್ಯಗತ್ಯ. ಇದರ ನವೀಕರಣಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೆ ಹಣ ಬಿಡುಗಡೆಗೆ ನಾನು ಪ್ರಯತ್ನಿಸುತ್ತೇನೆ. ಈ ಸಂಬಂಧ ರಾಜ್ಯ ಸರ್ಕಾರದ ಸಚಿವರು, ಅಧಿಕಾರಿಗಳು ಹಾಗೂ ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ನಾವು, ನೀವೆಲ್ಲಾ ಭೇಟಿ ಮಾಡಿ ಇದರ ನವೀಕರಣಕ್ಕೆ ಮನವಿ ಮಾಡೋಣ ಎಂದು ಸಲಹೆ ನೀಡಿದರು. ಸರ್ಕಾರದ ಅನುದಾನ ವಿಳಂಬ ಆಗುತ್ತದೆ ಎನ್ನುವುದಾದರೆ ದಾನಿಗಳಿಂದ ಆದರೂ ನವೀಕರಣ ಮಾಡಿಸೋಣ ಎಂದು ವಿಧಾನ ಪರಿಷತ್ ಸದಸ್ಯ ವಿವೇಕಾನಂದ ಹೇಳಿದರು.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಅಕಾಡೆಮಿಕ್ ಕೌನ್ಸಿಲ್ ಸಭಾಂಗಣದಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ಅಕಾಡೆಮಿಕ್ ಕೌನ್ಸಿಲ್ ಸಭೆ ನಡೆಯಿತು.

ಡಾ.ರಾಧಾಕೃಷ್ಣನ್ ಬಂಗಲೆ ನವೀಕರಣಕ್ಕಾಗಿ ಕ್ರಿಯಾ ಯೋಜನೆ ತಯಾರಿಸಲಾಗುವುದು. ಬಂಗಲೆ ನವೀಕರಣಕ್ಕಾಗಿ ಈಗಾಗಲೇ ಪುರಾತತ್ವ ಇಲಾಖೆಗೆ ಪತ್ರ ಬರೆಯಲಾಗಿದೆ. ನೀವು ಸಲಹೆ ನೀಡಿದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಂಬಂಧಿಸಿದ ಸಚಿವರು ಹಾಗೂ ಅಧಿಕಾರಿಗಳನ್ನು ನಾವು, ನೀವೆಲ್ಲಾ ಸೇರಿ ಭೇಟಿ ಮಾಡಿ ಪ್ರಸ್ತಾವನೆ ಸಲ್ಲಿಸೋಣ ಎಂದು ಕುಲಪತಿ ಪ್ರೊ.ಲೋಕನಾಥ್ ಅವರು ತಿಳಿಸಿದರು.

ಈ ಹಿಂದಿನ ಕುಲಪತಿಗಳು ವಿವಿಧ ಹುದ್ದೆಗಳಿಗೆ ನೂರಾರು ಮಂದಿಯನ್ನು ನೇಮಕ ಮಾಡಿದ್ದಾರೆ. ಇದರಿಂದ ವೇತನ ಹಾಗೂ ನಿವೃತ್ತಿ ವೇತನ ನೀಡಲು ಆರ್ಥಿಕ ಸಂಕಷ್ಟ ಎದುರಾಗಿದೆ. ಅಲ್ಲದೆ ಪಿಹೆಚ್ ಡಿ ಸಂಶೋಧಕರಿಗೆ ಶಿಷ್ಯ ವೇತನ ಕೂಡ ನೀಡಲಾಗುತ್ತಿಲ್ಲ. ಈ ಸಮಸ್ಯೆ ಆದಷ್ಟು ಬೇಗ ಪರಿಹರಿಸಬೇಕು ಎಂದು ವಿವೇಕಾನಂದ ಅವರು ಈ ಸಂದರ್ಭದಲ್ಲಿ ಸಲಹೆ ನೀಡಿದರು. ಕುಲಸಚಿವರಾದ ಎಂ.ಕೆ.ಸವಿತಾ, ಪ್ರೊ.ನಾಗರಾಜು ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಅರ್ಥಪೂರ್ಣ ವಿಶ್ವ ಹಾಲು ದಿನಾಚರಣೆ

ಖಾಸಗಿ ಕಂಪನಿಗಳ ಕಲಬೆರಕೆ ಹಾಲಿನ ಬಗ್ಗೆ ಎಚ್ಚರಿಕೆಯಿಂದ ಇರಿ: ಮೈಮುಲ್ ಆಡಳಿತಾಧಿಕಾರಿ ಸಿ.ಪ್ರಸಾದ್ ರೆಡ್ಡಿ ಎಚ್ಚರಿಕೆ



ಮೈಮುಲ್ ಕಚೇರಿ ಮುಂದೆ ಸೋಮವಾರ ವಿಶ್ವ ಹಾಲು ದಿನದ ಅಂಗವಾಗಿ ಆರಂಭವಾದ ಜಾಗೃತಿ ಜಾಥಾಗೆ ಆಡಳಿತಾಧಿಕಾರಿ ಸಿ.ಪ್ರಸಾದ್ ರೆಡ್ಡಿ ಚಾಲನೆ ನೀಡಿದರು.

ಮೈಸೂರು, ಜೂ.1(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂದು ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ (ಮೈಮುಲ್)ದ ವತಿಯಿಂದ ವಿಶ್ವ ಹಾಲು ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರಿನ ಬನ್ನೂರು ರಸ್ತೆಯ ಒಕ್ಕೂಟ ಮುಂದೆ ಆರಂಭವಾದ ವಿಶ್ವ ಹಾಲು ದಿನದ ಜಾಗೃತಿ ಜಾಥಾಗೆ ಆಡಳಿತಾಧಿಕಾರಿ ಸಿ.ಪ್ರಸಾದ್ ರೆಡ್ಡಿ ಚಾಲನೆ ನೀಡಿದರು.

ನಂದಿನಿ ಹಾಲು ಉತ್ಪನ್ನಗಳ ಮಹತ್ವದ ಬಗ್ಗೆ ಸಂದೇಶ ಸಾರುವ ಭಿತ್ತಿಪತ್ರಗಳಿದ್ದ ಸಾರೋಟು ಹಾಗೂ ಬೈಕ್‌ಗಳಿದ್ದ ಮೆರವಣಿಗೆಯು ಬನ್ನೂರು ರಸ್ತೆ ಟೆರಿಷಿಯನ್ ಕಾಲೇಜು ವೃತ್ತ, ನಜರ್‌ಬಾದ್ ಪೊಲೀಸ್ ಠಾಣೆ ವೃತ್ತದ ಮೂಲಕ ಸಾಗಿ ಕುಪ್ಪಣ್ಣ ಪಾರ್ಕ್‌ನಲ್ಲಿ ಅಂತ್ಯಗೊಂಡಿತು.

ನಮ್ಮ ನಂದಿನಿ ನಮ್ಮ ಹೆಮ್ಮೆ, ನಂದಿನ ಹಾಲು ಬಳಸಿ ರೈತರ ಹಿತ ಕಾಪಾಡಿ, ಕ್ಷೀರ ಕ್ರಾಂತಿಯ ಪಿತಾಮಹ ಡಾ.ವರ್ಗೀಸ್ ಕುರಿಯನ್ ಎಂಬ ಹಲವು ಭಿತ್ತಿಫಲಕ ಹಿಡಿದ ಮೆರವಣಿಗೆ ಜನರನ್ನು ಆಕರ್ಷಿಸಿತು.

ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಒಕ್ಕೂಟದ ಆಡಳಿತಾಧಿಕಾರಿ ಸಿ.ಪ್ರಸಾದ್ ರೆಡ್ಡಿ ಅವರು, 2001ರಿಂದ ವಿಶ್ವ ಸಂಸ್ಥೆ ವಿಶ್ವ ಹಾಲು ದಿನ ಆಚರಿಸುತ್ತಾ ಬಂದಿದೆ. ಈ ಬಾರಿ ಮಹಿಳಾ ಸಬಲೀಕರಣ ಧ್ಯೇಯದೊಂದಿಗೆ ಈ ದಿನವನ್ನು ಆಚರಿಸಲಾಗುತ್ತಿದೆ. ಮನುಷ್ಯನಿಗೆ ಪೌಷ್ಟಿಕಾಂಶ ಬಹಳ ಮುಖ್ಯವಾಗಿದ್ದು, ಇದು ಹಾಲಿನಲ್ಲಿ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಕೆಲವು ಖಾಸಗಿ ಕಂಪನಿಗಳ ಹಾಲಿನಲ್ಲಿ ಕಲಬೆರಕೆ ಇರುತ್ತದೆ. ಇದನ್ನು ಗ್ರಾಹಕರು ಅರಿಯಬೇಕು ಹಾಗೂ ಎಚ್ಚರಿಕೆಯಿಂದ ಇರಬೇಕು. ಆದರೆ ನಂದಿನಿ ಹಾಲು ಶೇಕಡ 100ರಷ್ಟು ಶುದ್ಧವಾಗಿದ್ದು, ವಿಶ್ವದಲ್ಲೇ ಮೂರನೆ ಪ್ರತಿಷ್ಠಿತ ಬ್ರ್ಯಾಂಡ್ ಆಗಿದೆ. ವಿಶ್ವದಲ್ಲೆ ಅತೀ ಹೆಚ್ಚು ಹಾಲು ಉತ್ಪಾದನೆ ಮಾಡುವ ದೇಶಗಳಲ್ಲಿ ಭಾರತ ಅಗ್ರ ಸ್ಥಾನ ಪಡೆದಿದೆ ಎಂದು ಹೇಳಿದರು.

ತರುವಾಯ ಮಾತನಾಡಿದ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್, ಮೈಸೂರು ಜಿಲ್ಲೆಯಲ್ಲಿ 5.50 ಲಕ್ಷ ಜಾನುವಾರುಗಳಿದ್ದು, ಹೆಚ್ಚಿನ ಪ್ರಮಾಣದಲ್ಲಿ ಹಾಲು ಉತ್ಪಾದನೆ ಆಗುತ್ತಿದೆ ಎಂದರು.

ಈ ವೇಳೆ ಮಾತನಾಡಿದ ಒಕ್ಕೂಟದ ಆಡಳಿತ ವಿಭಾಗದ ವ್ಯವಸ್ಥಾಪಕಿ ಸೌಮ್ಯ ಅವರು, ಒಕ್ಕೂಟದಲ್ಲಿ 300ಕ್ಕೂ ಹೆಚ್ಚು ಮಹಿಳಾ ಸಹಕಾರ ಸಂಘಗಳಿದೆ. ಅಲ್ಲದೆ ಒಕ್ಕೂಟದಲ್ಲಿ ಮಹಿಳಾ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರಿಂದ ಮಹಿಳಾ ಸಬಲೀಕರಣಗೊಳ್ಳುತ್ತಿದೆ ಎಂದು ಹೇಳಿದರು.

ಒಕ್ಕೂಟದ ಇಂಜಿನಿಯರಿಂಗ್ ವಿಭಾಗದ ವ್ಯವಸ್ಥಾಪಕಿ ಗಿರಿಜಾ ಮಾತನಾಡಿ, ನಮ್ಮ ನಂದಿನಿ ನಮ್ಮ ಹೆಮ್ಮೆಯಾಗಿದೆ. ಪ್ರತಿಯೊಬ್ಬರು ಪ್ರತಿದಿನ ನಂದಿನಿ ಹಾಲನ್ನು ಹೆಚ್ಚಾಗಿ ಬಳಸಿ ರೈತರನ್ನು ಬೆಳೆಸಬೇಕು ಎಂದು ಸಲಹೆ ನೀಡಿದರು.

ಒಕ್ಕೂಟದ ಪ್ರಧಾನ ವ್ಯವಸ್ಥಾಪಕ ಜಯಶಂಕರ್, ವ್ಯವಸ್ಥಾಪಕರಾದ ಕರಿ ಬಸವರಾಜು, ಎನ್.ಸೌಮ್ಯ, ಬಬಿತ ಹಾಗೂ ಇತರರು ಈ ವೇಳೆ ಹಾಜರಿದ್ದರು.

ಅರ್ಜಿ ಆಹ್ವಾನ

ಮೈಸೂರು: ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ಕಲ್ಯಾಣ ವರ್ಗಗಳ ಇಲಾಖೆ ವತಿಯಿಂದ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಪ್ರವರ್ಗ–1, ಎಸ್‌ಸಿ & ಎಸ್‌ಟಿ ರೂ. 2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ರೂ. 1 ಲಕ್ಷ ದೊಳಗಿರಬೇಕು. ಪ್ರವೇಶ ಬಯಸುವ ವಿದ್ಯಾರ್ಥಿಗಳು ಜೂ.8ರೊಳಗೆ https://shp.karnataka.gov.in/bcwd ಮೂಲಕ ಅರ್ಜಿ ಸಲ್ಲಿಸಬಹುದು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ https://bcwd.karnataka.gov.in/ ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline @gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ/ತಾಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ: 8050770004.

3 ಲಕ್ಷ ಮೌಲ್ಯದ 44 ಗ್ರಾಂ ಚಿನ್ನಾಭರಣ; 40 ಸಾವಿರ ನಗದು ಕಳವು

ಮೈಸೂರು,ಜೂ.1(ಪಿಎಂ)– ಎನ್‌ಆರ್ ಮೊಹಲ್ಲಾದ ಮನೆಯೊಂದರಲ್ಲಿ ಒಟ್ಟು 44 ಗ್ರಾಂನ ವಿವಿಧ ರೀತಿಯ ಚಿನ್ನಾಭರಣ ಹಾಗೂ 40 ಸಾವಿರ ರೂ. ನಗದು ಕಳ್ಳತನವಾಗಿರುವ ಸಂಬಂಧ ಎನ್‌ಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಮಾಲೀಕ ನಜೀಬ್ ಉರ್ ರೆಹಮಾನ್ ನೀಡಿದ ದೂರಿನನ್ವಯ ಮೇ 31ರಂದು ಎಫ್‌ಐಆರ್ ದಾಖಲಾಗಿದೆ. ಎನ್‌ಆರ್ ಮೊಹಲ್ಲಾದ ಶಿವಾಜಿ ರಸ್ತೆಯ 3ನೇ ಮಹಡಿ ಮನೆಯಲ್ಲಿ ವಾಸವಾಗಿದ್ದು, ನಾನು ನನ್ನ ಪತ್ನಿಯೊಂದಿಗೆ ಮೇ 29ರಂದು ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ಕನಕಪುರಕ್ಕೆ ಹೋಗಿ ಮೇ 30ರಂದು ಬೆಳಗ್ಗೆ 4 ಗಂಟೆಗೆ ಮರಳಿದೆವು. ನಂತರ ಮೇ 30ರಂದು ಮಧ್ಯಾಹ್ನ ಮನೆಗೆ ಬೀಗ ಹಾಕಿಕೊಂಡು ಬೆಂಗಳೂರಿಗೆ ಹೋಗಿದ್ದೆವು. ನಂತರ ರಾತ್ರಿ 10.45ರಲ್ಲಿ ವಾಪಸ್ಸು ಮನೆಗೆ ಬಂದಾಗ ಡ್ರಾಯರ್‌ನಲ್ಲಿಟ್ಟಿದ್ದ ಚಿನ್ನಾಭರಣ, ನಗದು ಕಳ್ಳತನವಾಗಿತ್ತು. ಚಿನ್ನದ ನೆಕ್ಲೇಸ್, ಪೆಂಡೆಂಟ್, ಮೂರು ಜೊತೆ ಓಲೆ, ನಾಲ್ಕು ಚಿನ್ನದ ಉಂಗುರಗಳು ಹಾಗೂ 40 ಸಾವಿರ ನಗದು ಕಳ್ಳತನ ಮಾಡಲಾಗಿದೆ ಎಂದು ಎಂದು ನಜೀಬ್ ಉರ್ ರೆಹಮಾನ್ ದೂರಿನಲ್ಲಿ ತಿಳಿಸಿದ್ದಾರೆ.

ಸಿಎಂ ಆಯ್ಕೆ ವೇಳೆ ಸಿದ್ದರಾಮಯ್ಯ ದಲಿತರೊಬ್ಬರ ಹೆಸರು ಹೇಳದಿರುವುದು ಬೇಸರದ ಸಂಗತಿ

ಮಾಜಿ ಮೇಯರ್ ಪುರುಷೋತ್ತಮ್ ಅಸಮಾಧಾನ

- ಮಹದೇವಪ್ಪ ಸಚಿವ ಸ್ಥಾನಕ್ಕೆ ಅವರಿವರ ಮನೆ ಮುಂದೆ ನಿಲ್ಲುವಂತೆ ಮಾಡಿದರೆ ಕಾಂಗ್ರೆಸ್ ದಲಿತ ಮತಗಳಿಗೆ ಕೊಕ್



ಪುರುಷೋತ್ತಮ್

ಮೈಸೂರು, ಜೂ.1(ಜಿಎ)–ಮುಖ್ಯಮಂತ್ರಿ ಆಯ್ಕೆ ವೇಳೆ ಮಾಜಿ ಸಿಎಂ ಸಿದ್ದರಾಮಯ್ಯ ಅವರು ದಲಿತರೊಬ್ಬರ ಹೆಸರು ಪ್ರಸ್ತಾಪಿಸದೆ ಇರುವುದು ಬೇಸರದ ಸಂಗತಿಯಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಭಾಗದಲ್ಲಿ ಮಾತ್ರವಲ್ಲ, ರಾಜ್ಯಾದ್ಯಂತ ದಲಿತರು ಸದಾ ಸಿದ್ದರಾಮಯ್ಯ ಅವರ ಹಿಂದೆಯೇ ಇದ್ದರು. ಹೀಗಿದ್ದರೂ ಇವರು ಏಕೆ ದಲಿತ ಸಿಎಂ ಪರ ನಿಲ್ಲಲಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಅತ್ಯುನ್ನತ ಸ್ಥಾನದಲ್ಲಿರುವ ಮಲ್ಲಿಕಾರ್ಜುನ ಖರ್ಗೆ ಸಹಾ ಈ ಬಗ್ಗೆ ಏಕೆ ಉತರಿಸುತ್ತಿಲ್ಲ ಎಂಬ ಪ್ರಶ್ನೆ ಕಾಡುತ್ತಿದೆ ಎಂದು ಅವರು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

ನೂತನ ಸಚಿವ ಸಂಪುಟ ರಚನೆ ವೇಳೆ ಈ ಭಾಗದ ಹಿರಿಯ ರಾಜಕಾರಣಿ ಹಾಗೂ ಮಾಜಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಅವರು ಸಂಪುಟದಲ್ಲಿ ಉತ್ತಮ ಸ್ಥಾನಕ್ಕಾಗಿ ಅವರಿವರ ಮನೆ ಮುಂದೆ ನಿಲ್ಲುವಂತೆ ಮಾಡಿದಲ್ಲಿ ಈ ಭಾಗದ ದಲಿತರು ಕಾಂಗ್ರೆಸ್‌ಗೆ ಬೆಂಬಲ ಮುಂದುವರಿಸಬೇಕೇ ಬೇಡವೇ ಎಂದು ಪುನರಾಲೋಚಿಸಬೇಕಾಗುತ್ತದೆ ಎಂದು ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಿಂದ ನೂತನ ಸಿಎಂ ಆಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಲಿದ್ದಾರೆ ಎಂಬ ಸುದ್ದಿ ಬರುತ್ತಿದ್ದಂತೆಯೇ ಹಲವಾರು ಮಂದಿ ಹಲವರ ಮನೆ ಬಾಗಿಲಿಗೆ ಹೋಗಿ ಲಾಬಿ ಮಾಡಲಾರಂಭಿಸಿದ್ದಾರೆ. ಇದೇ ವೇಳೆ ಸಾಕಷ್ಟು ಅಭಿವೃದ್ಧಿ ಕಾರ್ಯ, ಸಾಧನೆ ಮಾಡಿದ್ದರೂ ದಲಿತರು ತಮಗೆ ದಕ್ಕಬೇಕಾದ ಸ್ಥಾನಕ್ಕಾಗಿ ಬೀದಿ ಹೋರಾಟ ನಡೆಸಬೇಕಾಗಿ ಬಂದಿರುವುದು ಬೇಸರದ ಸಂಗತಿ ಎಂದರು.

ಈ ಹಿಂದೆ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ತುಳಿದುದಾಗಿದೆ. ಈಗ ಅದೇ ರೀತಿ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಮೂಲೆಗುಂಪು ಮಾಡುವ ಹುನ್ನಾರ ನಡೆದಿರಬಹುದೇ ಎಂದು ಕೇಳಿದರಲ್ಲದೆ, ಕಾಂಗ್ರೆಸ್ ಪಕ್ಷ ಅಧಿಕಾರದ ವಿಷಯದಲ್ಲಿ ದಲಿತರನ್ನು ಸದಾ ಮಲತಾಯಿ ಧೋರಣೆಯಿಂದ ನೋಡುತ್ತಿದೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ನಾಗರಾಜು ಬಿಲ್ಲಯ್ಯ, ಸುನೀಲ್, ಆರ್.ಸಿ. ಮಹೇಶ್ ಜೋಗಿ, ಸಿದ್ದಸ್ವಾಮಿ, ವಿಷಕಂಠು, ಪುಟ್ಟರಾಜು ಉಪಸ್ಥಿತರಿದ್ದರು.

ನಾನು ಕೆಪಿಸಿಸಿ ಅಧ್ಯಕ್ಷನಾಗುವುದು ಅನಿವಾರ್ಯವಲ್ಲ

ಯಾವುದೇ ಬೇಡಿಕೆ ಇಟ್ಟಿಲ್ಲ: ಸತೀಶ್ ಜಾರಕಿಹೊಳಿ

ಬೆಳಗಾವಿ: ರಾಜ್ಯದಲ್ಲಿ ನಾಯಕತ್ವ ಬದಲಾವಣೆ ನಂತರ ಕೆಪಿಸಿಸಿ ಪುನಾರಚನೆ ಬಗ್ಗೆ ಹರಿದಾಡುತ್ತಿರುವ ಊಹಾಪೋಹಗಳ ನಡುವೆ, ಸತೀಶ್ ಜಾರಕಿಹೊಳಿ ತಾವು ಪಕ್ಷದ ನಿಷ್ಠಾವಂತ, ಶಿಸ್ತಿನ ಸಿಪಾಯಿ ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಪಕ್ಷದ ಪ್ರಮುಖ ಹುದ್ದೆಗಳನ್ನು ಭರ್ತಿ ಮಾಡುವ ಅಂತಿಮ ನಿರ್ಧಾರವು ಸಂಪೂರ್ಣವಾಗಿ ಹೈಕಮಾಂಡ್ ಗೆ ಬಿಟ್ಟ ವಿಷಯ ಎಂದಿದ್ದಾರೆ.

ಕಾಂಗ್ರೆಸ್ ಹೈ ಕಮಾಂಡ್ ಸರ್ಕಾರ ರಚನೆಗೆ ಸಂಬಂಧಿಸಿದ ಚರ್ಚೆಗಳಲ್ಲಿ ನಿರತರಾಗಿರುವುದರಿಂದ ಈ ವಿಷಯದ ಬಗ್ಗೆ ಪಕ್ಷದ ನಾಯಕತ್ವದೊಂದಿಗೆ ಮಾತನಾಡಿಲ್ಲ ಎಂದು ಜಾರಕಿಹೊಳಿ ಹೇಳಿದರು. ಕೆಪಿಸಿಸಿ ಉನ್ನತ ಹುದ್ದೆಗೆ ಲಾಬಿ ಮಾಡುತ್ತಿದ್ದಾರೆ ಎಂಬ ಊಹಾಪೋಹಗಳನ್ನು ತಳ್ಳಿಹಾಕಿದ ಅವರು, ಹೈಕಮಾಂಡ್ ಮುಂದೆ ಯಾವುದೇ ಬೇಡಿಕೆ ಇಟ್ಟಿಲ್ಲ ಎಂದು ಹೇಳಿದರು. ನಾನು ಯಾವುದೇ ಬೇಡಿಕೆ ಇಟ್ಟಿಲ್ಲ. ಪಕ್ಷದ ದೃಷ್ಟಿಕೋನದಿಂದ, ನಾನು ಅಧ್ಯಕ್ಷನಾಗುವುದು ಅನಿವಾರ್ಯವಲ್ಲ. ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರ ಅಂತಿಮವಾಗಿರುತ್ತದೆ ಎಂದು ಅವರು ಹೇಳಿದರು.

ಮುಖ್ಯಮಂತ್ರಿ ಹುದ್ದೆಯ ಬದಲಾವಣೆಯ ನಂತರ ಸರ್ಕಾರ ಮತ್ತು ಸಂಘಟನೆಯ ನಡುವೆ ಸಮತೋಲನ ಕಾಪಾಡಲು ಹೈಕಮಾಂಡ್ ಪ್ರಯತ್ನಿಸುತ್ತಿರುವ ಸಮಯದಲ್ಲಿ ಸತೀಶ್ ಈ ಹೇಳಿಕೆ ನೀಡಿದ್ದಾರೆ. ಭವಿಷ್ಯದ ಚುನಾವಣೆಗಳಿಗೆ ಮುಂಚಿತವಾಗಿ ಕೆಪಿಸಿಸಿ ಅಧ್ಯಕ್ಷರ ಆಯ್ಕೆ ಪಕ್ಷದ ಅಧಿಕಾರ ರಚನೆಯನ್ನು ರೂಪಿಸುವ ನಿರ್ಣಾಯಕ ವಿಷಯವೆಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಸಂಘಟನಾ ಒಗ್ಗಟ್ಟನ್ನು ಖಚಿತಪಡಿಸಿಕೊಳ್ಳಲು ಹಿರಿಯ ನಾಯಕರನ್ನು ಒಳಗೊಂಡ ಸಮನ್ವಯ ಅಥವಾ ಕೋರ್ ಸಮಿತಿಯನ್ನು ರಚಿಸುವ ಪ್ರಸ್ತಾಪದ ವರದಿಗಳ ಕುರಿತು ಮಾತನಾಡಿದ ಜಾರಕಿಹೊಳಿ, ಈ ಕಲ್ಪನೆಯು ಹೊಸದಲ್ಲ ಮತ್ತು ಕಳೆದ ಮೂರು ವರ್ಷಗಳಿಂದ ಚರ್ಚೆಯಲ್ಲಿದೆ ಎಂದು ಹೇಳಿದರು.

ಈ ಪ್ರಸ್ತಾಪವು ಮೊದಲೇ ಇತ್ತು, ಆದರೆ ಅದನ್ನು ಎಂದಿಗೂ ಜಾರಿಗೆ ತರಲಾಗಿಲ್ಲ. ಈಗ ಅದನ್ನು ಮತ್ತೆ ಚರ್ಚಿಸಲಾಗುತ್ತಿದೆ. ನಾಯಕತ್ವ ಏನು ನಿರ್ಧರಿಸುತ್ತದೆ ಎಂಬುದನ್ನು ನಾವು ಕಾಯಬೇಕು ಎಂದು ಅವರು ಹೇಳಿದರು.

ಸಂಪುಟ ವಿಸ್ತರಣೆ ಮತ್ತು ಪುನರ್ರಚನೆಯ ಬಗ್ಗೆ ಮಾತನಾಡಿದ ಜಾರಕಿಹೊಳಿ, ಈಗ ಹೊಸ ಮುಖ್ಯಮಂತ್ರಿ ಇದ್ದಾರೆ, ಸಿದ್ದರಾಮಯ್ಯ ಕೂಡ ಇದ್ದಾರೆ. ಸಂಪುಟ ರಚನೆ ಎರಡು ಹಂತಗಳಲ್ಲಿ ಆಗಬಹುದು. ಹಿರಿಯ ನಾಯಕರು ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆಯಬಹುದು ಎಂದು ಅವರು ಹೇಳಿದರು.

ಸಿದ್ದರಾಮಯ್ಯ ರಾಜೀನಾಮೆ ನೀಡುವ ಮೊದಲು ಅವರ ವಿರುದ್ಧ 37 ಶಾಸಕರ ಗುಂಪು ಪತ್ರಕ್ಕೆ ಸಹಿ ಹಾಕಿದೆ ಎಂಬ ಆರೋಪಗಳನ್ನು ಜಾರಕಿಹೊಳಿ ಬಲವಾಗಿ ತಿರಸ್ಕರಿಸಿದರು. ಈ ಹೇಳಿಕೆಯನ್ನು ಸಂಪೂರ್ಣವಾಗಿ ಆಧಾರರಹಿತ ಎಂದು ಕರೆದ ಅವರು, ಅಂತಹ ಯಾವುದೇ ಪತ್ರವನ್ನು ಕಾಂಗ್ರೆಸ್ ಹೈಕಮಾಂಡ್‌ಗೆ ಕಳುಹಿಸಲಾಗಿಲ್ಲ ಎಂದು ಹೇಳಿದರು. 37 ಪ್ರಭಾವಿ ಶಾಸಕರು ನಿಜವಾಗಿಯೂ ಅಂತಹ ದಾಖಲೆಗೆ ಸಹಿ ಹಾಕಿದ್ದರೆ, ಅದಕ್ಕೆ ಪುರಾವೆಗಳು ಇರಬೇಕಿತ್ತು. ಅಂತಹ ಯಾವುದೇ ಪತ್ರ ಅಸ್ತಿತ್ವದಲ್ಲಿಲ್ಲ. ಇವು ಕೇವಲ ವದಂತಿಗಳು ಮತ್ತು ಕಟ್ಟುಕಥೆಗಳಾಗಿದ್ದು, ಅವುಗಳಿಗೆ ಅನಗತ್ಯ ಪ್ರಾಮುಖ್ಯತೆ ನೀಡಬಾರದು ಎಂದು ಅವರು ಹೇಳಿದರು.

ಕ್ಷೇತ್ರ ತ್ಯಾಗಕ್ಕೆ ಸುಮಲತಾಗೆ ಪ್ರತಿಫಲ!




ಬೆಂಗಳೂರು: ಕರ್ನಾಟಕ ರಾಜ್ಯ ಸಭಾ ಚುನಾವಣೆ ತೀವ್ರ ಕುತೂಹಲ ಮೂಡಿಸಿದೆ. ಬಿಜೆಪಿ ಹಾಗೂ ಕಾಂಗ್ರೆಸ್‌ನಲ್ಲಿ ರಾಜಕೀಯ ಲೆಕ್ಕಾಚಾರಗಳು ನಡೆದಿವೆ. ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಗೆ ಕೇವಲ ಒಂದೇ ಸ್ಥಾನ ದೊರೆಯಲಿದ್ದು, ಒಂದು ಸ್ಥಾನಕ್ಕೆ ದೋಸ್ತಿಗಳ ಮಧ್ಯೆ ಕುಸ್ತಿ ಶುರುವಾಗಿದೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರನ್ನೆ ಮುಂದುವರೆಸಬೇಕೆಂದು ಪಟ್ಟು ಹಿಡಿದಿದೆ. ಆದರೂ ಇನ್ನೂ ಖಚಿತತೆ ಸಿಕ್ಕಿಲ್ಲ ಇನ್ನೊಂದೆಡೆ ಬಿಜೆಪಿ ತಮ್ಮ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಕಸರತ್ತು ನಡೆಸಿದೆ. ಮೊನ್ನೆ ನಡೆದ ರಾಜ್ಯ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಕೆಲವರ ಹೆಸರುಗಳು ಪ್ರಸ್ತಾಪವಾಗಿದೆ. ಹೀಗಾಗಿ ಹೈಕಮಾಂಡ್ ನಿರ್ಧಾರಕ್ಕೆ ಬಿಡಲಾಗಿದೆ. ಆದರೂ ಸಂಪ್ರದಾಯದಂತೆ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡರ ಹೆಸರು ಶಿಫಾರಸ್ಸು ಮಾಡಲಾಗಿದೆ. ಈ ಎಲ್ಲಾ ವಿದ್ಯಮಾನಗಳ ನಡುವೆ ಅಚ್ಚರಿ ಬೆಳವಣಿಗೆಯೊಂದು ನಡೆದಿದೆ. ಬಿಜೆಪಿ ಹೈಕಮಾಂಡ್, ಮಾಜಿ ಸಂಸದೆ ಸುಮಲತಾ ಅಂಬರೀಶ್ ಅವರ ಬಗ್ಗೆ ವಿವರ ಕೇಳಿದ್ದು, ಜೊತೆಗೆ ಕುತೂಹಲ ಮೂಡಿಸಿದೆ.


ತ್ಯಾಗಕ್ಕೆ ಸಿಗುತ್ತಾ ಪ್ರತಿಫಲ: ಹಾಲಿ ಮಂಡ್ಯದ ಪಕ್ಷೇತರ ಸಂಸದೆಯಾಗಿದ್ದ ಸುಮಲತಾ ಅಂಬರೀಶ್ ಅವರು ಕಳೆದ ಲೋಕಸಭಾ ಚುನಾವಣೆ ವೇಳೆ ಬಿಜೆಪಿ ಸೇರ್ಪಡೆಯಾಗಿದ್ದರು. ಅಲ್ಲದೇ ಬಿಜೆಪಿ ಹೈಕಮಾಂಡ್ ಸೂಚನೆ ಮೇರೆಗೆ ಸುಮಲತಾ ಅವರು ಮಂಡ್ಯ ಕ್ಷೇತ್ರವನ್ನು ಜೆಡಿಎಸ್‌ಗೆ ತ್ಯಾಗ ಮಾಡಿದ್ದರು. ಇದರ ಫಲವಾಗಿ ಎಚ್.ಡಿ. ಕುಮಾರಸ್ವಾಮಿ ಅವರು ಮಂಡ್ಯದಿಂದ ಗೆದ್ದು ಇದೀಗ ಕೇಂದ್ರದಲ್ಲಿ ಮಂತ್ರಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅಂದು ಸುಮಲತಾ ಮಾಡಿದ ಈ ದೊಡ್ಡ ತ್ಯಾಗವನ್ನು ಬಿಜೆಪಿ ವರಿಷ್ಠರು ಇದೀಗ ಗಣನೆಗೆ ತೆಗೆದುಕೊಂಡಿದ್ದು, ರಾಜ್ಯಸಭೆ ಟಿಕೆಟ್ ನೀಡಲು ಮುಂದಾಗಿದೆ ಎನ್ನಲಾಗಿದೆ. ಹೀಗಾಗಿ ತ್ಯಾಗಕ್ಕೆ ಪ್ರತಿಫಲ ಸಿಗುತ್ತಾ ಎನ್ನುವುದನ್ನು ಕಾದು ನೋಡಬೇಕಿದೆ. ಒಟ್ಟಿನಲ್ಲಿ ಬಿಜೆಪಿ ಹೈಕಮಾಂಡ್ ಅಚ್ಚರಿ ಆಯ್ಕೆಯಲ್ಲಿ ಖ್ಯಾತಿ ಪಡೆದುಕೊಂಡಿದೆ. ಹೀಗಾಗಿ ಕರ್ನಾಟಕ ರಾಜ್ಯಸಭೆಗೆ ಸುಮಲತಾ ಆಯ್ಕೆಯಾಗುತ್ತಾರಾ ಎನ್ನುವುದೇ ಕುತೂಹಲ.

ಇಂದು ಕುರುಬ ಸಂಘದ ಸಭೆ

ಮೈಸೂರು,ಜೂ.1(ಬಿಎಲ್‌ಯು)– ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಉಪಮುಖ್ಯಮಂತ್ರಿ ಮಾಡಬೇಕೆಂದು ಆಗ್ರಹಿಸಲು ನಾಳೆ (ಜೂನ್ 2) ಕರ್ನಾಟಕ ಪ್ರದೇಶ ಕುರುಬ ಸಂಘದ ಸಭೆ ನಡೆಯಲಿದೆ. ಮೈಸೂರು ನಗರ ಹಾಗೂ ಜಿಲ್ಲೆಯ ಕುರುಬ ಸಂಘ ಈ ಸಭೆ ಆಯೋಜಿಸಿದ್ದು, ಮೈಸೂರಿನ ಗುರು ರೆಸಿಡೆನ್ಸಿ ಹೋಟೆಲ್‌ನಲ್ಲಿ ನಾಳೆ ಬೆಳಿಗ್ಗೆ 11.30 ಗಂಟೆಗೆ ಸಭೆ ನಡೆಯಲಿದೆ. ಕುರುಬ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಅಭಿಮಾನಿಗಳು, ಹಿತೈಷಿಗಳಿಂದ ಬಸವ ಮಾರ್ಗ ಫೌಂಡೇಷನ್ ಅಧ್ಯಕ್ಷ ಎಸ್.ಬಸವಣ್ಣ ಅವರಿಗೆ ಹುಟ್ಟುಹಬ್ಬದ ಶುಭಾಶಯ....









ಬಸವ ಮಾರ್ಗ ಫೌಂಡೇಷನ್ ಸಂಸ್ಥಾಪಕರಾದ ಎಸ್. ಬಸವಣ್ಣ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು, ಉದ್ಯಮಿ ಸ್ಕಂದನ್, ಇಂಡಿಯನ್ ಟಿವಿ ಸಿಬ್ಬಂದಿಗಳು, ಕೆ.ಜಿ. ಕೊಪ್ಪಲಿನ ಯಜಮಾನರು, ಉದ್ಯಮಿ ರವಿಕುಮಾರ್ ಇತರರು ಅದ್ದೂರಿಯಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಶೌರ್ಯ ಘಟಕದಿಂದ ಕಾವೇರಿ ನದಿ ಸ್ವಚ್ಛತೆ



ನಾಪೋಕ್ಲು ಶೌರ್ಯ ಘಟಕದ ಸ್ವಯಂ ಸೇವಕರು ಕಾವೇರಿ ನದಿ ಸ್ವಚ್ಛಗೊಳಿಸಿದರು.

ನಾಪೋಕ್ಲು, ಜೂ.1–ಇಲ್ಲಿನ ಶೌರ್ಯ ಘಟಕದ ಸ್ವಯಂಸೇವಕರು ಸೋಮವಾರ ಕಾವೇರಿ ನದಿಗೆ ಇಳಿದು ಸ್ವಚ್ಛತಾ ಕಾರ್ಯವನ್ನು ಕೈಗೊಂಡರು.

ಘಟಕದ ಸ್ವಯಂಸೇವಕರು ಇಲ್ಲಿಗೆ ಸಮೀಪದ ಕಾವೇರಿ ನದಿಯ ಒಳಗೆ ಬಿದ್ದಿದ್ದ ಕಸ, ಪ್ಲಾಸ್ಟಿಕ್ ಚೀಲ, ಮರದ ದಿಂಡೆ ಸೇರಿದಂತೆ ಎಲ್ಲಾ ತ್ಯಾಜ್ಯ ವಸ್ತುಗಳನ್ನು ಹೆಕ್ಕಿ ನದಿಯ ದಡಕ್ಕೆ ತಂದು ಕಾವೇರಿ ನದಿಯನ್ನು ಸ್ವಚ್ಛಗೊಳಿಸಿದರು

ಶೌರ್ಯ ಮಾಸ್ಟರ್ ಬಾಳೆಯಡ ದಿವ್ಯ ಮಂದಪ್ಪ ನೇತೃತ್ವದ ತಂಡದಲ್ಲಿ ಉಮಾ ಲಕ್ಷ್ಮಿ, ಚಂದ್ರಕಲಾ, ಶಂಕರು, ದಿಲಿಶ್, ಮಾಯಿಲಪ್ಪ, ಶರವಣ, ಆನಂದ, ರಶ್ಮಿ ಪಾಲ್ಗೊಂಡಿದ್ದರು. ಇವರ ನಿಸ್ವಾರ್ಥ ಸೇವೆಯನ್ನು ಕಂಡ ಸಾರ್ವಜನಿಕರು ಪ್ರಶಂಸಿಸಿದ್ದಾರೆ.

ಶಾಲಾ ಮಕ್ಕಳಿಗೆ ಹೂಗುಚ್ಛ, ಸಿಹಿ ವಿತರಿಸಿ ಸ್ವಾಗತ

ಮಡಿಕೇರಿ, ಜೂ.1–ನಗರದ ಪಿಎಂಶ್ರೀ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಹೂಗುಚ್ಛ ಮತ್ತು ಸಿಹಿಯನ್ನು ವಿತರಿಸುವ ಮೂಲಕ ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳಲಾಯಿತು.

ವಿದ್ಯಾರ್ಥಿಗಳು ತುಂಬಾ ಆಸಕ್ತಿಯಿಂದ ಶಾಲೆಗೆ ಬರುತ್ತಿರುವುದರಿಂದ ಸರ್ಕಾರಿ ಶಾಲೆಯ ಗುಣಮಟ್ಟ ಹೆಚ್ಚಾಗುತ್ತಿದೆ ಎಂದು ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಬಸವರಾಜು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್, ಎಸ್‌ಡಿಎಂಸಿ ಅಧ್ಯಕ್ಷ ಜಗದೀಶ್, ಶಾಲಾ ಮುಖ್ಯೋಪಾಧ್ಯಾಯಿನಿ ಭವಾನಿ, ಉಪ ನಿರ್ದೇಶಕರ ಕಚೇರಿಯ ಡಿಪಿಇಓ ಶ್ರೀನಿವಾಸ್, ಡಿವೈಪಿಸಿ ಕೃಷ್ಣಪ್ಪ, ವಿಷಯ ಪರಿವೀಕ್ಷಕ ಬಿಂದು, ಕ್ಷೇತ್ರ ಸಮನ್ವಯ ಅಧಿಕಾರಿ ಶರ್ಮಿಳ, ಡಾ.ಸದಾಶಿವಯ್ಯ ಎಸ್. ಪಲ್ಲೇದ್‌ರೊಂದಿಗೆ ಶಿಕ್ಷಕರು ವಿದ್ಯಾರ್ಥಿಗಳನ್ನು ಸಂಭ್ರಮ ದಿಂದ ಶಾಲೆಗೆ ಬರಮಾಡಿಕೊಂಡರು.





ವಿದ್ಯಾರ್ಥಿಗಳಿಗೆ ಹೂಗುಚ್ಛ ಮತ್ತು ಸಿಹಿಯನ್ನು ವಿತರಿಸುವ ಮೂಲಕ ಶಿಕ್ಷಕ ವೃಂದ ಸ್ವಾಗತಿಸಿತು.

ಸುಂಟಿಕೊಪ್ಪ : ಸುಂಟಿಕೊಪ್ಪ ವ್ಯಾಪ್ತಿಯ ಸರಕಾರಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಸಂತ ಅಂತೋಣಿ ಹಿರಿಯ ಪ್ರಾಥಮಿಕ ಹಾಗೂ ಗದ್ದೆಹಳ್ಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಪುಷ್ಪ ನೀಡಿ ಸಿಹಿ ಹಂಚುವ ಮೂಲಕ ಶಿಕ್ಷಕರು ಹಬ್ಬದ ವಾತಾವರಣ ನಿರ್ಮಿಸಿ ಅದ್ದೂರಿ ಸ್ವಾಗತ ಕೋರಿದರು.

ಸರಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ವೈ.ಸಿ.ಕುಮಾರ್, ಪ್ರೌಢ ಶಾಲೆಯ ಬಾಲಕೃಷ್ಣ, ಸಂತ ಅಂತೋಣಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಜೋವಿಟಾ ವಾಸ್ ಹಾಗೂ ಗದ್ದೆಹಳ್ಳದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಹೇಮಾ ಕುಮಾರಿ ಹಾಗೂ ಇತರೆ ಶಾಲೆಗಳ ಸಹ ಶಿಕ್ಷಕರು ಮಕ್ಕಳಿಗೆ ಸಿಹಿ ವಿತರಿಸುವ ಮೂಲಕ ಬರಮಾಡಿಕೊಂಡರು.

ಪೋಕ್ಸೊ ಕೇಸ್: ಆರೋಪಿಗೆ 5 ವರ್ಷ ಸಜೆ

ಮಡಿಕೇರಿ: ಅಪ್ರಾಪ್ತೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಲಯ ಆರೋಪಿಗೆ 5 ವರ್ಷ ಶಿಕ್ಷೆ ಮತ್ತು ದಂಡವನ್ನು ವಿಧಿಸಿದೆ.

ಪಶ್ಚಿಮಬಂಗಾಳ ಮೂಲದ ಆನಂದಿ ಮಂಡಲ್ ಎಂಬ ಆರೋಪಿಗೆ ಸಜೆಯೊಂದಿಗೆ ದಂಡವನ್ನು ವಿಧಿಸುವಂತೆ ನ್ಯಾಯಾಧೀಶರಾದ ಸಿ.ಕೆ.ಬಸವರಾಜು ತೀರ್ಪು ನೀಡಿದ್ದಾರೆ

ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕಡಗದಾಳು ಗ್ರಾಮದ ಕಾಫಿ ಎಸ್ಟೇಟ್‌ನಲ್ಲಿ ರಾಯಚೂರು ಮೂಲದ ಮಹಿಳೆಯೊಬ್ಬರು ಇಬ್ಬರು ಅಪ್ರಾಪ್ತ ಪುತ್ರಿಯರ ಜೊತೆ ವಾಸವಿದ್ದು, 2020ರ ಮಾ.16ರಂದು ಕೆಲಸದ ನಿಮಿತ್ತ ರಾಯಚೂರಿಗೆ ತೆರಳಿದ್ದರು. ಈ ವೇಳೆ ತನ್ನ ಪುತ್ರಿಯರನ್ನು ಪರಿಚಯಸ್ಥರಾದ ಪಶ್ಚಿಮ ಬಂಗಾಳ ಮೂಲದ ಆನಂದಿ ಮಂಡಲ್ ಎಂಬವರ ಮನೆಯಲ್ಲಿ ಬಿಟ್ಟಿದ್ದರು. ಕೋವಿಡ್ ಲಾಕ್‌ಡೌನ್ ಆದ ಹಿನ್ನೆಲೆಯಲ್ಲಿ ಮಹಿಳೆಗೆ ಕಡಗದಾಳು ಗ್ರಾಮಕ್ಕೆ ಆಗಮಿಸಲು ಸಾಧ್ಯವಾಗಿರಲಿಲ್ಲ. ಈ ಸಂದರ್ಭವನ್ನು ದುರುಪಯೋಗಪಡಿಸಿಕೊಂಡ ಆನಂದಿ ಮಂಡಲ್, ತನ್ನ ಬಳಿಯಿದ್ದ ಅಪ್ರಾಪ್ತ ಹೆಣ್ಣು ಮಕ್ಕಳಿಗೆ ಹಲವಾರು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದನೆಂದು ಹೇಳಲಾಗಿದೆ.

ಸಂತ್ರಸ್ಥೆಯರ ತಾಯಿ ಮರಳಿ ಮಡಿಕೇರಿಗೆ ಆಗಮಿಸಿದ ನಂತರ ಪುತ್ರಿಯರಿಗೆ ಲೈಂಗಿಕ ದೌರ್ಜನ್ಯ ಎಸಗಿರುವ ವಿಷಯ ತಿಳಿದು ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದರು. ದೂರು ದಾಖಲಿಸಿಕೊಂಡು ತನಿಖೆ ನಡೆಸಿದ ಸಬ್ ಇನ್ಸ್‌ಪೆಕ್ಟರ್ ಚಂದ್ರಶೇಖರ್ ಜಿಲ್ಲಾ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ ಪೋಕ್ಸೊ ಕಾಯಿದೆಯ ಅಪರಾಧಗಳಿಗೆ 5 ವರ್ಷ ಸಜೆ ಮತ್ತು 16 ಸಾವಿರ ರೂ. ದಂಡ ವಿಧಿಸಿದೆ. ನೊಂದ ಬಾಲಕಿಯರಿಗೆ ತಲಾ ಲಕ್ಷ ರೂ. ಪರಿಹಾರವನ್ನು ಸರ್ಕಾರ ಒದಗಿಸಬೇಕು ಎಂದು ನ್ಯಾಯಾಧೀಶರು ತೀರ್ಪಿನಲ್ಲಿ ಆದೇಶಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ಬಿ.ಎಸ್.ರುದ್ರಪ್ರಸನ್ನ ವಕಾಲತ್ತು ವಹಿಸಿದ್ದರು.

ನಾಳೆ ಸಿಎನ್‌ಸಿಯಿಂದ ಚುನಾವಣಾ ಹಕ್ಕು ರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆ

ಮಡಿಕೇರಿ: ಅಕ್ರಮ ಮತದಾರರ ಗುರುತಿನ ಚೀಟಿಗಳನ್ನು ರದ್ದುಗೊಳಿಸಲು 'ವಿಶೇಷ ತೀವ್ರ ಪರಿಷ್ಕರಣೆ'ಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಸ್ಥಳೀಯ ಕೊಡವರ ಚುನಾವಣಾ ಹಕ್ಕುಗಳ ರಕ್ಷಣೆ ಮಾಡಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜೂ.3ರಂದು ಶಾಂತಿಯುತ ಸತ್ಯಾಗ್ರಹ ನಡೆಸಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಎದುರು ಬೆಳಿಗ್ಗೆ 10.30 ಗಂಟೆಗೆ ಸತ್ಯಾಗ್ರಹ ನಡೆಸಿ ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿ, ಪ್ರಧಾನ ಮಂತ್ರಿ, ಗೃಹ ಸಚಿವರು, ಜನಗಣತಿ ಆಯುಕ್ತರು ಹಾಗೂ ಮುಖ್ಯ ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ.

ಮಕ್ಕಳಲ್ಲಿ ಕನ್ನಡ ಪ್ರೇಮ ಕಡ್ಡಾಯವಾಗಿ ಬೆಳೆಸಿ

ಪೊನ್ನಂಪೇಟೆ ತಾಲೂಕು ಪ್ರಥಮ ಸಾಹಿತ್ಯ ಸಮ್ಮೇಳನ ಅಧ್ಯಕ್ಷರ ಸಲಹೆ



ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಸುಮಂಗಲಿಯರು ಕಲಶ ಹೊತ್ತು ಸಾಗಿದರು.

ಮಡಿಕೇರಿ, ಜೂ.1–ಮಕ್ಕಳಲ್ಲಿ ಕನ್ನಡ ಪ್ರೇಮವನ್ನು ಕಡ್ಡಾಯವಾಗಿ ಬೆಳೆಸಿ ಎಂದು ಪೊನ್ನಂಪೇಟೆ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಟಿ.ಎಸ್. ಗೋಪಾಲ್ ಸಲಹೆ ನೀಡಿದ್ದಾರೆ.

ಪೊನ್ನಂಪೇಟೆ ತಾಲೂಕಿನ ಹುದಿಕೇರಿಯ ಜನತಾ ಪ್ರೌಢಶಾಲಾ ಮೈದಾನದ ಕೂರ್ಗ್ ಸ್ಟಾರ್ ಚೆಕ್ಕೇರ ಅಪ್ಪಯ್ಯ ವೇದಿಕೆಯಲ್ಲಿ ನಡೆದ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡಿದ ಅವರು, ದಕ್ಷಿಣ ಭಾರತದ ದ್ರಾವಿಡ ಭಾಷೆಯಲ್ಲಿ ಕನ್ನಡ ಸೊಗಸಾದ ಭಾಷೆಯಾಗಿದ್ದು, ಮಕ್ಕಳು ನಾಡಿನ ಭಾಷೆಯಾದ ಕನ್ನಡವನ್ನು ಹೆಚ್ಚು ಹೆಚ್ಚು ಕಲಿಯಬೇಕು. ಮಾತೃಭಾಷೆ ಜೊತೆಗೆ ನಾಡಿನ ಭಾಷೆಯನ್ನು ಕಲಿಸಬೇಕು. ಕೊಡಗಿನ ದಕ್ಷಿಣ ಭಾಗ ಕೇರಳಕ್ಕೆ ಹೊಂದಿಕೊಂಡಿರುವುದರಿಂದ ಕನ್ನಡ, ಕೊಡವ, ಮಲೆಯಾಳ, ಆದಿವಾಸಿ ಭಾಷೆಗಳನ್ನು ಮಾತನಾಡುತ್ತಾರೆ. ಪ್ರಾದೇಶಿಕ ಭಾಷೆ ಜೊತೆಗೆ ಇತರ ಭಾಷೆಗಳನ್ನು ಕಲಿಯುವುದರಲ್ಲಿ ಯಾವುದೇ ತಪ್ಪಿಲ್ಲ. ವರ್ತಮಾನದಲ್ಲಿ ಇಂಗ್ಲೀಷ್ ವ್ಯಾವಹಾರಿಕ ಭಾಷೆಯಾಗಿದ್ದು, ಎಲ್ಲಾ ಭಾಷೆಯನ್ನು ಕಲಿಯುವಂತಾಗಬೇಕು. ಆದರೆ ಹೊರಗಿನಿಂದ ನಾಡಿಗೆ ಬಂದವರೂ ಸಹ ಕನ್ನಡ ಕಲಿಯುವಂತಾಗಬೇಕು ಮತ್ತು ಕಲಿಸುವಂತಾಗಬೇಕು ಎಂದು ಸಲಹೆ ಮಾಡಿದರು.

ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್, ಜಿಲ್ಲಾ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ ಚೆರಿಯಪ್ಪಂಡ ಸುರೇಶ್ ನಂಜಪ್ಪ ತಾಪಂ ಇಒ ಕೆ.ಆರ್.ರಾಜೇಶ್ ಮೊದಲಾದವರು ಮಾತನಾಡಿದರು.

ತಹಶೀಲ್ದಾರ್ ಸಂಜನಾ, ಪೊಲೀಸ್ ಉಪ ನಿರ್ದೇಶಕ ಮಹೇಶ್ ಕುಮಾರ್. ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ಮುಖ್ಯಾ ಧಿಕಾರಿ ಗೋಪಿ, ತಾಲೂಕು ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್, ಸಂಘಟನಾ ಕಾರ್ಯದರ್ಶಿ ಬಿ.ಎಂ.ವಾಸುರೈ, ಪೊನ್ನಂಪೇಟೆ ಹೋಬಳಿ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ, ಬಾಳೆಲೆ ಹೋಬಳಿ ಅಧ್ಯಕ್ಷ ಪ್ರಭು ಕುಮಾರ್, ಜಿಮ್ಮಿ ಅಯ್ಯಣ್ಣ, ಚೆಕ್ಕೇರ ಸುಧೀರ್, ದಿವ್ಯ ಕಾವೇರಮ್ಮ, ಪುಟ್ಟರಾಜು, ಇತರರು ಇದ್ದರು.

ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಮಂಗಳ ವಾದ್ಯ, ಚಂಡೆ ವಾದ್ಯ, ಕಳಸ ಹೊತ್ತ ಮಹಿಳೆಯರು, ಗೊಂಬೆಗಳು, ಪೂಜಾ ಕುಣಿತ, ಡೊಳ್ಳು ಕುಣಿತ, ಬ್ಯಾಂಡ್ ಸೆಟ್, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಂಜೀವಿನಿ ಮಹಿಳಾ ಒಕ್ಕೂಟ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ, ಅಂಗನವಾಡಿ ಸಂಘಟನೆ, ಸ್ತ್ರೀಶಕ್ತಿ ಒಕ್ಕೂಟ, ಆಶಾ ಕಾರ್ಯಕರ್ತೆಯರು, ಶಿಕ್ಷಕರುಗಳು, ಸಂಘಸಂಸ್ಥೆ ಸಮಾಜಗಳ ಪ್ರತಿನಿಧಿಗಳು, ಆಟೋ ಮತ್ತು ವಾಹನ ಚಾಲಕರ ಸಂಘದವರು, ಎನ್‌ಸಿಸಿ ತಂಡ, ಸ್ಕೌಟ್ಸ್ ಮತ್ತು ಗೈಡ್ಸ್ ತಂಡ ದೊಂದಿಗೆ ಮೆರವಣಿಗೆ ನಡೆಯಿತು.

ಭಾರಿ ಮಳೆಗೆ ವಿವಿಧೆಡೆ ತೀವ್ರ ಹಾನಿ

ಸಿದ್ದಾಪುರ: ಭಾನುವಾರ ರಾತ್ರಿ ಸುರಿದ ಭಾರಿ ಗಾಳಿ ಮಳೆಯಿಂದ ಸಿದ್ದಾಪುರ, ನೆಲ್ಯಹುದಿಕೇರಿ ಹೋಬಳಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ವ್ಯಾಪಕ ಹಾನಿ ಸಂಭವಿಸಿದೆ.

ನೆಲ್ಯಹುದಿಕೇರಿ ಗ್ರಾಪಂ ವ್ಯಾಪ್ತಿಯ ಕುಂಬಾರಗುಂಡಿ ಗ್ರಾಮದ 3ನೇ ವಾರ್ಡ್‌ನ ಗ್ರಾಪಂ ಸದಸ್ಯ ಮುಸ್ತಫಾ ವಾಸದ ಮನೆಯ ಮೇಲೆ ಭಾರಿ ಗಾತ್ರದ ಹಲಸಿನಮರ ಮುರಿದು ಬಿದ್ದ ಪರಿಣಾಮ ಮನೆಯ ಮೇಲ್ಛಾವಣಿಗೆ ಹಾನಿಯಾಗಿದೆ. ಇದೇ ವೇಳೆ ಗ್ರಾಮದ ನಿವಾಸಿಗಳಾದ ಈಶ್ವರ್ ನಾಯಕ್ ಹಾಗೂ ಶಂಸುದ್ದಿನ್, ಪ್ರಕಾಶ್, ಅನಿಲ್‌ರ ಮನೆಗಳ ಮೇಲೂ ಮರಗಳು ಉರುಳಿ ಬಿದ್ದು ನಷ್ಟ ಉಂಟಾಗಿದ್ದರೂ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದು ಬಂದಿದೆ.

ಭಾರಿ ಗಾಳಿಯ ತೀವ್ರತೆಗೆ ಸಿದ್ದಾಪುರ, ಮಾಲ್ದಾರೆ ಹಾಗೂ ನೆಲ್ಯಹುದಿಕೇರಿ ಗ್ರಾಮಗಳ ವಿವಿಧ ಭಾಗಗಳಲ್ಲಿ ಹಲವಾರು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಇದ ರಿಂದ ಹಲವು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದ್ದು, ಗ್ರಾಮಸ್ಥರು ತೊಂದರೆ ಅನುಭವಿಸುವಂತಾಗಿದೆ. ಮಳೆ ಮತ್ತು ಗಾಳಿಯಿಂದ ರಸ್ತೆಗಳ ಮೇಲೂ ಮರದ ಕೊಂಬೆಗಳು ಬಿದ್ದಿರುವುದರಿಂದ ವಾಹನ ಸಂಚಾರಕ್ಕೂ ಅಡಚಣೆ ಉಂಟಾಗಿತ್ತು. ಹಾನಿಗೊಳಗಾದ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.



ಹಲಸಿನ ಮರ ಉರುಳಿ ಬಿದ್ದ ಪರಿಣಾಮ ಮನೆಗೆ ತೀವ್ರ ಹಾನಿಯಾಗಿರುವುದು.

ತೈಲ ಬೆಲೆ ಏರಿಕೆಯಿಂದ ಬಡ ಚಾಲಕರಿಗೆ ಸಮಸ್ಯೆ

ವಿರಾಜಪೇಟೆ, ಜೂ.1–ಆಟೋರಿಕ್ಷಾಗಳಿಗೆ ಇತ್ತೀಚೆಗೆ ಸಿ.ಎನ್.ಜಿ.ಗ್ಯಾಸ್ ಸಿಲಿಂಡರ್ ದೊರಕುತ್ತಿಲ್ಲ, ಪೆಟ್ರೋಲ್ ಮತ್ತು ಡೀಜೆಲ್ ಬೆಲೆ ಏರಿಕೆಯಿಂದಾಗಿ ಆಟೋರಿಕ್ಷವನ್ನೆ ನಂಬಿ ಬದುಕುತ್ತಿರುವ ಬಡ ಚಾಲಕರಿಗೆ ಸಮಸ್ಯೆ ಉಂಟಾಗಿದೆ ಎಂದು ಜೈ ಭಾರತ್ ಆಟೋ ಚಾಲಕರ ಸಂಘದ ಅಧ್ಯಕ್ಷ ಎನ್.ಎನ್.ಶಿವು ಹೇಳಿದರು.

ಇದುವರೆಗೂ ಆಟೋ ಪ್ರಯಾಣಿಕರಿಂದ 40 ರೂ. ಪಡೆಯುತ್ತಿದ್ದೆವು. ಇಂಧನ ಬೆಲೆ ಏರಿಕೆ ಕಾರಣದಿಂದಾಗಿ 50ರೂ. ಪಡೆದುಕೊಳ್ಳಬೇಕಾಗಿದೆ. ಇದರ ಬಗ್ಗೆ ಸಾರಿಗೆ ಅಧಿಕಾರಿ ಆಟೋ ಪ್ರಯಾಣ ದರ ಹೆಚ್ಚಿಸಲು ಅನುಮತಿ ನೀಡಬೇಕೆಂದು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು. ರಸ್ತೆ ಬದಿಯಲ್ಲಿ ಚರಂಡಿಗಳಿಲ್ಲದೆ ಮಳೆಗಾಲದಲ್ಲಿ ರಸ್ತೆಯಲ್ಲಿಯೇ ನೀರು ಹರಿಯುವುದರಿಂದ ವಾಹನ ಸಂಚಾರಕ್ಕೂ ಅಡಚಣೆಯಾಗುತ್ತಿದೆ ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಸಂಘದ ಸದಸ್ಯರಾದ ಬಿ.ವಿ.ವಸಂತ, ರೋಶನ್, ಎಸ್.ಶುಭಕರ್, ಕಿರಣ್, ಬಿ.ಎಸ್.ಅರುಣ್, ಸುರೇಶ್ ಕುಮಾರ್ ಉಪಸ್ಥಿತರಿದ್ದರು.

ಗುಲಾಬಿ ಹೂ, ಸಿಹಿ ನೀಡಿ ವಿದ್ಯಾರ್ಥಿಗಳನ್ನು ಸ್ವಾಗತಿಸಿದ ಡಿಸಿ

ಪರಿಶ್ರಮದಿಂದ ಯಶಸ್ಸು ಸಾಧ್ಯ : ವಿದ್ಯಾರ್ಥಿಗಳಿಗೆ ಡಿಸಿ ಸಲಹೆ

ಚಾಮರಾಜನಗರ, ಜೂ.1– ಪ್ರತಿ ವಿದ್ಯಾರ್ಥಿಯಲ್ಲೂ ಪ್ರತಿಭೆ ಇರುತ್ತದೆ. ಪರಿಶ್ರಮ ಪಟ್ಟರೆ ಯಶಸ್ಸು ಸಾಧ್ಯವಾಗಿ ಉತ್ತಮ ಜೀವನ ರೂಪಿಸಿಕೊಳ್ಳಬಹುದೆಂದು ಜಿಲ್ಲಾಧಿಕಾರಿ ಶ್ರೀರೂಪ ಸಲಹೆ ಮಾಡಿದರು.

ನಗರದ ಸರ್ಕಾರಿ ಪದವಿಪೂರ್ವ ಬಾಲಕರ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಆಯೋಜಿಸಲಾಗಿದ್ದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಗುಲಾಬಿ ಹೂವು, ಸಿಹಿ ವಿತರಿಸಿ ಸ್ವಾಗತಿಸಿದ ಬಳಿಕ ನಡೆದ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸಕ್ತ ಶೈಕ್ಷಣಿಕ ಅವಧಿಯ ಆರಂಭದಲ್ಲಿಯೇ ವಿದ್ಯಾರ್ಥಿಗಳು ಉತ್ಸಾಹದಿಂದ ಶಾಲೆಗೆ ಬಂದಿದ್ದಾರೆ. ಇದು ಮುಂದಿನ ಯಶಸ್ಸಿಗೆ ಬುನಾದಿಯಾಗಲಿದೆ ಎಂಬ ವಿಶ್ವಾಸ ಕಂಡು ಬರುತ್ತಿದೆ. ಎಸ್‌ಎಸ್‌ಎಲ್‌ಸಿಯ 1 ಮತ್ತು 2ರ ಪರೀಕ್ಷೆಗಳಲ್ಲಿ ಶೇ.97 ರಷ್ಟು ಫಲಿತಾಂಶ ಜಿಲ್ಲೆಗೆ ಬಂದಿದೆ ಮುಂದಿನ ಫಲಿತಾಂಶ ಶೇ.100ರಷ್ಟು ಆಗಲಿ ಎಂಬುದು ತಮ್ಮ ಆಶಯವಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯ ಪುಸ್ತಕಗಳನ್ನು ವಿತರಿಸಿದರು. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಲಿಖಿತ್, ಚರಣ್, ಯಶವಂತ್ ಅವರನ್ನು ಸನ್ಮಾನಿಸಲಾಯಿತು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಶೆಟ್ಟಿ, ಪ್ರಾಂಶುಪಾಲರಾದ ನಾರಾಯಣ, ಬಿ.ಆರ್.ಸಿ. ರಾಜು, ನಿವೃತ್ತ ಪ್ರಾಂಶುಪಾಲ ಸೋಮಣ್ಣ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಸಾರೋಟಿನಲ್ಲಿ ಶಾಲಾ ವಿದ್ಯಾರ್ಥಿಗಳನ್ನು ಕರೆತರಲಾಯಿತು. ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಪಾಟೀಲ್, ಇತರೆ ಅಧಿಕಾರಿಗಳು ವಿದ್ಯಾರ್ಥಿಗಳನ್ನು ಗುಲಾಬಿ ಹೂ, ಸಿಹಿ ನೀಡಿ ಸ್ವಾಗತಿಸಿದರು.

ಬಳಿಕ ಶತಮಾನ ಪೂರೈಸಿದ ನಗರದ ಸರ್ಕಾರಿ ಪೇಟೆ ಪ್ರೈಮರಿ ಶಾಲೆಯಲ್ಲಿ ಆಯೋಜಿಸಲಾಗಿದ್ದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಭಾಗವಹಿಸಿ ಮಕ್ಕಳಿಗೆ ಪುಷ್ಪವೃಷ್ಟಿಗರೆದು, ಸಿಹಿ ನೀಡಿ ಸಂಭ್ರಮದಿಂದ ಬರ ಮಾಡಿಕೊಂಡರು. ಕೇಕ್ ಕತ್ತರಿಸಿ ಮಕ್ಕಳಿಗೆ ವಿತರಿಸಿದರು. ಶಾಲಾ ಆವರಣದಲ್ಲಿ ಗಿಡ ನೆಟ್ಟು ನೀರೆರೆದರು. ಎಲ್.ಕೆ.ಜಿ ಪ್ರಾರಂಭೋತ್ಸವವನ್ನು ನೆರವೇರಿಸಿದರು.



ವಿದ್ಯಾರ್ಥಿಗಳಿಗೆ ಗುಲಾಬಿ ಹೂವು, ಸಿಹಿ ವಿತರಿಸುತ್ತಿರುವ ಜಿಲ್ಲಾಧಿಕಾರಿ.

ಶಾಲೆ ಆವರಣಕ್ಕೆ ಸುಣ್ಣ ಬಣ್ಣ ಹೊಡೆದು ಕೊಠಡಿಗಳಲ್ಲಿ ಚಿತ್ರಕಲೆ ಬಿಡಿಸುವ ಕಾರ್ಯ ನೆರವೇರಿಸಿರುವ ರೋಟರಿ ಸಿಲ್ಕ್ ಸಿಟಿ, ಗುಡ್ ಹ್ಯಾಬಿಟ್ ಫೌಂಡೇಶನ್, ಹಸಿರು ಪಡೆ, ಶ್ರೀ ಬಸವರಾಜೇಂದ್ರ ಆಸ್ಪತ್ರೆ, ಇತರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳಾದ ಡಾ. ಬಸವರಾಜೇಂದ್ರ, ಡಾ. ಶ್ವೇತಾ, ಡಿ.ಎಸ್. ಗಿರೀಶ್, ಶಮಿತ್ ಕುಮಾರ್, ಮನೋಜ್ ಕುಮಾರ್, ಸಂತೋಷ್ ಕುಮಾರ್, ಶರತ್ ಸುಂದರ್, ಮಣಿಕಂಠಸ್ವಾಮಿ, ಶ್ರೀಧರ್, ಮಣಿಕ್ಯಾ ಸಿರ್ವಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಪಾಟಿಲ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಶೆಟ್ಟಿ ಇದ್ದರು.

ಚಾಮರಾಜನಗರ ಜಿಲ್ಲೆಯ ಶಾಸಕರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಪ್ರತಿಭಟನೆ



ಕರ್ನಾಟಕ ಸೇನಾಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ: ಜಿಲ್ಲೆಯ ಶಾಸಕರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಕರ್ನಾಟಕ ಸೇನಾಪಡೆಯ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಕನ್ನಡ ಧ್ವಜ ಹಿಡಿದು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯದ ಗಡಿಪ್ರದೇಶವಾದ ಚಾಮರಾಜನಗರ ಜಿಲ್ಲೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಜಿಲ್ಲೆಯ ಶಾಸಕರುಗಳಿಗೆ ಮಂತ್ರಿ ಸ್ಥಾನ ನೀಡುವಂತೆ ಒತ್ತಾಯಿಸಿದರು.

ನೂತನ ಸಚಿವ ಸಂಪುಟದಲ್ಲಿ ನಮ್ಮ ಜಿಲ್ಲೆಗೆ ಪ್ರಾತಿನಿಧ್ಯತೆ. ನೀಡಬೇಕು. ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್ ಅವರುಗಳ ಹಿರಿತನ, ಅನುಭವವನ್ನು ಪರಿಗಣಿಸಿ ಜಿಲ್ಲೆಗೆ ಸಚಿವ ಸ್ಥಾನ ನೀಡಬೇಕು ಎಂದು ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.

ವಿಶ್ವ ಹಾಲು ದಿನಾಚರಣೆ ಅಂಗವಾಗಿ

ಚಾಮುಲ್‌ನಿಂದ ರೋಗಿಗಳಿಗೆ ಹಾಲು ವಿತರಣೆ

ಚಾಮರಾಜನಗರ: ವಿಶ್ವ ಹಾಲು ದಿನದ ಅಂಗವಾಗಿ ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದಿಂದ ನಗರದಲ್ಲಿರುವ ಜಿಲ್ಲಾ ಆಸ್ಪತ್ರೆ ಯ ತಾಯಿ ಮತ್ತು ಮಕ್ಕಳ ವಿಭಾಗದಲ್ಲಿರುವ ಒಳ ರೋಗಿಗಳಿಗೆ ನಂದಿನಿ ಟೆಟ್ರಾ ಹಾಲಿನ ಪ್ಯಾಕೆಟ್‌ಗಳನ್ನು ಚಾಮುಲ್‌ನಿಂದ ವಿತರಿಸಲಾಯಿತು.

ಬಳಿಕ ತಾಯಂದರಿಗೆ ವಿಶ್ವ ಹಾಲು ದಿನದ ಶುಭಾಶಯ ಕೋರಿ, ಹಾಲಿನ ಮಹತ್ವ ಮತ್ತು ನಂದಿನಿ ಹಾಲನ್ನೇ ಬಳಸುವಂತೆ ಜಾಗೃತಿ ಮೂಡಿಸಿದರು. ನಂತರ ಚಾಮುಲ್ ನಿರ್ದೇಶಕ ಎಚ್.ಎಸ್.ಬಸವರಾಜು ಮಾತನಾಡಿ, ಪ್ರತಿ ವರ್ಷ ವಿಶ್ವ ಹಾಲು ದಿನದಂದು ಶಾಲಾ ಮಕ್ಕಳಿಗೆ ಹಾಗೂ ಸರ್ಕಾರಿ ಆಸ್ಪತ್ರೆಯಲ್ಲಿರುವ ತಾಯಿ ಮತ್ತು ಮಕ್ಕಳಿಗೆ ಚಾಮುಲ್‌ನಿಂದ ಹಾಲು ವಿತರಿಸಲಾಗುತ್ತಿದೆ. ರೈತರ ಸಂಸ್ಥೆಯಾಗಿರುವ ಚಾಮುಲ್ ಬೆಳವಣಿಗೆಯಿಂದ ಜಿಲ್ಲೆಯ ಅಭಿವೃದ್ಧಿಯಾಗುತ್ತಿದ್ದು, ಪ್ರತಿಯೊಬ್ಬರು ನಂದಿನಿ ಹಾಲು ಬಳಸಬೇಕು ಎಂದರು.



ಬಳಿಕ ಚಾಮುಲ್ ವ್ಯವಸ್ಥಾಪಕ ನಿರ್ದೇಶಕ ರಾಜಕುಮಾರ್ ಮಾತನಾಡಿ, ಪ್ರಸ್ತುತ ಕೆಎಂಎಫ್‌ನಲ್ಲಿ 1.12 ಕೋಟಿ ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಇದರಲ್ಲಿ 150ಕ್ಕೂ ಹೆಚ್ಚು ಹಾಲಿನ ಉತ್ಪನ್ನಗಳನ್ನು ತಯಾರು ಮಾಡುತ್ತಿದ್ದೇವೆ. ಅಲ್ಲದೇ ಕರ್ನಾಟಕ ಮತ್ತು ಹೊರ ರಾಜ್ಯಗಳಿಗೆ ನಂದಿನಿ ಹಾಲು, ಮೊಸರು ಸರಬರಾಜು ಮಾಡಲಾಗುತ್ತದೆ. ಗ್ರಾಹಕರಿಗೆ ಆರೋಗ್ಯಕರವಾದ ಮತ್ತು ಉತ್ಕೃಷ್ಟವಾದ ನಂದಿನಿ ಉತ್ಪನ್ನಗಳನ್ನು ನೀಡುತ್ತಿದ್ದೇವೆ ರೈತರ ಸಂಸ್ಥೆಯಾಗಿರುವ ಚಾಮುಲ್‌ಗೆ ಹೆಚ್ಚಿನ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕರಾದ ಸದಾಶಿವಮೂರ್ತಿ, ಕಮರವಾಡಿ ರೇವಣ್ಣ, ಜಿಲ್ಲಾ ಸರ್ಜನ್ ಚಿನ್ನಬೋವಿ, ಆಸ್ಪತ್ರೆಯ ಹೆರಿಗೆ ವಿಭಾಗದ ಮುಖ್ಯಸ್ಥ ಡಾ. ಪ್ರದೀಪ್, ಚಾಮುಲ್ ಮಾರುಕಟ್ಟೆ ವಿಭಾಗದ ವ್ಯವಸ್ಥಾಪಕ ಶಿವಕುಮಾರ್, ಶೇಖರಣೆ ವಿಭಾಗ ಉಪವ್ಯವಸ್ಥಾಪಕ ಡಾ.ಅಮರ್, ಮಾರುಕಟ್ಟೆ ವಿಭಾಗದ ಪಿ.ನೂತನ್, ಆರ್. ನವೀನ್‌ಕುಮಾರ್ ಇತರರು ಇದ್ದರು.

ಸೇವಾ ಭಾರತಿ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಸಂಭ್ರಮ

ಚಾಮರಾಜನಗರ: ಶಾಲಾ ಪ್ರಾರಂಭೋತ್ಸವವನ್ನು ನಗರದ ಶಂಕರಪುರ ಬಡಾವಣೆಯಲ್ಲಿರುವ ಸೇವಾ ಭಾರತಿ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು.



ಹೊಸ ಶೈಕ್ಷಣಿಕ ವರ್ಷದ ಅಂಗವಾಗಿ ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ ಸೇವಾ ಭಾರತಿ ಸಂಸ್ಥೆಯ ಬಾಲಸುಬ್ರಹ್ಮಣ್ಯಂ ವಿದ್ಯಾರ್ಥಿಗಳನ್ನು ಸ್ವಾಗತಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀನಿವಾಸ್ ಮಾತನಾಡಿ, ವಿದ್ಯಾರ್ಥಿಗಳು ಶಿಸ್ತು ಮತ್ತು ಪರಿಶ್ರಮದ ಮೂಲಕ ಉತ್ತಮ ಶಿಕ್ಷಣ ಪಡೆದು ಸಾಧನೆ ಮಾಡಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಸಿಹಿ ಹಂಚುವ ಮೂಲಕ ಹೊಸ ಶೈಕ್ಷಣಿಕ ವರ್ಷದ ಶುಭಾರಂಭವನ್ನು ಸಂಭ್ರಮದಿಂದ ಆಚರಿಸಿದರು.

ನಾಳೆ ಡಿಕೆಶಿ ನೇತೃತ್ವದ ಹೊಸ ಸರ್ಕಾರ ಅಸ್ತಿತ್ವಕ್ಕೆ

ಜಿಲ್ಲೆಯಲ್ಲಿ ಸಚಿವ ಸ್ಥಾನ ಪಡೆಯಲು ಕಸರತ್ತು

ಸಿದ್ದಲಿಂಗಸ್ವಾಮಿ

ಚಾಮರಾಜನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆನ್ನಲ್ಲೇ ರಾಜ್ಯದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಬುಧವಾರ ಅಸ್ತಿತ್ವಕ್ಕೆ ಬರಲಿದ್ದು, ನೂತನ ಸರ್ಕಾರದ ಸಂಪುಟದಲ್ಲಿ ಸ್ಥಾನ ಪಡೆದುಕೊಳ್ಳಲು ಗಡಿ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಶಾಸಕರು ತಮ್ಮದೇ ರಣತಂತ್ರ ಬಳಸಿಕೊಂಡು ಕಾಂಗ್ರೆಸ್ ವರಿಷ್ಠರ ಮನವೊಲಿಸಲು ಕಸರತ್ತು ನಡೆಸುತ್ತಿದ್ದಾರೆ.

ಪ್ರಸ್ತುತ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳಿಂದ ಇನ್ನೂ ಮೂರ್ನಾಲ್ಕು ದಿನಗಳಲ್ಲಿ ರಾಜ್ಯ ರಾಜಕಾರಣದಲ್ಲಿ ಮಹತ್ತರ ಬದಲಾವಣೆಗಳಾಗುವ ಸಾಧ್ಯತೆಗಳು ಹೆಚ್ಚಾಗಿದ್ದು, ಇದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿಯೂ 'ಕೈ' ಪಾಳೇಯದಲ್ಲಿ ಸಾಕಷ್ಟು ರಣತಂತ್ರಗಳು ನಡೆಯುತ್ತಿವೆ.

ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ಇದರಲ್ಲಿ ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಎಚ್.ಎಂ. ಗಣೇಶಪ್ರಸಾದ್ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದು, ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಇನ್ನೂಳಿದ ಎರಡು ಕ್ಷೇತ್ರಗಳ ಶಾಸಕರಾದ ಪುಟ್ಟರಂಗಶೆಟ್ಟಿ ಹಾಗೂ ಎ.ಆರ್. ಕೃಷ್ಣಮೂರ್ತಿ ನಡುವೆ ಪೈಪೋಟಿ ಏರ್ಪಟ್ಟಿದೆ.

ಈಗಾಗಲೇ ಇಬ್ಬರು ನಾಯಕರ ಪರವಾಗಿ ಅವರ ಬೆಂಬಲಿಗರು ಸುದ್ದಿಗಳನ್ನು ನಡೆಸುವ ಮೂಲಕ ತಮ್ಮ– ತಮ್ಮ ನಾಯಕರಿಗೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್‌ನ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ. ಇದರ ಜೊತೆಗೆ ಶಾಸಕ ಪುಟ್ಟರಂಗಶೆಟ್ಟಿ ಅವರು ದೆಹಲಿಯಲ್ಲಿ ಪಕ್ಷದ ಹೈಕಮಾಂಡ್ ಭೇಟಿ ಮಾಡಿ ಓಲೈಕೆ ಮಾಡುತ್ತಿದ್ದಾರೆ. ಮತ್ತೊಂದೆಡೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ದಲಿತ ಕೋಟಾದಡಿ ನನಗೆ ಸಚಿವ ಸ್ಥಾನ ದೊರೆಯಲಿದೆ ಎಂಬ ಅಪಾರ ವಿಶ್ವಾಸದಲ್ಲಿದ್ದಾರೆ. ಆದರೆ, ಪಕ್ಷದ ವರಿಷ್ಠರು ಯಾರಿಗೆ ಮಣೆ ಹಾಕಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ.

ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ ನಡುವೆ ಪೈಪೋಟಿ



ಜಿಲ್ಲೆಯಲ್ಲಿ ಪರಿಶಿಷ್ಟರಿಗೆ ಹೆಚ್ಚಿನ ಅವಧಿಯಲ್ಲಿ ಸಚಿವ ಸ್ಥಾನ ದೊರಕಿಲ್ಲ. ಇದಲ್ಲದೇ ರಾಜ್ಯದ 224 ವಿಧಾನ ಸಭಾ ಕ್ಷೇತ್ರಗಳಲ್ಲಿ ಅತಿ ಹೆಚ್ಚು ಮತ ಪಡೆದ ಶಾಸಕರ ಪೈಕಿ ನಾನು 5ನೇ ಸ್ಥಾನದಲ್ಲಿದ್ದೇನೆ. ಹೀಗಾಗಿ ನಾನು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ.

–ಎ.ಆರ್. ಕೃಷ್ಣಮೂರ್ತಿ, ಕೊಳ್ಳೇಗಾಲ ಶಾಸಕರು.



ನಾಲ್ಕು ಬಾರಿ ಸತತವಾಗಿ ನಾನು ಗೆಲುವು ಸಾಧಿಸಿದ್ದೇನೆ. ಹಿರಿತನದಲ್ಲೂ ಪರಿಗಣನೆಗೆ ತೆಗೆದುಕೊಂಡರೂ ನನ್ನ ಹೆಸರೇ ಮುಂಚೂಣಿಯಲ್ಲಿದ್ದು, ಸಚಿವ ಸಂಪುಟ ಪುನಾರಚನೆಯಾದಲ್ಲಿ ನನಗೆ ಸಚಿವ ಸ್ಥಾನ ದೊರೆಯುವ ವಿಶ್ವಾಸ ಸಂಪೂರ್ಣವಾಗಿದೆ.

–ಸಿ. ಪುಟ್ಟರಂಗಶೆಟ್ಟಿ, ಚಾಮರಾಜನಗರ ಶಾಸಕರು.



ಸಚಿವ ಸ್ಥಾನದ ರೇಸ್‌ನಲ್ಲಿ ಎಆರ್‌ಕೆ ಹೆಸರು: ಕೊಳ್ಳೇಗಾಲ ಮೀಸಲು ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ರಾಜಕೀಯವಾಗಿ ಸಾಕಷ್ಟು ಅನುಭವವುಳ್ಳವರು. ಜಿಲ್ಲೆಯ ಅಭಿವೃದ್ಧಿಗೆ ತಮ್ಮದೇ ಆದ ಹೊಸ ಯೋಜನೆಗಳನ್ನು ರೂಪಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದಾರೆ. ಸಿದ್ದರಾಮಯ್ಯ ಅವರು ಬಿ.ರಾಚಯ್ಯ ಅವರನ್ನು ನನ್ನ ರಾಜಕೀಯ ಗುರುಗಳು ಎನ್ನುತ್ತಿದ್ದಾರೆ. ಹೀಗಾಗಿ, ಸಿದ್ದರಾಮಯ್ಯ ಅವರ ಶ್ರೀರಕ್ಷೆಯೂ ಅವರಿಗಿದೆ. ಇದಲ್ಲದೇ ದಲಿತ ಕೋಟದಡಿ ಅವರಿಗೆ ಸಚಿವ ಸ್ಥಾನ ದೊರೆಯುವ ಸಾಧ್ಯತೆಗಳಿವೆ ಎಂದು ವಿಶ್ವಾಸನೀಯ ಮೂಲ ಗಳಿಂದ ತಿಳಿದು ಬಂದಿದೆ.

ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನದ ಪಟ್ಟ.!: ಜಿಲ್ಲೆಯ ಇತಿಹಾಸದಲ್ಲಿಯೇ ನಿರಂತರ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗುವ ಮೂಲಕ ದಾಖಲೆ ಸೃಷ್ಟಿಸಿರುವ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಈ ಬಾರಿ ಸಂಪುಟ ಪುನರ್ ರಚನೆಯಲ್ಲಿ ಸಚಿವ ಸ್ಥಾನ ದೊರೆಯುವುದು ಬಹುತೇಕ ಖಚಿತ ಎಂಬುದು ಪಕ್ಷದ ಮೂಲಗಳಿಂದ ಕೇಳಿ ಬರುತ್ತಿದೆ.

ಸಿದ್ದರಾಮಯ್ಯ ಅವರ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಪುಟ್ಟರಂಗಶೆಟ್ಟಿ ಅವರು ಹಿಂದುಳಿದ ವರ್ಗ ಉಪ್ಪಾರ ಸಮುದಾಯದ ಏಕೈಕ ಶಾಸಕರೂ ಆಗಿದ್ದಾರೆ. ಜೊತೆಗೆ ಇವರ ಪರವಾಗಿ ಜಿಲ್ಲೆಯ ಪ್ರಮುಖ ಕೈ ನಾಯಕರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಹೆಚ್ಚು ಒಲವು ತೋರುತ್ತಿದ್ದಾರೆ. ಅಲ್ಲದೇ ಅವರಿಗಿರುವ ಹಿರಿತನ, ಹಿಂದುಳಿದ ವರ್ಗಗಳ ಕೋಟ ಹಾಗೂ ಜಿಲ್ಲೆಗೆ ದೊರೆಯುವ ಪ್ರಾತಿನಿಧ್ಯತೆಯಡಿ ಪುಟ್ಟರಂಗಶೆಟ್ಟಿ ಅವರಿಗೆ ಸಚಿವರಾಗುವ ಭಾಗ್ಯ ದೊರೆಯಲಿದೆ ಎಂದು ರಾಜಕೀಯ ವಿಶ್ಲೇಷಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಜೂ.12ರಂದು ಲಲಿತಾ ಜಿ.ಟಿ.ದೇವೇಗೌಡರಿಗೆ ಅಭಿನಂದನೆ

ಲಲಿತಾಭಿನಂದನ ಶೀರ್ಷಿಕೆಯಡಿ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಸಮಾರಂಭ



ಜಲದರ್ಶಿನಿ ಅತಿಥಿಗೃಹದಲ್ಲಿ ಸೋಮವಾರ ಸಭೆ ನಡೆಯಿತು.

ಮೈಸೂರು,ಜೂ.1(ಪಿಎಂ)– ಸಹಕಾರಿ ಕ್ಷೇತ್ರದಲ್ಲಿನ ಅತ್ಯುತ್ತಮ ಸೇವೆಗಾಗಿ ರಾಜ್ಯ ಸರ್ಕಾರ ಕೊಡಮಾಡುವ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾಗಿ ಇತ್ತೀಚೆಗೆ ಮಂಡ್ಯದಲ್ಲಿ ಜಿ.ಎಸ್.ಬೊಮ್ಮೇಗೌಡ ಸ್ಮಾರಕ ಸಹಕಾರ ರತ್ನ ಪ್ರಶಸ್ತಿಗೂ ಭಾಜನರಾದ ಲಲಿತಾ ಜಿ.ಟಿ.ದೇವೇಗೌಡರ ಅಭಿನಂದನಾ ಸಮಾರಂಭ'ವನ್ನು ಜೂ.12ರಂದು ಆಯೋಜಿಸಲು ತೀರ್ಮಾನಿಸಲಾಯಿತು.



ಲಲಿತಾ ಜಿ.ಟಿ.ಡಿ

ಅಂದು ಬೆಳಗ್ಗೆ 10ಕ್ಕೆ ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ 'ಲಲಿತಾಭಿನಂದನ' ಶೀರ್ಷಿಕೆಯಡಿ ಅಭಿನಂದನಾ ಸಮಾರಂಭ ಆಯೋಜಿಸಲು ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸೋಮವಾರ ವಾಗ್ಮಿ ಪ್ರೊ.ಕೃಷ್ಣೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಅಭಿನಂದನಾ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಯಿತು.

ಸಾರ್ವಜನಿಕ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಸಹಕಾರ ಕ್ಷೇತ್ರದಲ್ಲಿ ಸಹ ಅತ್ಯುತ್ತಮವಾಗಿ ಸೇವೆ ಸಲ್ಲಿಸುತ್ತಿರುವ ಲಲಿತಾ ಜಿ.ಟಿ.ದೇವೇಗೌಡರು ಇತ್ತೀಚೆಗೆ ಮಂಡ್ಯದ ಜಿ.ಎಸ್.ಬೊಮ್ಮೇಗೌಡ ಸ್ಮಾರಕ ಸಹಕಾರ ರತ್ನ ಪ್ರಶಸ್ತಿಗೆ ಭಾಜನರಾಗಿರುವ ಸಂದರ್ಭದಲ್ಲಿ ಅವರನ್ನು ಅಭಿನಂದಿಸಬೇಕೆಂದು ಸಭೆಯಲ್ಲಿ ಒಕ್ಕೊರಲ ತೀರ್ಮಾನ ಕೈಗೊಳ್ಳಲಾಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ನಿವೃತ್ತ ಅಧೀಕ್ಷಕ ಅಭಿಯಂತರ ಆರ್.ಕೆ.ರಾಜು ಮತ್ತು ಅಭಿನಂದನಾ ಸಮಿತಿಯ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ಮೈಸೂರಿನ ವಿವಿಧೆಡೆ ತುಸು ಜೋರು–ಹಲವಡೆ ತುಂತುರು ಮಳೆ

ಹುಣಸೂರು ರಸ್ತೆಯಲ್ಲಿ ಬುಡಸಮೇತ ಉರುಳಿದ ಮರ ; ಅದೃಷ್ಟವಶಾತ್ ಯಾವುದೇ ಅನಾಹುತವಿಲ್ಲ



ಮೈಸೂರಿನ ಮಾತೃ ಮಂಡಳಿ ವೃತ್ತದ ಸಮೀಪ ಆದಿಪಂಪ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ಮಳೆ ನೀರಿನೊಂದಿಗೆ ಒಳಚರಂಡಿ ಸಹ ಉಕ್ಕಿ ಹರಿಯುತ್ತಿರುವುದು.



ಜಿಲ್ಲಾಧಿಕಾರಿಗಳ ನಿವಾಸದ ಎದುರು ಫುಟ್‌ಪಾತ್‌ನಲ್ಲಿದ್ದ ಮರ ಬುಡಸಮೇತ ನೆಲಕ್ಕುರುಳಿರುವುದು.

ಮೈಸೂರು,ಜೂ.1(ಪಿಎಂ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸೋಮವಾರ ಮಧ್ಯಾಹ್ನ ಕೆಲವಡೆ ತುಸು ಜೋರು ಮಳೆಯಾಗಿದ್ದರೆ, ಮತ್ತೆ ಹಲವೆಡೆ ತುಂತುರು ಮಳೆಯಷ್ಟೇ ಆಗಿದೆ. ಈ ನಡುವೆ ಗಾಳಿ ಹಿನ್ನೆಲೆಯಲ್ಲಿ ಹುಣಸೂರು ರಸ್ತೆಯಲ್ಲಿ ಜಿಲ್ಲಾಧಿಕಾರಿ ನಿವಾಸದ ಎದುರು ಮರವೊಂದು ಬುಡಸಮೇತ ನೆಲಕ್ಕುರುಳಿತ್ತು. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ.

ಎಂದಿನಂತೆ ಮಳೆ ವೇಳೆ ನಗರದ ವಿವಿಧೆಡೆ ಮರಗಳ ಕೊಂಬೆ ಮುರಿದು ಬಿದ್ದಿದ್ದವು. ಪಾಲಿಕೆಯ ಅಭಯ ತಂಡಗಳಿಂದ ಅವುಗಳನ್ನು ತೆರವುಗೊಳಿಸಲಾಯಿತು. ಮಧ್ಯಾಹ್ನದ ವೇಳೆಗೆ ಮೋಡ ಕವಿದ ವಾತಾವರಣ ಉಂಟಾಯಿತಲ್ಲದೆ, ತುಸು ಗಾಳಿಯೂ ಜೋರಾಯಿತು. ಗುಡುಗು ಸಹ ಕೇಳಿಬಂದಿತು. ಇನ್ನೇನು ಇಡೀ ನಗರದಾದ್ಯಂತ ಧಾರಾಕಾರ ಮಳೆಯಾಗುತ್ತದೆ ಎಂದುಕೊಳ್ಳುವಂತೆ ಸನ್ನಿವೇಶ ನಿರ್ಮಾಣವಾಗಿತ್ತು.



ಯಾದವಗಿರಿಯ ವಿವೇಕಾನಂದ ರಸ್ತೆ ಬದಿಯಲ್ಲಿ ಮುರಿದು ಬಿದ್ದಿರುವ ಬೃಹತ್ ಗಾತ್ರದ ಕೊಂಬೆಗಳನ್ನು ತೆರವು ಮಾಡುತ್ತಿರುವುದನ್ನು ಕಾಣಬಹುದು.

ಆದರೆ ಕೆಲವೆಡೆ ಮಾತ್ರ ತುಸು ಜೋರು ಮಳೆಯಾಗಿದ್ದರೆ, ಉಳಿದೆಡೆ ತುಂತುರು ಮಳೆಯಷ್ಟೇ ಆಗಿದೆ. ಸಂಜೆವರೆಗೂ ಅಲ್ಲಲ್ಲಿ ಮೋಡ ಕವಿದ ವಾತಾವರಣ ಇತ್ತಾದರೂ ರಾತ್ರಿವರೆಗೂ ಮಳೆ ಮತ್ತೆ ಬರಲಿಲ್ಲ. ನಜರ್‌ಬಾದ್ ಹೊರತುಪಡಿಸಿ ನಗರದ ಹೃದಯಭಾಗದ ಬಹುತೇಕ ಕಡೆಗಳಲ್ಲಿ ತುಂತುರು ಮಳೆಯಾಗಿದೆ. ವಿಜಯನಗರ 3ನೇ ಹಂತ ಸೇರಿದಂತೆ ನಗರದ ಹೊರವಲಯದಲ್ಲಿ ತುಸು ಜೋರು ಮಳೆಯಾಗಿದೆ ಎಂದು ವರದಿಯಾಗಿದೆ.

ನೆಲಕ್ಕುರಳಿದ ಬೃಹತ್ ಮರ: ಜಿಲ್ಲಾಧಿಕಾರಿಗಳ ನಿವಾಸದ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಹುಣಸೂರು ರಸ್ತೆಯ ಫುಟ್‌ಪಾತ್‌ನಲ್ಲಿದ್ದ ಮರವೊಂದು ಸೋಮವಾರ ಸಂಜೆ 4 ಗಂಟೆ ಸುಮಾರಿಗೆ ನೆಲಕ್ಕುರುಳಿದೆ. ಅದೃಷ್ಟವಶಾತ್ ಯಾರಿಗೂ ಯಾವುದೇ ರೀತಿಯ ಅಪಾಯವಾಗಿಲ್ಲ. ಜೊತೆಗೆ ಯಾವುದೇ ವಾಹನವೂ ಜಖಂಗೊಂಡಿಲ್ಲ. ಬುಡ ಸಡಿಲಗೊಂಡಿದ್ದ ಹಿನ್ನೆಲೆಯಲ್ಲಿ ಈ ಮರ ಬಿದ್ದಿದೆ ಎಂದು ಹೇಳಲಾಗಿದ್ದು, ಎತ್ತರದ ಮರವಾಗಿದ್ದ ಹಿನ್ನೆಲೆಯಲ್ಲಿ ಅದು ಹುಣಸೂರು ರಸ್ತೆಯ ಎರಡೂ ಪಥವನ್ನು ಪೂರ್ಣ ಪ್ರಮಾಣದಲ್ಲಿ ಆವರಿಸಿಕೊಂಡು ಬಿದ್ದಿತ್ತು. ಹೀಗಾಗಿ ವಾಹನ ಸಂಚಾರ ಅಸಾಧ್ಯವಾಗಿತ್ತು.

ಕೂಡಲೇ ಸ್ಥಳಕ್ಕೆ ಧಾವಿಸಿ ಬಂದ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ಇಲ್ಲಿ ಸಂಚಾರ ನಿರ್ಬಂಧಿಸಿ ಪಾಲಿಕೆಯ ಅಭಯ ತಂಡವು ಮರ ತೆರವು ಕಾರ್ಯಾಚರಣೆ ನಡೆಸಲು ಅನುವು ಮಾಡಿಕೊಟ್ಟರು. ಸಂಜೆ 5 ಗಂಟೆ ವೇಳೆಗೆಲ್ಲಾ ಮರವನ್ನು ರಸ್ತೆಯಿಂದ ತೆರವುಗೊಳಿಸಿ, ಸಂಚಾರಕ್ಕೆ ಮುಕ್ತಗೊಳಿಸಲಾಯಿತು.

ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿಯೂ ಬೃಹತ್ ಗಾತ್ರದ ಕೊಂಬೆಗಳು ಬಿದ್ದಿದ್ದವು. ಹೆಬ್ಬಾಳು, ವಿಜಯನಗರ 3ನೇ ಹಂತ, ಗೋಕುಲಂ ಮುಖ್ಯ ರಸ್ತೆ ಸೇರಿದಂತೆ ವಿವಿಧೆಡೆ ಕೊಂಬೆಗಳು ಮುರಿದು ಬಿದ್ದಿದ್ದವು. ಪಾಲಿಕೆ ಅಭಯ ತಂಡಗಳು ಅವುಗಳನ್ನು ತೆರವುಗೊಳಿಸಿದವು.

ಜಮೀರ್ ಈ ರೀತಿ ಮಾಡ್ತಾರೆ ಅಂತ ಗೊತ್ತಿರಲಿಲ್ಲ: ಸಮರ್ಥ್ ಶಾಮನೂರು ಬೇಸರ

ದಾವಣಗೆರೆ: ಜಮೀರ್ ಹಾಗೂ ಕೆಎಂಡಿಸಿ ನಿರ್ದೇಶಕ ಸಿರಾಜ್ ಮೊಹಮ್ಮದ್ ಅವರದ್ದು ಎನ್ನಲಾದ ಆಡಿಯೋ ವಿಚಾರವಾಗಿ ಸಮರ್ಥ ಶಾಮನೂರು ಬೇಸರ ಹೊರಹಾಕಿದ್ದಾರೆ.



ನಗರದಲ್ಲಿ ಮಾಧ್ಯಮದ ಜೊತೆ ಅವರು ಮಾತನಾಡಿದರು. ಈ ವೇಳೆ, ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯ ವೇಳೆ ಸಚಿವ ಜಮೀರ್ ಅಹಮ್ಮದ್ ಹಾಗೂ ಕೆಎಂಡಿಸಿ ನಿರ್ದೇಶಕ ಸಿರಾಜ್ ಮೊಹಮ್ಮದ್ ಸೇರಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಷಡ್ಯಂತ್ರ ನಡೆಸಿದ್ದರು ಎನ್ನಲಾದ ಆಡಿಯೋ ಬಗ್ಗೆ ಪ್ರತಿಕ್ರಿಯಿಸಿದರು. ಜಮೀರ್ ಅವರನ್ನು ನಂಬಿದ್ದೆ, ಆದರೆ ಈ ರೀತಿ ಮಾಡ್ತಾರೆ ಅಂತ ಗೊತ್ತಿರಲಿಲ್ಲ ಎಂದು ಬೇಸರ ಹೊರಹಾಕಿದ್ದಾರೆ.

ಆಡಿಯೋದಲ್ಲಿ ಇರುವುದು ಸತ್ಯ. ಇದೆಲ್ಲ ಓಪನ್ ಸೀಕ್ರೆಟ್, ಈಗ ಸಾಕ್ಷಿ ಮುಂದೆ ಬಂದಿದೆ. ಈ ಕ್ಲಿಪ್ ನೋಡಿದರೆ ಗೊತ್ತಾಗುತ್ತದೆ ನಮ್ಮವರು ಮಾತ್ರ ಅಲ್ಲ ಎಸ್‌ಡಿಪಿಐ, ಪಕ್ಷೇತರ ಹಾಗೂ ಬಿಜೆಪಿಯವರು ಷಡ್ಯಂತ್ರ ನಡೆಸಿದ್ದಾರೆ. ಎಲ್ಲರೂ ಎಷ್ಟು ಒಗ್ಗಟ್ಟಿನಿಂದ ಷಡ್ಯಂತ್ರ ನಡೆಸಿದ್ದಾರೆ ಎಂದು ಇದರಿಂದ ಗೊತ್ತಾಗಲಿದೆ. ದುಗ್ಗಮ್ಮನ ಆಶೀರ್ವಾದದಿಂದ ಈಗ ಎಲ್ಲಾ ಹೊರಗೆ ಬಂದಿದೆ. ಎಲ್ಲಾ ದೇವರು ನೋಡಿಕೊಳ್ಳುತ್ತಾರೆ.

ಜಮೀರ್ ಅವರು ಮನೆಗೆ ಬಂದು ಮಾತನಾಡಿದ್ದನ್ನು ನಾನು ನಂಬಿದ್ದೆ. ಅವರು ಹೀಗೆ ಮಾಡ್ತಾರೆ ಅಂತ ನಾನು ಅಂದು ಕೊಂಡಿರಲಿಲ್ಲ. ಏನೇ ಮಾಡಿದರು ನಮ್ಮ ಊರಿನ ಜನರು ನನ್ನನ್ನು ಕಾಪಾಡಿದ್ದಾರೆ. ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಕೇಳಿದ್ದರು. ಜನರು ನಮಗೆ ಮೋಸ ಮಾಡಿಲ್ಲ. ಆದರೆ ಲೀಡರ್‌ಗಳು ಅವರ ಬೇಳೆ ಬೇಯಿಸಿಕೊಳ್ಳುವ ಕೆಲಸ ಮಾಡಿದರು. ಮುಸ್ಲಿಂ ಸಮುದಾಯದ ಮತಗಳು ನಮಗೆ ಬಿದ್ದಿವೆ. ಶೇಮ್‌ಲೆಸ್ ಲೀಡರ್‌ಗಳು ಷಡ್ಯಂತರ ಮಾಡಿದ್ದಾರೆ. ಪಾರ್ಟಿ ಯಾರಿಗೆ ನಿರ್ಧಾರ ಮಾಡುತ್ತೋ ಅವರಿಗೆ ಕೆಲಸ ಮಾಡುತ್ತೇವೆ ಎಂದು ಹೇಳಿದ್ದರು. ಒಳಗೊಳಗೆ ಮೋಸ ಮಾಡಿದರೆ ಏನು ಮಾಡೋದು ಹೇಳಿ. ಇದರ ಬಗ್ಗೆ ಹೈಕಮಾಂಡ್ ಯಾವ ನಿರ್ಧಾರ ತೆಗೆದುಕೊಳ್ಳುತ್ತದೆಯೋ ಅವರಿಗೆ ಬಿಟ್ಟಿದ್ದು. ಆದರೆ ನಮ್ಮನ್ನು ಕಾಯಕವೇ ಕಾಪಾಡುತ್ತದೆ. ಯಾರೇ ಷಡ್ಯಂತ್ರ ನಡೆಸಿದರೂ ನಮ್ಮ ಮತದಾರರು ಕೈ ಹಿಡಿದಿದ್ದಾರೆ. ಬಿಜೆಪಿ, ಎಸ್‌ಡಿಪಿಐ ಪಕ್ಷೇತರರು ಒಂದೇ ಪಾರ್ಟಿಯಾಗಿ ಕೆಲಸ ಮಾಡಿದ್ದಾರೆ. ಆದರೂ ಕೂಡ ಅವರು ಗೆಲ್ಲಲು ಸಾಧ್ಯವಾಗಲಿಲ್ಲ ಎಂದಿದ್ದಾರೆ.

ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ನಕಲಿ ಆಡಿಯೋ



ಬೆಂಗಳೂರು: ರಾಜ್ಯದ ಕೆಲವು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ನನ್ನ ಕುರಿತ ಆಡಿಯೊ ನಕಲಿಯಾಗಿದ್ದು, ಎ.ಐ ತಂತ್ರಜ್ಞಾನ ಬಳಸಿ ಮಾಡಲಾಗಿದೆ ಎಂದು ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇದೊಂದು ರಾಜಕೀಯ ಷಡ್ಯಂತ್ರ, ನಕಲಿ ಆಡಿಯೊ ಮಾಡಿ ಜಾಲತಾಣದಲ್ಲಿ ಹರಿಬಿಟ್ಟವರ ವಿರುದ್ಧ ಸೈಬರ್ ಠಾಣೆಗೆ ದೂರು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಆಡಿಯೊ ಬಗ್ಗೆ ಯಾವ ತನಿಖೆಗೆ ಬೇಕಾದರೂ ಒಳಪಡಿಸಲಿ ಎಂದು ಸವಾಲು ಹಾಕಿದ್ದಾರೆ. ನಾನು ಆ ರೀತಿ ಮಾತನಾಡಿಲ್ಲ. ಗೊಂದಲ ಉಂಟು ಮಾಡಲು ಇದೆಲ್ಲವೂ ಸೃಷ್ಟಿ ಮಾಡಲಾಗಿದೆ. ಇದು ಕಿಡಿಗೇಡಿಗಳ ಕೃತ್ಯ, ಇದನ್ನು ಯಾರೂ ನಂಬಬಾರದು ಎಂದು ತಿಳಿಸಿದ್ದಾರೆ.

ಅಭಿನಂದನೆ



ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ.ಶಿವಕುಮಾರ್ ಅವರನ್ನು ರಾಜ್ಯ ಒಕ್ಕಲಿಗರ ಸಂಘದಿಂದ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್, ಗೌರವಾಧ್ಯಕ್ಷ ಬಿ.ಕೆಂಚಪ್ಪಗೌಡ, ಉಪಾಧ್ಯಕ್ಷ ರೇಣುಕಾ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ನಿರ್ದೇಶಕ ಎಂ.ಡಿ.ಮಂಜೇಗೌಡ, ಧರ್ಮೇಶ್ ಸಿರಿಬೈಲ್, ಹನುಮಂತ ರಾಯಪ್ಪ, ಲೋಕೇಶ್, ವೆಂಕಟರಮಣೇಗೌಡ, ಡಾ. ನಾರಾಯಣಸ್ವಾಮಿ, ಹನುಮಂತಯ್ಯ ಇತರರು ಹಾಜರಿದ್ದಾರೆ.

ರಾಜೀವ್ ಗಾಂಧಿ ವಸತಿ ಯೋಜನೆಯಡಿ ಮನೆ ನಿರ್ಮಾಣಕ್ಕೆ ಅನುದಾನ

ಮೈಸೂರು, ಜೂ.1– ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮ, ಹಾಗೂ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತೀಸೂಕ್ಷ್ಮ ಸಮುದಾಯದವರಿಗೆ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಪ್ರಸ್ತುತ ಹಾಲಿ ನಿವೇಶನ ಹೊಂದಿರುವ ಅರ್ಹ ಫಲಾಪೇಕ್ಷಿಗಳು ಮನೆ ನಿರ್ಮಾಣಕ್ಕಾಗಿ ರಾಜೀವ್ ಗಾಂಧಿ ವಸತಿ ನಿಗಮದಿಂದ ರೂ. 2.00 ಲಕ್ಷಗಳನ್ನು ಮಂಜೂರು ಮಾಡಲು ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿನ ಸದರಿ ಸಮುದಾಯದ ಅರ್ಹ ಅಭ್ಯರ್ಥಿ ಗಳಿಂದ ಸ್ವ–ವಿವರದ ಮಾಹಿತಿ ಹಾಗೂ ದಾಖಲೆಗಳನ್ನು ಆಹ್ವಾನಿಸಲಾಗಿದೆ. ಫಲಾಪೇಕ್ಷಿಗಳು ದಾಖಲಾತಿಗಳೊಂದಿಗೆ ಸ್ವ–ವಿವರವುಳ್ಳ ಮಾಹಿತಿಯನ್ನು ಆಯಾ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಸಯ್ಯನಹುಂಡಿ ಬಳಿ ಕಾರುಗಳ ಮುಖಾಮುಖಿ ಡಿಕ್ಕಿ

ಮೈಸೂರು, ಜೂ.1(ಎಸ್‌ಪಿಎನ್)– ಮಹೀಂದ್ರ ಥಾರ್, ಎಕ್ಸ್‌ಯುವಿ 500 ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಚಾಲಕ ಗಾಯಗೊಂಡಿರುವ ಘಟನೆ ಮೈಸೂರು ರಿಂಗ್‌ರೋಡ್ ಪರಸಯ್ಯನಹುಂಡಿ ವೃತ್ತದ ಬಳಿ ಭಾನುವಾರ ತಡರಾತ್ರಿ ನಡೆದಿದೆ.

ಮಹೀಂದ್ರ ಎಕ್ಸ್‌ಯುವಿ 500(ಕೆಎ.14, ಪಿ.0357) ಕಾರು ಜೆಪಿ ನಗರ ಕಡೆಯಿಂದ ವೇಗವಾಗಿ ಪರಸಯ್ಯನ 'ಹುಂಡಿ ಕಡೆಗೆ ತೆರಳುತ್ತಿದ್ದ ವೇಳೆ ಹೆಚ್.ಡಿ.ಕೋಟೆ ಕಡೆಯಿಂದ ಬಂದ ಮಹೀಂದ್ರ ಥಾರ್(ಕೆಎ.09, ಎನ್‌ಜೆ. 4243)ಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಎಕ್ಸ್‌ಯುವಿ ಕಾರಿನ ಚಾಲಕ ಬಲ ಭಾಗಕ್ಕೆ ಸ್ಟೇರಿಂಗ್ ಎಳೆದ ಪರಿಣಾಮ ರಸ್ತೆ ಪಕ್ಕದಲ್ಲಿದ್ದ ಗುಡಿಸಲಿಗೆ ಕಾರು ನುಗ್ಗಿದೆ. ಇದರಿಂದ ಕಾರು ಚಾಲಕನಿಗೆ ಸಣ್ಣ ಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಅಲ್ಲದೇ ಆ ಗುಡಿಸಲಿನಲ್ಲಿ ಯಾರೂ ಇಲ್ಲದ ಕಾರಣ ಆಗಬಹುದಾದ ಅನಾಹುತ ತಪ್ಪಿದೆ.



ಮತ್ತೊಂದೆಡೆ ಮಹೀಂದ್ರ ಥಾರ್ ಚಾಲಕನಿಗೆ ಯಾವುದೇ ಗಾಯಗಳಾಗಿಲ್ಲ ಎಂದು ತಿಳಿದು ಬಂದಿದ್ದು, ಮಹೀಂದ್ರ ಎಕ್ಸ್‌ಯುವಿ ಚಾಲಕ ಸ್ಥಳೀಯರ ನೆರವಿನಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಕುವೆಂಪು ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ರಾಜ್ಯಪಾಲರಿಂದ 'ಅಗ್ನಿಯ ರೆಕ್ಕೆಗಳು' ಪುಸ್ತಕ ಬಿಡುಗಡೆ

ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಆತ್ಮಚರಿತ್ರೆಯ 'ವಿಂಗ್ಸ್ ಆಫ್ ಫೈರ್' ಕನ್ನಡ ಅನುವಾದದ ಕೃತಿ



ಬೆಂಗಳೂರಿನ ಲೋಕಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು 'ಅಗ್ನಿಯ ರೆಕ್ಕೆಗಳು' ಪುಸ್ತಕ ಬಿಡುಗಡೆ ಮಾಡಿದರು.

ಮೈಸೂರು,ಜೂ.1(ಪಿಎಂ)– ಭಾರತದ ಮಾಜಿ ರಾಷ್ಟ್ರಪತಿಗಳೂ ಆದ ಬಾಹ್ಯಾಕಾಶ ವಿಜ್ಞಾನಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಆತ್ಮಚರಿತ್ರೆಯ 'ವಿಂಗ್ಸ್ ಆಫ್ ಫೈರ್' ಕೃತಿಯ ಕನ್ನಡ ಅನುವಾದ 'ಅಗ್ನಿಯ ರೆಕ್ಕೆಗಳು' ಪುಸ್ತಕವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಬೆಂಗಳೂರಿನ ಲೋಕಭವನದಲ್ಲಿಂದು ಬಿಡುಗಡೆ ಮಾಡಿದರು.

ಕೆ.ಜಯಪ್ರಕಾಶ್ ರಾವ್ ಅವರು ಕನ್ನಡಕ್ಕೆ ಅನುವಾದಿಸಿರುವ ಈ ಕೃತಿಯು ಡಾ.ಕಲಾಂ ಅವರ ಸಾಧನೆಗಳು, ಚಿಂತನೆಗಳು ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ದೃಷ್ಟಿಕೋನವನ್ನು ಕನ್ನಡ ಓದುಗರಿಗೆ ತಲುಪಿಸುವ ಮಹತ್ವದ ಪ್ರಯತ್ನವಾಗಿದೆ.

ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ರಾಜ್ಯಪಾಲರು, ಜನರ ರಾಷ್ಟ್ರಪತಿ ಎಂದು ಖ್ಯಾತರಾಗಿದ್ದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಮ್ಮ ಸರಳತೆ, ವೈಜ್ಞಾನಿಕ ಸಾಧನೆ ಹಾಗೂ ರಾಷ್ಟ್ರ ಸೇವೆಯ ಮೂಲಕ ಇಂದಿಗೂ ಯುವಜನತೆಗೆ ಸ್ಫೂರ್ತಿಯಾಗಿದ್ದಾರೆ. ಅವರಂತಹ ಮಹಾನ್ ವ್ಯಕ್ತಿಯ ಜೀವನಾಧಾರಿತ ಕೃತಿಯನ್ನು ಕನ್ನಡದಲ್ಲಿ ಪ್ರಕಟಿಸುವುದು ರಾಜ್ಯದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ನೀಡಲಿದೆ ಎಂದು ಹೇಳಿದರು.

ವಾಸನ್ ಪಬ್ಲಿಕೇಷನ್ಸ್‌ನ ರಘುನಾಥ್ ಹಾಗೂ ಶ್ರೀನಿವಾಸ್, ಎಚ್‌ಎಎಲ್‌ನ ಮಾಜಿ ಮುಖ್ಯ ವ್ಯವಸ್ಥಾಪಕ ಕೃಷ್ಣರಾವ್, ಕೃತಿ ಅನುವಾದಕರೂ ಆದ ಎಡಿಎ ಮತ್ತು ಡಿಆರ್‌ಡಿಓ ಸಂಸ್ಥೆಗಳ ಮಾಜಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ.ಜಯಪ್ರಕಾಶ್ ರಾವ್ ಸೇರಿದಂತೆ ಸಾಹಿತ್ಯಾಸಕ್ತರು, ಇತರ ಗಣ್ಯರು ಉಪಸ್ಥಿತರಿದ್ದರು.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ವಲಸಿಗರ ಗುಂಪು

ನೀವೆಲ್ಲಾ ಬಾಂಗ್ಲಾದೇಶಿಯರು ಎಂದು ಪ್ರಶ್ನಿಸಿದ ವೀಡಿಯೊ ವೈರಲ್

ಮೈಸೂರು, ಜೂ.1 (ಎಂಟಿವೈ)– ವಿವಿಧೆಡೆಯಿಂದ ಆಗಮಿಸಿ ಮೈಸೂರಿನ ಕೇಂದ್ರ ರೈಲ್ವೆ ನಿಲ್ದಾಣದ ಆವರಣದಲ್ಲಿ ಬೀಡುಬಿಟ್ಟಿದ್ದ ವಲಸಿಗರನ್ನು ವ್ಯಕ್ತಿಯೊಬ್ಬರು ಪ್ರಶ್ನಿಸಿ, ಬಾಂಗ್ಲಾದೇಶಿಗರಾದ ನೀವು ಮೈಸೂರಿಗೆ ಯಾಕೆ ಬಂದಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡಿರುವ ವೀಡಿಯೋ ವೈರಲ್ ಆಗಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಲ್ಲಿ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾ ವಲಸಿಗರು ರೈಲಿನಲ್ಲಿ ವಾಪಸ್ಸಾಗುತ್ತಿರುವ ವೀಡಿಯೊ ವೈರಲ್ ಆದ ಬೆನ್ನಲ್ಲೇ ಕಳೆದ ಎರಡು ದಿನದ ಹಿಂದೆ ಮೈಸೂರಿನ ರೈಲ್ವೆ ನಿಲ್ದಾಣಕ್ಕೆ ಮಹಿಳೆಯರು ಮಕ್ಕಳು ಸೇರಿದಂತೆ ಹಲವು ಮಂದಿ ಉತ್ತರ ಭಾರತದ ವಿವಿಧ ರಾಜ್ಯಗಳಿಂದ ಆಗಮಿಸಿದ್ದು, ಅವರೆಲ್ಲಾ ರೈಲ್ವೆ ನಿಲ್ದಾಣದ ಹೊರಗೆ ನಿಂತಿದ್ದಾಗ ವ್ಯಕ್ತಿಯೊಬ್ಬರು ಪ್ರಶ್ನಿಸಿದ್ದಾರೆ.

ನೀವೆಲ್ಲಾ ಮೈಸೂರಿಗೆ ಯಾಕೆ ಬಂದಿದ್ದೀರಿ ಎಂದು ಕೇಳಿದ್ದಾರೆ. ಅದಕ್ಕೆ ಅಲ್ಲಿದ್ದ ಕೆಲ ಯುವಕರು, ಪುರುಷರು ಕೆಲಸ ಹುಡುಕಿಕೊಂಡು ಬಂದಿರುವುದಾಗಿ ತಿಳಿಸಿದ್ದಾರೆ. ಅಷ್ಟರಲ್ಲಾಗಲೇ ಪ್ರಶ್ನೆ ಮಾಡುತ್ತಿದ್ದ ನೀವೆಲ್ಲಾ ಬಾಂಗ್ಲಾದೇಶಿಯರು, ಮೈಸೂರಿಗೆ ಯಾಕೆ ಬರುತ್ತೀರಿ. ಉತ್ತರ ಭಾರತದ ರಾಜ್ಯಗಳಲ್ಲಿ ಪುಂಡಾಟ ಮೆರೆದಿದ್ದಾಗಿದೆ. ಈಗ ಮೈಸೂರಿಗೂ ಬಂದಿದ್ದೀರಾ ಎಂದು ಪ್ರಶ್ನೆ ಮಾಡಿದ್ದಾರೆ. ಅಲ್ಲದೆ, ಕೆಲ ಸಂಘಟನೆಗೆ ಮಾಹಿತಿ ನೀಡುವುದಾಗಿ ಹಾಗೂ ಪೊಲೀಸರಿಗೆ ದೂರು ನೀಡುವುದಾಗಿ ಆ ವ್ಯಕ್ತಿ ಹೇಳಿ ವೀಡಿಯೊ ಮಾಡಿದ್ದಾರೆ.

ರೈಲ್ವೆ ನಿಲ್ದಾಣದ ಹೊರಗೆ ಗುಂಪಾಗಿ ಕುಳಿತಿರುವವರನ್ನು, ಬಾಂಗ್ಲಾದೇಶಿಗರು ನೀವು ಎಂದು ಹಿಂದಿಯಲ್ಲಿ ಮಾತನಾಡುತ್ತಾ ಪ್ರಶ್ನೆ ಮಾಡುತ್ತಿರುವ ವೀಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಮೈಸೂರು ಬಾಂಗ್ಲಾ ವಲಸಿಗರ ಟಾರ್ಗೆಟ್ ಆಗುತ್ತಿದೆ. ಮೈಸೂರಿಗರು ಎಚ್ಚರಿಕೆಯಿಂದ ಇರಬೇಕು ಎಂದು ನೆಟ್ಟಿಗರು ಕಮೆಂಟ್ ಮಾಡಿದ್ದಾರೆ.



ವೈರಲ್ ಆಗಿದೆ ಎನ್ನಲಾದ ವೀಡಿಯೊದಿಂದ ತೆಗೆದ ಚಿತ್ರಗಳಿವು... ಮೈಸೂರು ನಗರ ಕೇಂದ್ರ ರೈಲು ನಿಲ್ದಾಣದಲ್ಲಿರುವ ಕುಟುಂಬಗಳನ್ನು ತೋರಿಸುತ್ತವೆ. ಅವರು ಅಕ್ರಮ ವಲಸಿಗರಲ್ಲ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಸಾಮಾಜಿಕ ಜಾಲತಾಣ ವೀಡಿಯೋ ವರದಿ ತಳ್ಳಿ ಹಾಕಿದ ರೈಲ್ವೆ

ಮೈಸೂರು,ಜೂ.1(ಎಂಟಿವೈ)– ಮೈಸೂರಿನ ರೈಲ್ವೆ ನಿಲ್ದಾಣದ ಆವರಣದಲ್ಲಿ ಅಕ್ರಮ ವಲಸಿಗರು ಎಂದು ವೈರಲ್ ಆಗಿರುವ ವೀಡಿಯೊ ಕುರಿತಂತೆ ಆರ್‌ಪಿಎಫ್ ಸ್ಪಷ್ಟನೆ ನೀಡಿದ್ದು, ಒಂದು ತಿಂಗಳ ಹಿಂದೆ ರೈಲ್ವೆ ಮುಂಗಡ ಟಿಕೆಟ್ ಬುಕ್ಕಿಂಗ್ ಕೌಂಟರ್ ಬಳಿ ಚಿತ್ರಿಸಿರುವ ವೀಡಿಯೊ ಇದಾಗಿದ್ದು, ವಲಸಿಗರೆಂದು ಸಾಬೀತುಪಡಿಸುವ ಯಾವುದೇ ಪುರಾವೆ ಸಿಕ್ಕಿಲ್ಲ ಎಂದು ರೈಲ್ವೆ ಪ್ರೊಟೆಕ್ಷನ್ ಫೋರ್ಸ್ (ಆರ್‌ಪಿಎಫ್) ಸ್ಪಷ್ಟಪಡಿಸಿದೆ.

ರೈಲ್ವೆ ನಿಲ್ದಾಣದ ಆವರಣದಲ್ಲಿ ಬಾಂಗ್ಲಾ ವಲಸಿಗರು ಜಮಾಯಿಸಿದ್ದಾರೆ ಎಂದು ಕೆಲವರು ವೀಡಿಯೊ ವೈರಲ್ ಮಾಡಿರುವುದು ನಮ್ಮ ಗಮನಕ್ಕೆ ಬಂದಿದ್ದು, ಅದೊಂದು ಆಧಾರ ರಹಿತ ಆರೋಪವಾಗಿದೆ. ತಿಂಗಳ ಹಿಂದೆ ರೈಲ್ವೆ ನಿಲ್ದಾಣದ ಟಿಕೆಟ್ ಮುಂಗಡ ಬುಕ್ಕಿಂಗ್ ಕೌಂಟರ್ ಬಳಿ ನೆರೆದಿದ್ದ ಜನ ಕಸವನ್ನು ಎಲ್ಲೆಂದರಲ್ಲಿ ಬೀಸಾಡುತ್ತಿದ್ದರು. ಈ ವೇಳೆ ಸಾರ್ವಜನಿಕರು ಆಕ್ಷೇಪಿಸಿದ್ದರು. ಇದರಿಂದ ವಾಗ್ವಾದ ಉಂಟಾಗಿತ್ತು. ಅಲ್ಲಿಯೇ ಇದ್ದ ರೈಲ್ವೆ ಸಿಬ್ಬಂದಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದರು. ಅಲ್ಲದೆ, ಕಸವನ್ನು ಬುಟ್ಟಿಯಲ್ಲಿಯೇ ಹಾಕುವಂತೆ ಸಂಬಂಧಿಸಿದವರಿಗೆ ಸೂಚನೆ ನೀಡಿದ್ದರು. ಪರಿಸ್ಥಿತಿ ಶಾಂತಗೊಂಡ ಬಳಿಕ ವ್ಯಕ್ತಿಯೊಬ್ಬರು ಅಲ್ಲಿದ್ದ ಜನರ ಗುಂಪನ್ನು ವೀಡಿಯೊ ಮಾಡಿ, ಅಕ್ರಮ ವಲಸಿಗರೆಂದು ಆರೋಪಿಸಿದ್ದಾರೆ. ಈ ವೀಡಿಯೊ ತುಣುಕು ವೈರಲ್ ಆದ ಹಿನ್ನೆಲೆಯಲ್ಲಿ ಡಿಸಿಪಿ, ಸಿಪಿಐ ಜಿಆರ್‌ಪಿ, ಸಿಪಿಐ/ಮಂಡಿ ಠಾಣೆ, ಸಿಪಿಐ ವಿವಿ ಪುರಂ ಠಾಣೆ ಹಾಗೂ ಮೈಸೂರು ಪೊಲೀಸ್ ಆಯುಕ್ತರ ಗುಪ್ತಚರ ವಿಭಾಗದ ಸಿಬ್ಬಂದಿಯೊಂದಿಗೆ ಚರ್ಚಿಸಲಾಗಿದೆ. ಈ ಕುರಿತು ಇದುವರೆಗೆ ಯಾವುದೇ ದೂರು ಬಂದಿಲ್ಲ ಎಂದು ಆರ್‌ಪಿಎಫ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಮುಂಗಡ ಟಿಕೆಟ್ ಕೌಂಟರ್ ಬಳಿ ಸೇರಿದ್ದ ಜನ ರೈಲು ಸಂಖ್ಯೆ 22818 ಮೈಸೂರು–ಹೌರಾ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸಿದ್ದಾರೆ. ಅವರು ಅಕ್ರಮ ವಲಸಿಗರು ಎಂದು ಖಚಿತಪಡಿಸಲು ಯಾವುದೇ ವಸ್ತು ಅಥವಾ ಪುರಾವೆ ಸಿಕ್ಕಿಲ್ಲ. ವಿಡಿಯೋ ಚಿತ್ರೀಕರಣಗೊಂಡ ನಿಖರ ದಿನಾಂಕ ಮತ್ತು ಸಮಯ ಖಚಿತಪಡಿಸಲು ಮೈಸೂರು ರೈಲು ನಿಲ್ದಾಣದ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ. ಆರ್‌ಪಿಎಫ್, ಜಿಆರ್‌ಪಿ ಮತ್ತು ಸ್ಥಳೀಯ ಪೊಲೀಸರು ಈ ಘಟನೆಯ ಕುರಿತು ಹೆಚ್ಚಿನ ಮಾಹಿತಿ ಕಲೆ ಹಾಕಲು ಮುಂದಾಗಿದ್ದಾರೆ ಎಂದು ತಿಳಿಸಿದೆ.

ಬಾಂಗ್ಲಾದೇಶಿಗರು, ರೋಹಿಂಗ್ಯಾಗಳ ಚಲನವಲನದ ಬಗ್ಗೆ ಸ್ಥಳೀಯ ಪೊಲೀಸರು ಅಥವಾ ಗುಪ್ತಚರ ಸಂಸ್ಥೆಗಳಿಂದ ಇಲ್ಲಿವರೆಗೆ ಯಾವುದೇ ನಿರ್ದಿಷ್ಟ ಮಾಹಿತಿ ಬಂದಿಲ್ಲ. ಆದರೂ ರೈಲ್ವೆ ನಿಲ್ದಾಣದ ಆವರಣದಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ಚಲನವಲನ ಪತ್ತೆಹಚ್ಚಲು ಮತ್ತು ವಿಚಾರಣೆ ಗೊಳಪಡಿಸಲು ಅಧಿಕಾರಿಗಳು ಮತ್ತು ಸಿಬ್ಬಂದಿ ಕಟ್ಟೆಚ್ಚರ ವಹಿಸಿದ್ದಾರೆ. ಅಲ್ಲದೆ, ಆರ್‌ಪಿಎಫ್, ಜಿಆರ್‌ಪಿ ಮತ್ತು ಸ್ಥಳೀಯ ಪೊಲೀಸರು ಜಂಟಿಯಾಗಿ ಪರಿಶೀಲಿಸುತ್ತಿದ್ದಾರೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಅದು ಹಳೆಯ ವೀಡಿಯೊ, ಅವರು ಅಸ್ಸಾಂನವರು...

“ರೈಲ್ವೆ ನಿಲ್ದಾಣದ ಬಳಿ ಬೀಡು ಬಿಟ್ಟಿರುವ ಜನರನ್ನೊಳಗೊಂಡ ವೈರಲ್ ಆಗಿರುವ ವೀಡಿಯೊ ಪರಿಶೀಲಿಸಲಾಗಿದ್ದು, ಅದು ಮೂರು ತಿಂಗಳ ಹಳೆ ವೀಡಿಯೊ ಆಗಿದೆ. ಅಲ್ಲದೆ, ಅಲ್ಲಿದ್ದವರು ಬಾಂಗ್ಲಾದೇಶಿಯರಲ್ಲ. ಕೆಲಸಕ್ಕಾಗಿ ಅಸ್ಸಾಂನಿಂದ ಮೈಸೂರಿಗೆ ಬಂದವರಾಗಿದ್ದಾರೆ. ಅವರು ಈಗಾಗಲೇ ವಾಪಸ್ಸಾಗಿದ್ದಾರೆ. ನಮ್ಮ ಪೊಲೀಸರು ಹೈ ಅಲರ್ಟ್ ಆಗಿದ್ದು, ಮೈಸೂರಿಗೆ ಬರುವ ವಲಸಿಗರ ಮೇಲೆ ಹದ್ದಿನ ಕಣ್ಣಿಡಲಾಗಿದೆ.



–ಸೀಮಾ ಲಾಟ್ಕರ್, ಆಯುಕ್ತರು, ಮೈಸೂರು ನಗರ ಪೊಲೀಸ್

“ಎರಡು ದಿನದ ಹಿಂದೆ ಮೈಸೂರಿನ ರೈಲ್ವೆ ನಿಲ್ದಾಣಕ್ಕೆ ವಿವಿಧೆಡೆಯಿಂದ ಅನುಮಾನಾಸ್ಪದವಾಗಿ ಹಲವು ಮಂದಿ ಬಂದಿದ್ದು, ವ್ಯಕ್ತಿಯೊಬ್ಬರು ಅವರ ವೀಡಿಯೊವನ್ನು ಮಾಡಿ, ಬಾಂಗ್ಲಾದೇಶಿಗರು ಮೈಸೂರಿಗೆ ಯಾಕೆ ಬಂದಿದ್ದೀರಿ ಎಂದು ನೇರವಾಗಿ ಪ್ರಶ್ನಿಸಿದ್ದಾರೆ. ಇದಕ್ಕೆ ವಲಸಿಗರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಅಲ್ಲದೆ, ಬಾಂಗ್ಲಾದೇಶಿಗರು ಅಲ್ಲ ಎಂತಲೂ ಹೇಳಿಲ್ಲ. ಇದರಿಂದ ಅವರೆಲ್ಲಾ ಬಾಂಗ್ಲಾ ವಲಸಿಗರು ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಆಯುಕ್ತರ ಕಚೇರಿಗೆ ದೂರು ನೀಡಲು ಹಿಂದೂ ಪರ ಸಂಘಟನೆಗಳ ಮುಖಂಡರು ನಿರ್ಧರಿಸಿದ್ದಾರೆ. ಎಸ್‌ಐಆರ್ ಪ್ರಕ್ರಿಯೆ ಆರಂಭವಾದ ನಂತರ ದೇಶದ ವಿವಿಧ ಭಾಗಗಳಿಂದ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾದೇಶಿಯರು ಕರ್ನಾಟಕಕ್ಕೆ ಬರುತ್ತಿರುವುದು ಆತಂಕಕಾರಿ ಬೆಳವಣಿಗೆ. ಅದರಲ್ಲಿಯೂ ಪ್ರವಾಸಿಗರ ನೆಚ್ಚಿನ ತಾಣ, ನಿವೃತ್ತರ ಸ್ವರ್ಗ ಎನಿಸಿಕೊಂಡಿರುವಂತಹ ಮೈಸೂರು ನಗರಕ್ಕೆ ಅಕ್ರಮ ವಲಸಿಗರು ಬಂದೇ ನೆಲೆಸಿದರೆ ಇಲ್ಲಿನ ಶಾಂತಿಗೆ ಭಂಗ ಬರುತ್ತದೆ. –ರಾಕೇಶ್ ಭಟ್, ಅಧ್ಯಕ್ಷ, ವೀರ ಸಾವರ್ಕರ್ ಯುವ ಬಳಗ

ಮೈಸೂರು ಮಿತ್ರ

ಮಂಗಳವಾರ 2 ಜೂನ್ 2026

ಹೆಚ್.ಸಿ.ಮಹದೇವಪ್ಪರನ್ನು ಡಿಸಿಎಂ ಮಾಡುವಂತೆ ಪ್ರತಿಭಟನೆ

ನಂಜನಗೂಡು, ಜೂ.1– ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಉಪ ಮುಖ್ಯಮಂತ್ರಿ ಮಾಡುವಂತೆ ಒತ್ತಾಯಿಸಿ ನಗರದಲ್ಲಿ ಅವರ ಅಭಿಮಾನಿಗಳು ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಎದುರು ಜಮಾಯಿಸಿದ ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಸದಸ್ಯರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ನೂತನ ಸಚಿವ ಸಂಪುಟದಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ಮತ್ತು ಸಂಪುಟ ದರ್ಜೆ ಖಾತೆ ನೀಡುವಂತೆ ಆಗ್ರಹಿಸಿ ಘೋಷಣೆ ಕೂಗಿದರು.

ಮುಖಂಡ ಬುಲೆಟ್ ಮಹದೇವಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರು ಆಧಾರ ಸ್ತಂಭಗಳಾಗಿದ್ದಾರೆ. ಆದರೆ 75 ವರ್ಷಗಳಿಂದಲೂ ದಲಿತರಿಗೆ ಮುಖ್ಯಮಂತ್ರಿ ಆಗುವ ಅವಕಾಶ ದೊರಕಿಲ್ಲ.



ಹೆಚ್.ಸಿ.ಮಹದೇವಪ್ಪರನ್ನು ಡಿಸಿಎಂ ಮಾಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಆದ್ದರಿಂದ ಹಿರಿಯ ದಲಿತ ನಾಯಕರಾಗಿರುವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿ ದಲಿತ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಕೆಂಪಣ್ಣ ಮಾತನಾಡಿ, ಡಾ.ಹೆಚ್.ಸಿಮಹದೇವಪ್ಪ ಅವರು ಹಲವು ಬಾರಿ ಸಚಿವರಾಗಿ ರಾಜ್ಯದ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಅಲ್ಲದೇ ರಾಜ್ಯದ ದಲಿತ ನಾಯಕರಾಗಿದ್ದಾರೆ. ಹೀಗಾಗಿ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಮಾಜಿ ಗ್ರಾಪಂ ಅಧ್ಯಕ್ಷ ಬಸವರಾಜು ಮಾತನಾಡಿ, ರಾಜ್ಯದಲ್ಲಿ ವಿ.ಶ್ರೀನಿವಾಸ ಪ್ರಸಾದ್ ನಂತರ ಡಾ.ಹೆಚ್.ಸಿ ಮಹದೇವಪ್ಪ ದಲಿತ ನಾಯಕರೆನಿಸಿದ್ದಾರೆ. ಜೊತೆಗೆ ಸಿದ್ದರಾಮಯ್ಯ ಅವರ ಬೆನ್ನೆಲುಬಾಗಿ ಅವರ ಕಷ್ಟ ಕಾಲದಲ್ಲಿ ಜೊತೆಗೆ ನಿಂತಿದ್ದಾರೆ. ಆದ್ದರಿಂದ ಸಿದ್ದರಾಮಯ್ಯನವರು ಹೆಚ್.ಸಿ.ಮಹದೇವಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿ ದಲಿತ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಶ್ರೀಕಂಠೇಶ್ವರ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಇಂಧನ್ ಬಾಬು, ಜಿಪಂ ಮಾಜಿ ಸದಸ್ಯ ಕೆ.ಬಿ.ಸ್ವಾಮಿ, ಚೋಳರಾಜು, ನಗರಸಭೆ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಶಶಿ ರೇಖಾ, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಮೃಗಾಲಯ ಪ್ರಾಧಿಕಾರ ಮಾಜಿ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹೆಚ್.ಎಸ್.ಮೂಗಶೆಟ್ಟಿ, ಮುಖಂಡರಾದ ಎನ್.ಟಿ.ಗಿರೀಶ್, ಹುಂಡಿಕುಳ್ಳಯ್ಯ, ಮೋಹನ್ ಕುಮಾರ್, ಗುರುಪಾದು, ಹೆಜ್ಜಿಗೆ ಗಿರಿಧರ್, ಸಿ.ಆರ್.ಮಹದೇವು ಸೇರಿದಂತೆ ಹಲವರಿದ್ದರು.

ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಡಿಸಿಎಂ ಮಾಡುವಂತೆ

ಬಂಗಾರಪ್ಪ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ ಒತ್ತಾಯ

ತಿ.ನರಸೀಪುರ, ಜೂ.1– ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ನೂತನ ಸರ್ಕಾರದಲ್ಲಿ ಡಿಸಿಎಂ ಮಾಡುವ ಜೊತೆಗೆ ಸಚಿವ ಸ್ಥಾನಮಾನ ನೀಡಬೇಕು ಎಂದು ಪಟ್ಟಣದ ಬಂಗಾರಪ್ಪ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ದದ್ದೂರಿ ಶೇಖರ್ ಒತ್ತಾಯಿಸಿದರು.

ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಡಿಸಿಎಂ ಜೊತೆಗೆ ಸಚಿವ ಸ್ಥಾನಮಾನ ನೀಡುವಂತೆ ಒತ್ತಾಯಿಸಿ ಮೈಸೂರಿನಲ್ಲಿ ನಡೆದ ಪ್ರತಿಭಟನೆ ಬೆಂಬಲಿಸಿ ಮಾತನಾಡಿದ ಅವರು, ಡಾ.ಹೆಚ್.ಸಿ.ಮಹದೇವಪ್ಪ ಅವರು ಈ ಹಿಂದೆ ಲೋಕೋಪಯೋಗಿ ಸಚಿವರಾಗಿದ್ದ ವೇಳೆ ಚಾಮರಾಜನಗರದಿಂದ ಬೀದರ್‌ವರೆಗೆ ಗುಣಮಟ್ಟದ ರಸ್ತೆಗಳನ್ನು ನಿರ್ಮಾಣ ಮಾಡಿ ಮಾದರಿಯಾಗಿ ಕೆಲಸ ಮಾಡುವ ಮೂಲಕ ವಿರೋಧ ಪಕ್ಷದವರಿಂದಲೂ ಮೆಚ್ಚುಗೆ ಗಿಟ್ಟಿಸಿಕೊಂಡಿದ್ದಾರೆ. ಅಲ್ಲದೇ ಕಳೆದ 3 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರತಿ ಸರ್ಕಾರಿ ಕಚೇರಿ ಹಾಗೂ ಕಾರ್ಯಕ್ರಮಗಳಲ್ಲಿ ಸಂವಿಧಾನ ಪೀಠಿಕೆ ಓದುವುದು, ಸಂವಿಧಾನ ದಿನಾಚರಣೆಯನ್ನು ವಿಭಿನ್ನ ಹಾಗೂ ಅರ್ಥಪೂರ್ಣವಾಗಿ ಆಚರಿಸುವುದು ಮತ್ತು ದಲಿತರಿಗೆ ಮೀಸಲಾದ ಅನುದಾನವನ್ನು ಸಮರ್ಪಕವಾಗಿ ಬಳಸಿ ಶೋಷಿತರ ಹಾಗೂ ದಲಿತರು ಸ್ವಾವಲಂಬಿಯಾಗಿ ಬದುಕಲು ಕಾರ್ಯಕ್ರಮ ರೂಪಿಸಿದ್ದಾರೆ. ಹೀಗಾಗಿ ಅವರನ್ನು ನೂತನ ಸರ್ಕಾರದಲ್ಲಿ ಡಿಸಿಎಂ ಜೊತೆಗೆ ಸಚಿವರನ್ನಾಗಿ ಮಾಡಬೇಕು ಎಂದು ಆಗ್ರಹಿಸಿದರು.



ಡಾ.ಹೆಚ್.ಸಿ.ಮಹದೇವಪ್ಪರನ್ನು ಡಿಸಿಎಂ ಮಾಡುವಂತೆ ಬಂಗಾರಪ್ಪ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದಿಂದ ಒತ್ತಾಯಿಸಲಾಯಿತು.

ಪುರಸಭೆ ಮಾಜಿ ಸದಸ್ಯ ಜೋಗಿ ನಾಗರಾಜ್ ಮಾತನಾಡಿದರು. ಸಂಘದ ನಿರ್ದೇಶಕರಾದ ನಾಗರತ್ನಮ್ಮ, ಸಿದ್ದಪ್ಪ, ಸರೋಜಮ್ಮ, ಕೃಷ್ಣಪ್ಪ, ಬಡಾವಣೆ ನಿವಾಸಿಗಳು ಹಾಜರಿದ್ದರು.

ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ನಂಜನಗೂಡು, ಜೂ.1– ಕಾಂಗ್ರೆಸ್ ಪಕ್ಷಕ್ಕಾಗಿ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಮಾಡಿರುವ ತ್ಯಾಗ, ಹೋರಾಟ, ಕೊಡುಗೆಯನ್ನು ಪರಿಗಣಿಸಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧ್ರುವ ನಾರಾಯಣ್ ಅವರು ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ 9 ಜಿಲ್ಲೆಗಳ ಹೊಣೆ ಹೊತ್ತು ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿದ ಪರಿಣಾಮ ಅತೀ ಹೆಚ್ಚಿನ ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದಾರೆ. ಜೊತೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಧ್ರುವನಾರಾಯಣ್ ಬದುಕಿದ್ದರೆ ಸಂಪುಟ ದರ್ಜೆ ಸಚಿವರಾಗಿ ಕೆಲಸ ನಿರ್ವಹಿಸುವ ಜೊತೆಗೆ ಮುಂದಿನ ಕೆಪಿಸಿಸಿ ಅಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದರು ಎಂದಿದ್ದಾರೆ. ಅವರ ಸೇವೆ ಪರಿಗಣಿಸಿ ಅವರ ಸುಪುತ್ರ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿ, ಪ್ರತಿ ಬಾರಿ ನಾಲ್ಕರಿಂದ ಐದು ಬಾರಿ ಸಚಿವರಾದವರಿಗೆ ಮಣೆ ಹಾಕಿದರೆ ಹೊಸ ನಾಯಕರು ಬೆಳೆಯುವುದು ಹೇಗೆ?



ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಕಾಂಗ್ರೆಸ್ ಮುಖಂಡರು ಶ್ರೀಕಂಠೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಹೊಸ ನಾಯಕರಿಗೆ ಚಿಕ್ಕ ವಯಸ್ಸಿನಲ್ಲಿ ಅಧಿಕಾರ ಸಿಕ್ಕಲ್ಲಿ ರಾಜ್ಯದಲ್ಲಿ ಮುತ್ಸದ್ದಿ ರಾಜಕಾರಣಿಯಾಗಿ ಬೆಳೆಯಲು ಸಹಾಯಕವಾಗಲಿದೆ. ಆದ್ದರಿಂದ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡಬೇಕು. ಅಲ್ಲದೇ ಡಾ.ಯತಿಂದ್ರ ಅವರಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಹೊಣೆ ನೀಡಬೇಕು ಎಂದು ಆಗ್ರಹಿಸಿದರು.

ಇದಕ್ಕೂ ಮುನ್ನ ನಗರದ ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ನಂಜನಗೂಡು 3 ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ದರ್ಶನ್ ಅವರಿಗೆ ಮಂತ್ರಿ ಸ್ಥಾನ ದೊರಕುವಂತೆ ಶ್ರೀಕಂಠೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ, ಹರಕೆ ಮಾಡಿಕೊಂಡರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ನಗರಸಭೆ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಮುಖಂಡರಾದ ರಂಗದಾಸ್, ದೊರೆಸ್ವಾಮಿ ನಾಯಕ, ಅಬ್ದುಲ್ ಖಾದರ್, ಕರಾಪುರ ನಾಗರಾಜು, ಬದನವಾಳು ಸೋಮು, ಶ್ರೀನಿವಾಸ ಮೂರ್ತಿ, ಎನ್.ಎಂ.ಮಂಜುನಾಥ್, ಕಳಲೆ ರಾಜೇಶ್, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ, ವಿಜಯ್ ಕುಮಾರ್, ಹೆಗ್ಗಡಹಳ್ಳಿ ಮಹೇಶ್, ಮಹೇಂದ್ರ, ಸೇರಿದಂತೆ ಹಲವಾರು ಪ್ರಮುಖರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಅನಿಲ್ ಚಿಕ್ಕಮಾದು, ದರ್ಶನ್‌ರನ್ನು ಮಂತ್ರಿ ಮಾಡಿ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷಾ ಒತ್ತಾಯ

ಹೆಚ್.ಡಿ.ಕೋಟೆ, ಜೂ.1– ಕ್ಷೇತ್ರದ ಶಾಸಕ ಅನಿಲ್ ಚಿಕ್ಕಮಾದು ಹಾಗೂ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಪಕ್ಷದ ವರಿಷ್ಠರನ್ನು ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷಾ ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೈಕಮಾಂಡ್ ಸೂಚನೆ ಮೇರೆಗೆ ಸಿದ್ದರಾಮಯ್ಯನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಸ್ವಾಗತಾರ್ಹ. ಅಲ್ಲದೇ ಡಿ.ಕೆ.ಶಿವಕುಮಾರ್ ಅವರು ನೂತನ ಸಿಎಂ ಆಗುತ್ತಿರುವುದು ಸಂತಸದ ವಿಚಾರ. ಡಿಕೆಶಿ ಅವರ ಹಲವು ವರ್ಷಗಳ ಕಾಯುವಿಕೆಗೆ ಇಂದು ತೆರೆ ಬಿದ್ದಿದೆ. ಅವರ ಆಡಳಿತ ಜನಪರವಾಗಿರಲಿದೆ ಎಂದ ಅವರು, 70 ವರ್ಷಗಳ ಅವಧಿಯಲ್ಲಿ ತಾಲೂಕಿಗೆ 2 ಬಾರಿ ಮಾತ್ರ ಸಚಿವ ಸ್ಥಾನ ದೊರೆತಿದೆ. ಆದ್ದರಿಂದ ನೂತನ ಸಂಪುಟದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು ಹಾಗೂ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಮೈಮುಲ್ ನಿರ್ದೇಶಕ ಈರೇಗೌಡ ಮಾತನಾಡಿ, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಮತ್ತು ಕೊಡಗು ಜಿಲ್ಲೆಯಲ್ಲಿ ಅನಿಲ್ ಚಿಕ್ಕಮಾದು ಅವರನ್ನು ಹೊರತುಪಡಿಸಿ ನಾಯಕ ಸಮಾಜದ ಯಾವುದೇ ನಾಯಕರಿಲ್ಲ. ಆದ್ದರಿಂದ ನಾಯಕ ಸಮಾಜಕ್ಕೆ ಮಾನ್ಯತೆ ನೀಡುವ ಸಲುವಾಗಿ ಶಾಸಕ ಅನಿಲ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷಾ ಮಾತನಾಡಿದರು.

> “ ಶಾಸಕ ಅನಿಲ್ ಚಿಕ್ಕಮಾದು ಅವರು ಮೊದಲ ಬಾರಿ ಶಾಸಕರಾಗಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದರು. ಇದೀಗ 2ನೇ ಬಾರಿ ಶಾಸಕರಾಗಿ ಮತ್ತಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿಯನ್ನು ಹೋಗಲಾಡಿಸಲು ಶ್ರಮಿಸುತ್ತಿದ್ದಾರೆ. ಹೀಗಾಗಿ ಅವರಿಗೆ ಸಚಿವ ಸ್ಥಾನ ನೀಡಿದರೇ ತಾಲೂಕು ಮತ್ತಷ್ಟು ಅಭಿವೃದ್ಧಿಯಾಗಲಿದೆ. ಅಲ್ಲದೇ ಶಾಸಕ ದರ್ಶನ್ ಅವರಿಗೂ ಸಚಿವ ಸ್ಥಾನ ನೀಡಬೇಕು.– ಜಿಯಾರ ಸೋಮೇಶ್, ಕಾಂಗ್ರೆಸ್ ಮುಖಂಡ.

ಮುಖಂಡ ಶಿವಪ್ಪ ಕೋಟೆ ಮಾತನಾಡಿ ಎಂಎಲ್‌ಸಿ ಡಾ. ಯತೀಂದ್ರ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ ಹಳೆ ಮೈಸೂರು ಭಾಗಕ್ಕೆ ನ್ಯಾಯ ಒದಗಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ನರಸೀಪುರ ರವಿ, ಬಾಲರಾಜು, ಗಣೇಶ್ ಆಚಾರ್, ಶಿವರಾಜು, ಅಂಕಪ್ಪ ಸೇರಿದಂತೆ ಇತರರಿದ್ದರು.

ಕೆ.ಹೆಚ್.ಮುನಿಯಪ್ಪ ಡಿಸಿಎಂ, ಧರ್ಮಸೇನಾರನ್ನು ಎಂಎಲ್‌ಸಿ ಮಾಡಿ

ಅಖಿಲ ಕರ್ನಾಟಕ ಆದಿ ಜಾಂಬವ ಸಂಘ ಒತ್ತಾಯ

ತಿ.ನರಸೀಪುರ, ಜೂ.1– ಡಿ.ಕೆ.ಶಿವಕುಮಾರ್ ನೇತೃತ್ವದ ನೂತನ ಸರ್ಕಾರದಲ್ಲಿ ಹಿರಿಯ ರಾಜಕಾರಣಿ ಕೆ.ಹೆಚ್.ಮುನಿಯಪ್ಪ ಅವರನ್ನು ಡಿಸಿಎಂ ಮಾಡಿ, ಪಕ್ಷದ ನಿಷ್ಠಾವಂತ ಕಾರ್ಯಕರ್ತ ಧರ್ಮಸೇನಾ ಅವರನ್ನು ವಿಧಾನಪರಿಷತ್ ಸದಸ್ಯರಾಗಿ ನೇಮಕ ಮಾಡುವಂತೆ ಅಖಿಲ ಕರ್ನಾಟಕ ಆದಿ ಜಾಂಬವ ಸಂಘ ಒತ್ತಾಯಿಸಿದೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಹುಣಸೂರು ಸಿ.ಪುಟ್ಟಯ್ಯ, ಕೆ.ಹೆಚ್.ಮುನಿಯಪ್ಪ ಅವರು ಹಲವು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿ ಸೇವೆ ಸಲ್ಲಿಸಿದ್ದು, ರಾಜ್ಯ ಮತ್ತು ರಾಷ್ಟ್ರ ರಾಜಕೀಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಅನುಭವ, ಆಡಳಿತಾತ್ಮಕ ಸಾಮರ್ಥ್ಯ ಹಾಗೂ ಜನಪರ ಕಾರ್ಯ ಪರಿಗಣಿಸಿ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವುದರಿಂದ ಸರ್ಕಾರದ ಕಾರ್ಯಕ್ಷಮತೆ ಮತ್ತಷ್ಟು ಬಲಗೊಳ್ಳಲಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಆದಿ ಜಾಂಬವ ಸಂಘದ ಸಿ.ಪುಟ್ಟಯ್ಯ ಮಾತನಾಡಿದರು.

ಧರ್ಮಸೇನಾ ಅವರ ಪಕ್ಷ ಸಂಘಟನೆ ಹಾಗೂ ಸಮಾಜಮುಖಿ ಸೇವೆ ಗುರುತಿಸಿ ಅವರನ್ನು ವಿಧಾನಪರಿಷತ್ತಿಗೆ ನಾಮನಿರ್ದೇಶನ ಮಾಡಬೇಕು ಎಂದು ಒತ್ತಾಯಿಸಿದ ಅವರು ಇದರಿಂದ ಹಿಂದುಳಿದ ವರ್ಗಗಳ ಧ್ವನಿಗೆ ಹೆಚ್ಚಿನ ಪ್ರಾತಿನಿಧ್ಯ ದೊರೆಯಲಿದ್ದು, ಸಮಾಜದ ವಿವಿಧ ವರ್ಗಗಳ ಆಶೋತ್ತರಗಳಿಗೆ ಸ್ಪಂದಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅರುಂಧತಿ ಸಹಕಾರ ಸಂಘದ ಕೆ.ಕೆಂಚಯ್ಯ, ಗೌರವಾಧ್ಯಕ್ಷ ಪುಟ್ಟಶಂಭಯ್ಯ, ಉಪಾಧ್ಯಕ್ಷ ಮಹದೇವಸ್ವಾಮಿ, ನಂಜುಂಡಯ್ಯ, ಕೆ.ಜಯರಾಮು, ಎಂ.ಚಿನ್ನಸ್ವಾಮಿ, ನಾರಾಯಣ, ಚೇತನ, ರವಿಕುಮಾರ್, ಮಂಜುನಾಥ, ಮಾದಪ್ಪ, ರಂಗಪ್ಪ, ಬಸವರಾಜು ಹಾಜರಿದ್ದರು.

ಡಾ.ಜಿ.ಪರಮೇಶ್ವರ್‌ರನ್ನು ಡಿಸಿಎಂ ಮಾಡುವಂತೆ ಪ್ರತಿಭಟನೆ

ಹುಣಸೂರು, ಜೂ.1– ನೂತನ ಸಚಿವ ಸಂಪುಟದಲ್ಲಿ ಕಾಂಗ್ರೆಸ್ ಹಿರಿಯ ನಾಯಕ ಡಾ.ಜಿ.ಪರಮೇಶ್ವರ್ ಅವರನ್ನು ಉಪ ಮುಖ್ಯಮಂತ್ರಿ ಮಾಡುವಂತೆ ಒತ್ತಾಯಿಸಿ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಸಂವಿಧಾನ ವೃತ್ತದಲ್ಲಿ ಜಮಾಯಿಸಿದ ತಾಲೂಕು ಡಾ.ಜಿ.ಪರಮೇಶ್ವರ್ ಅಭಿಮಾನಿ ಬಳಗದ ಸದಸ್ಯರು, ಡಾ.ಜಿ.ಪರಮೇಶ್ವರ್ ಭಾವಚಿತ್ರ ಹಿಡಿದು ಪ್ರತಿಭಟನೆ ನಡೆಸಿ, ದಲಿತರ ಏಕಮಾತ್ರ ಆಶಾಕಿರಣವಾಗಿರುವ ಡಾ.ಜಿ.ಪರಮೇಶ್ವರ್ ಅವರನ್ನು ಡಿಸಿಎಂ ಮಾಡುವಂತೆ ಘೋಷಣೆ ಕೂಗಿ ಆಗ್ರಹಿಸಿದರು.

ಅಭಿಮಾನಿ ಬಳಗದ ಮುಖ್ಯಸ್ಥ ರಾಜು ಮಾತನಾಡಿ, ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಆಯ್ಕೆಯಾಗಿದ್ದಾರೆ. ಅವರ ನೂತನ ಮಂತ್ರಿಮಂಡಲದಲ್ಲಿ ಕಾಂಗ್ರೆಸ್ ಹಿರಿಯ ನಾಯಕ ಡಾ.ಜಿ.ಪರಮೇಶ್ವರ್ ಅವರನ್ನು ಉಪ ಮುಖ್ಯಮಂತ್ರಿ ಮಾಡಿ ದಲಿತ ಸಮುದಾಯಕ್ಕೆ ಪ್ರಾತಿನಿಧ್ಯ ನೀಡುವಂತೆ ಒತ್ತಾಯಿಸಿದರು.



ಡಾ.ಜಿ.ಪರಮೇಶ್ವರ್‌ರನ್ನು ಉಪ ಮುಖ್ಯಮಂತ್ರಿ ಮಾಡುವಂತೆ ಒತ್ತಾಯಿಸಿ ಪ್ರತಿಭಟಿಸಲಾಯಿತು.

ದಸಂಸ(ಡಾ.ಡಿ.ಜಿ.ಸಾಗರ್ ಬಣ) ಜಿಲ್ಲಾ ಸಂಘಟನಾ ಸಂಚಾಲಕ ಕೃಷ್ಣ ಮಾತನಾಡಿ, ಕಳೆದ 75 ವರ್ಷಗಳಿಂದ ದಲಿತರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಮತದಾರರಾಗಿದ್ದಾರೆ. ಆದರೆ ಪಕ್ಷ ಮಾತ್ರ ದಲಿತರಿಗೆ ಉನ್ನತ ಮಟ್ಟದ ಸಾಂವಿಧಾನಿಕ ಹುದ್ದೆ ನೀಡದಿರುವುದು ದುರಂತ. ಹೀಗಾಗಿ ಡಿ.ಕೆ.ಶಿವಕುಮಾರ್ ನೇತೃತ್ವದ ನೂತನ ಸಂಪುಟದಲ್ಲಿ ಜಿ.ಪರಮೇಶ್ವರ್ ಅವರನ್ನು ಉಪ ಮುಖ್ಯಮಂತ್ರಿ ಮಾಡುವುದರಿಂದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದವರಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಿದಂತಾಗುತ್ತದೆ ಎಂದರು.

ಪ್ರತಿಭಟನೆಯಲ್ಲಿ ಡಾ.ಜಿ.ಪರಮೇಶ್ವರ್ ಅಭಿಮಾನಿ ಬಳಗದ ಅಧ್ಯಕ್ಷ ಮಂಜುನಾಥ್, ಶಿವರಾಜು, ಲೋಕೇಶ್, ಹೊನ್ನಪ್ಪ, ಗಂಗಣ್ಣ ಬಸವರಾಜು, ಕಾಳಪ್ಪ ನಾಗರಾಜ, ಮಲ್ಲೇಶ್ ಸೇರಿದಂತೆ ಹಲವರಿದ್ದರು.

ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ



ಮೈಸೂರು ತಾಲೂಕು ಬರಡನಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಪ್ರಾರಂಭೋತ್ಸವದಲ್ಲಿ ಸಮಾಜ ಸೇವಕ ಎಸ್. ಶ್ರೀಕಾಂತ್ ಅವರು ವಿದ್ಯಾರ್ಥಿಗಳಿಗೆ ಸಿಹಿ, ವೈಯುಕ್ತಿಕವಾಗಿ ನೋಟ್‌ಬುಕ್‌ಗಳನ್ನು ವಿತರಿಸಿದರು. ಈ ವೇಳೆ ಮುಖ್ಯಶಿಕ್ಷಕಿ ನೀಲಾಂಬಿಕೆ, ಗ್ರಾಮಸ್ಥರಾದ ಬಸಮ್ಮ, ಜಯಮ್ಮ, ರಾಣಿ, ಸುಮ, ಪ್ರಿಯಾಂಕ, ಕಾವ್ಯ, ಕುಮಾರಿ, ನಾಗ, ರಮ್ಯಾ, ಪೂಜಾ, ಗಣೇಶ ಹಾಜರಿದ್ದರು.

ಹಿಂಡುಗುಡ್ಲು ಗ್ರಾಮದಲ್ಲಿ ಅಂಬೇಡ್ಕರ್ ಪುತ್ಥಳಿ ಉದ್ಘಾಟನೆ



ಅಂಬೇಡ್ಕರ್ ಪುತ್ಥಳಿಯನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಹುಣಸೂರು, ಜೂ.1– ತಾಲೂಕಿನ ಹಿಂಡುಗುಡ್ಲು ಗ್ರಾಮದಲ್ಲಿ ಜೈ ಭೀಮ್ ಪುತ್ಥಳಿ ಪ್ರತಿಷ್ಠಾನದಿಂದ ನೂತನವಾಗಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಯನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಬೌದ್ಧ ವಿಹಾರದ ಗೌತಮಿ ಮಾತಾ ಬಂತೇಜಿ, ಕಲ್ಯಾಣಸಿರಿ ಬಂತೇಜಿ ಅವರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ದಲಿತ ಮುಖಂಡರಾದ ನಾಗರಾಜ್ ಮಲ್ಲಾಡಿ, ದೇವರಾಜ್ ಒಡೆಯರ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಘು, ಉದ್ಯಮಿ ಕಾರ್ತಿಕ್, ಗ್ರಾಮದ ಮುಖಂಡ ಶಿವಕುಮಾರ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಕುಮಾರ್, ಸ್ವಾಮಿ, ಗೋವಿಂದರಾಜು, ಗ್ರಾಪಂ ಮಾಜಿ ಅಧ್ಯಕ್ಷ ಹರೀಶ್, ಬಸವಯ್ಯ, ರಮೇಶ್, ಬೀರಪ್ಪ, ನಾಗರಾಜ್, ರೇವಣ್ಣ, ನಾಗೇಶ್, ಮಂಜು ಇತರರಿದ್ದರು.

ಅಖಿಲಗೆ ಪಿಹೆಚ್.ಡಿ



ಮೈಸೂರು: ಡಾ.ಲೋಕನಾಥ್. ಎನ್.ಕೆ. ಅವರ ಮಾರ್ಗದರ್ಶನದಲ್ಲಿ ಅಖಿಲ.ಎ. ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ

ಹುಟ್ಟುಹಬ್ಬದ ಶುಭಾಶಯ



66ನೇ ಹುಟ್ಟುಹಬ್ಬ ಆಚರಿಸಿಕೊಂಡ ಶ್ರೀಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಕೆ.ಆರ್.ನಗರ ಶಾಖಾ ಮಠದ ಶ್ರೀಶಿವಾನಂದಪುರಿ ಸ್ವಾಮೀಜಿ ಅವರನ್ನು ಶಾಸಕ ಜಿ.ಡಿ.ಹರೀಶ್‌ಗೌಡ, ಅವರ ಪತ್ನಿ ವರ್ಷಾ ಹರೀಶ್ ಗೌಡ, ಶ್ರೀರಾಂಪುರ ಪಿಎಸಿಎಸ್ ಅಧ್ಯಕ್ಷ ಕೋಟೆಹುಂಡಿ ಮಹದೇವು ಹಾಗೂ ಇತರರು ಸನ್ಮಾನಿಸಿ ಹುಟ್ಟುಹಬ್ಬದ ಶುಭ ಕೋರಿದರು.

ಡಾ.ಯತೀಂದ್ರರನ್ನು ಡಿಸಿಎಂ ಮಾಡಲು ಒತ್ತಾಯ



ನಂಜನಗೂಡು, ಜೂ.1– ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಉಪ ಮುಖ್ಯಮಂತ್ರಿ ಮಾಡುವ ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನ ನೀಡಿ ಎಂದು ಕಾಂಗ್ರೆಸ್ ಹೈಕಮಾಂಡ್ ಅನ್ನು ಮಾಜಿ ತಾಪಂ ಅಧ್ಯಕ್ಷ ತಮ್ಮಣ್ಣೇಗೌಡ ಒತ್ತಾಯಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ವರ್ಚಸ್ಸಿನಿಂದ ಅಹಿಂದ ಮತಗಳನ್ನು ಸಂಘಟಿಸಿದ ಪರಿಣಾಮ ಹಳೆ ಮೈಸೂರು ಭಾಗದಲ್ಲಿ 40 ಸ್ಥಾನಗಳ ಪೈಕಿ 21 ಸ್ಥಾನಗಳಲ್ಲಿ ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದಾರೆ. ಆದ್ದರಿಂದ ಅವರ ನಂತರ ಹಳೆ ಮೈಸೂರು ಭಾಗದಲ್ಲಿ ಅಹಿಂದ ವರ್ಗಗಳನ್ನು ಮುನ್ನಡೆಸಲು ಎಂಎಲ್‌ಸಿ ಡಾ.ಯತೀಂದ್ರ ಅವರನ್ನು ಹೊಸ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿ ನೇಮಿಸಿ ಪ್ರಬಲ ಖಾತೆ ನೀಡುವ ಮೂಲಕ ಹೆಚ್ಚಿನ ಜವಾಬ್ದಾರಿ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಯೊಬ್ಬರೂ ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಿ

ಸಮಾಜ ಸೇವಕ ಡಾ.ಮಹೇಂದ್ರ ಸಿಂಗ್ ಕಾಳಪ್ಪ ಸಲಹೆ

ತಿ.ನರಸೀಪುರ, ಜೂ.1– ಕಣ್ಣುಗಳು ಮಾನವನ ದೇಹದ ಅತ್ಯಂತ ಪ್ರಮುಖ ಅಂಗ. ಹೀಗಾಗಿ ಪ್ರತಿಯೊಬ್ಬರೂ ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ರೋಟರಿ ಸಂಸ್ಥೆ ಮಾಜಿ ಅಧ್ಯಕ್ಷ, ಸಮಾಜ ಸೇವಕ ಡಾ.ಮಹೇಂದ್ರ ಸಿಂಗ್ ಕಾಳಪ್ಪ ಸಲಹೆ ನೀಡಿದರು.

ತಾಲೂಕಿನ ಕರೋಹಟ್ಟಿ ಗ್ರಾಮದ ಗುರು ಮಲ್ಲೇಶ್ವರ ಮಠದಲ್ಲಿ ಕಾನ್ ಸಿಂಗ್ ಜೀ ಪುರೋಹಿತ್ ಹಾಗೂ ಗೌರಿದೇವಿ ಸ್ಮರಣಾರ್ಥ ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆ, ಬನ್ನೂರಿನ ರೋಟರಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಗ್ರಾಮೀಣ ಹಾಗೂ ನಗರದ ಜನರಿಗೆ ಉಚಿತವಾಗಿ ಗುಣಮಟ್ಟದ ನೇತ್ರ ಚಿಕಿತ್ಸಾ ಸೇವೆ ಒದಗಿಸುವ ಉದ್ದೇಶದಿಂದ ಬೃಹತ್ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ನಮ್ಮ ತಂದೆ–ತಾಯಿ ಸ್ಮರಣಾರ್ಥ ಕಳೆದ 18 ವರ್ಷಗಳಿಂದ ಯಶಸ್ವಿಯಾಗಿ ಶಿಬಿರಗಳನ್ನು ನಡೆಸಿಕೊಂಡು ಬಂದಿದ್ದೇನೆ ಎಂದರು.

ಇಂದಿನ ಆಧುನಿಕ ಜೀವನ ಶೈಲಿ, ಮೊಬೈಲ್ ಮತ್ತು ಕಂಪ್ಯೂಟರ್ ಬಳಕೆ, ಪರಿಸರ ಮಾಲಿನ್ಯ ಹಾಗೂ ವಯೋಸಹಜ ಕಾರಣಗಳಿಂದ ಕಣ್ಣಿನ ಸಮಸ್ಯೆಗಳು ಹೆಚ್ಚುತ್ತಿವೆ. ಇಂತಹ ಸಂದರ್ಭ ಜನರಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಸೌಲಭ್ಯ ಕಲ್ಪಿಸುವ ಶಿಬಿರಗಳು ಅತ್ಯಂತ ಉಪಯುಕ್ತ ಎಂದರು.



ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಗ್ರಾಮಸ್ಥರು ತಪಾಸಣೆಗೊಳಪಟ್ಟರು.

ಕಣ್ಣಿನ ದೃಷ್ಟಿ ಕಳೆದುಕೊಂಡ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಮುಂಚಿತವಾಗಿ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ಆದ್ದರಿಂದ ಪ್ರತಿಯೊಬ್ಬರೂ ವರ್ಷಕ್ಕೊಮ್ಮೆ ಕಣ್ಣಿನ ಪರೀಕ್ಷೆ ಮಾಡಿಸಿಕೊಳ್ಳಬೇಕು. ವಿಶೇಷವಾಗಿ ಹಿರಿಯ ನಾಗರಿಕರು, ಮಧುಮೇಹ ಮತ್ತು ರಕ್ತದೊತ್ತಡದಿಂದ ಬಳಲುತ್ತಿರುವವರು ಕಣ್ಣಿನ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಶಿಬಿರದಲ್ಲಿ ಸಾರ್ವಜನಿಕರು ಉಚಿತವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಂಡರು. ಈ ವೇಳೆ ಹತ್ತಿರ, ದೂರ ದೃಷ್ಟಿ ದೋಷ ಇರುವವರನ್ನು ಪರೀಕ್ಷಿಸಿ ಔಷಧ ಹಾಗೂ ಕನ್ನಡಕ ವಿತರಿಸಲಾಯಿತು. ಅಲ್ಲದೇ ಹೆಚ್ಚು ಕಣ್ಣಿನ ತೊಂದರೆ ಇರುವ ವರ ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದೊಯ್ಯಲು ಕ್ರಮ ಕೈಗೊಳ್ಳಲಾಯಿತು.

ಈ ವೇಳೆ ಅರವಿಂದ ಕಣ್ಣಿನ ಆಸ್ಪತ್ರೆ ವೈದ್ಯರಾದ ಡಾ.ರೋಷನಿ ಫುರ್ಟಡೋ, ಡಾ.ಶಿವಾನಿ ನಮಲಾ, ಡಾ.ಕಾಜೋಲ್ ಪಾಟೀಲ್ ರೋಗಿಗಳಿಗೆ ಕಣ್ಣಿನ ತಪಾಸಣೆ ನಡೆಸಿದರು. ಇದೇ ವೇಳೆ ಗ್ರಾಮಸ್ಥರು ಸಮಾಜ ಸೇವಕ ಮಹೇಂದ್ರ ಸಿಂಗ್ ಕಾಳಪ್ಪ ಅವರನ್ನು ಸನ್ಮಾನಿಸಿದರು.

ಶಿಬಿರದ ಪ್ರೊ.ಬಿ.ವಿಜಯಕಾಂತ್, ಕೆಎಂ.ಶಿವಮೂರ್ತಿ, ಆನಂದ್, ಕರೋಹಟ್ಟಿ ರಾಜಶೇಖರ, ನಂಜುಂಡಪ್ಪ, ಮೂಗೂರು ಚಂದ್ರ, ಶಂಕರ್ ನಾಗ್, ರಾಜೇಶ್, ಮಹೇಶ್, ರಮೇಶ್, ಹರ್ಷವರ್ಧನ್, ಜೀವನ್, ಬಸವರಾಜು, ಪವನ್ ಸೇರಿದಂತೆ ಇತರರಿದ್ದರು.

ನಂಜುಂಡಸ್ವಾಮಿ ನಿಧನ



ಸರಗೂರು, ಜೂ.1– ಪಟ್ಟಣದ 11ನೇ ವಾರ್ಡ್ ಬಿಡಗಲು ನಿವಾಸಿ ನಂಜುಂಡಸ್ವಾಮಿ(73) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಮಂಗಳವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರವಿ

ಹೆಚ್.ಡಿ.ಕೋಟೆ, ಜೂ.1– ಜೆಡಿಎಸ್ ಕಾರ್ಯಕರ್ತ ಹಾಗೂ ಪಟ್ಟಣದ ನಿವಾಸಿ ರವಿ(50) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಪಟ್ಟಣದ ಸಾರ್ವಜನಿಕ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸರ್ಕಾರಿ ಶಾಲೆಯಲ್ಲಿ ಓದಿದವರೇ ಸಾಧನೆ ಮಾಡುವುದು...

- ರಟ್ಟನಹಳ್ಳಿಯ ಶಾಲಾ ಪ್ರಾರಂಭೋತ್ಸವದಲ್ಲಿ ಪೋಷಕರಿಗೆ ಶಾಸಕ ಜಿ.ಟಿ.ದೇವೇಗೌಡ ಸಂದೇಶ
- ಸಾಲ ಮಾಡಿ ಲಕ್ಷಾಂತರ ಡೊನೇಷನ್ ಕಟ್ಟಿ ಖಾಸಗಿ ಶಾಲೆಗೆ ಸೇರಿಸುವ ಸಾಹಸ ಬೇಡ
- ಸರ್ಕಾರಿ ಶಾಲೆಯಲ್ಲಿ ಓದಿದಂತಹವರೇ ಸಮಾಜದಲ್ಲಿ ಗಣ್ಯರಾಗಿ ಬೆಳೆದಿದ್ದಾರೆ



ಮೈಸೂರು ತಾಲೂಕಿನ ರಟ್ಟನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ಪ್ರಾರಂಭೋತ್ಸವ, ದಾಖಲಾತಿ ಆಂದೋಲನ ಹಾಗೂ ನೂತನ ಕಟ್ಟಡಗಳ ಉದ್ಘಾಟನಾ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು, ಜೂ.1(ಎಂಕೆ)– ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿದವರೇ ದೊಡ್ಡ ಮಟ್ಟದ ನಾಯಕರಾಗಿ, ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗಿ ಬೆಳೆದಿದ್ದಾರೆ. ಹಾಗಾಗಿ ಮಕ್ಕಳನ್ನು ಲಕ್ಷಾಂತರ ರೂ. ವಂತಿಗೆ ಕೊಟ್ಟು ಖಾಸಗಿ ಶಾಲೆಗೆ ಸೇರಿಸುವುದಕ್ಕಿಂತ ಸರ್ಕಾರಿ ಶಾಲೆಗೆ ಸೇರಿಸುವಂತೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದರು.

ಮೈಸೂರು ತಾಲೂಕಿನ ರಟ್ಟನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ಪ್ರಾರಂಭೋತ್ಸವ, ದಾಖಲಾತಿ ಆಂದೋಲನ ಹಾಗೂ ನೂತನ ಕಟ್ಟಡಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಮೂಲ ಸೌಕರ್ಯಗಳೊಂದಿಗೆ ಅಭಿವೃದ್ಧಿ ಮಾಡುತ್ತಿರುವುದರಿಂದ ಹೆಚ್ಚೆಚ್ಚು ವಿದ್ಯಾರ್ಥಿಗಳು ಮತ್ತೆ ಸರ್ಕಾರಿ ಶಾಲೆಗಳತ್ತ ಬರುತ್ತಿದ್ದಾರೆ. ಅಲ್ಲದೆ ಸರ್ಕಾರಿ ಶಾಲೆಗಳಲ್ಲಿ ಓದಿದವರೇ ದೇಶ–ವಿದೇಶಗಳಲ್ಲಿ ದೊಡ್ಡ ನಾಯಕರಾಗಿ ಬೆಳೆದಿದ್ದಾರೆ. ಆದ್ದರಿಂದ ಸಾಲ ಮಾಡಿ ಖಾಸಗಿ ಶಾಲೆಗೆ ಸೇರಿಸುವ ಬದಲು ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವಂತೆ ಕಿವಿಮಾತು ಹೇಳಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿನ ಸರ್ಕಾರಿ ಶಾಲಾ–ಕಾಲೇಜುಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ. ಶಾಲಾ–ಕಾಲೇಜುಗಳ ಜಾಗದ ಒತ್ತುವರಿಯನ್ನು ತೆರವುಗೊಳಿಸಿ ಸುತ್ತಲೂ ಕಾಂಪೌಂಡ್ ನಿರ್ಮಾಣ ಮಾಡಲಾಗುತ್ತಿದೆ. ಪೀಠೋಪಕರಣ, ಶೌಚಾಲಯ, ಶುದ್ಧ ಕುಡಿಯುವ ನೀರು ಸೇರಿದಂತೆ ಅಗತ್ಯ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಇದರಿಂದ ಮಕ್ಕಳ ಕಲಿಕೆಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಭರವಸೆ ನೀಡಿದರು.



ಜಿ.ಟಿ.ದೇವೇಗೌಡ ಅವರನ್ನು ಅಲಂಕೃತ ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮೂಲಕ ಕರೆತರಲಾಯಿತು.

50 ಲಕ್ಷ ರೂ.ವೆಚ್ಚದಲ್ಲಿ ಸೌಲಭ್ಯ: ರಟ್ಟನಹಳ್ಳಿ ಸರ್ಕಾರಿ ಶಾಲೆಯಲ್ಲಿ ಸಾಯಿ ಗಾರ್ಮೆಂಟ್ಸ್‌ನ ದೇವರಾಜ ಅರಸ್ ಅವರ ಸಹಕಾರದಿಂದ 50 ಲಕ್ಷ ರೂ.ವೆಚ್ಚದಲ್ಲಿ ನೂತನ ಕೊಠಡಿಗಳ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡಲಾಗಿದೆ. ಸರ್ಕಾರಿ ಶಾಲೆಯ ಉಳಿವಿಗೆ ಖಾಸಗಿ ಸಂಸ್ಥೆಗಳ ಸಹಕಾರವೂ ಅಗತ್ಯವಾಗಿದ್ದು, ಸಾಯಿ ಗಾರ್ಮೆಂಟ್ಸ್‌ನಿಂದಾಗಿ ಕ್ಷೇತ್ರ ಸಾವಿರಾರು ಜನರಿಗೆ ಉದ್ಯೋಗ ದೊರೆತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ನೂತನ ಕುಡಿಯುವ ನೀರಿನ ಘಟಕ, ಹೈಟೆಕ್ ಶೌಚಾಲಯ ಹಾಗೂ ಶಾಲಾ ಕಾಂಪೌಂಡ್ ಅನ್ನು ಉದ್ಘಾಟಿಸಿದರು.

> **ಮಕ್ಕಳು ಭವಿಷ್ಯದ ನಾಯಕರಾಗಬೇಕು...**
> ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ತಾಲೂಕು ಜಿಲ್ಲೆಯಲ್ಲಿ ಮೊದಲ ಸ್ಥಾನ ಪಡೆದಿದ್ದು, ಭವಿಷ್ಯದ ನಾಯಕರಾಗುವ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಕೊಡಿಸಬೇಕು. ಮನೆಯಲ್ಲಿ ತಂದೆ–ತಾಯಿ ಮತ್ತು ಪೋಷಕರಿಗೆ, ಶಾಲೆಯಲ್ಲಿ ಗುರುಗಳಿಗೆ ಗೌರವ ಕೊಡುವ ನೀತಿ ಪಾಠವನ್ನು ಮಕ್ಕಳಿಗೆ ಕಲಿಸಬೇಕು. ಮಕ್ಕಳನ್ನು ಭವಿಷ್ಯದ ನಾಯಕರನ್ನಾಗಿ ಬೆಳೆಸಬೇಕು.
> – ಜಿ.ಟಿ.ದೇವೇಗೌಡ, ಶಾಸಕರು.

ಎತ್ತಿನಗಾಡಿ ಸವಾರಿ: ರಟ್ಟನಹಳ್ಳಿ ಸರ್ಕಾರಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಅಲಂಕೃತ ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮೂಲಕ ಕರೆತರಲಾಯಿತು. ಸ್ವತಃ ಎತ್ತಿನ ಗಾಡಿ ಚಲಾಯಿಸಿದ ಜಿಟಿಡಿ, ನೆರೆದಿದ್ದವರ ಗಮನ ಸೆಳೆದರು. ಸಾಯಿ ಗಾರ್ಮೆಂಟ್ಸ್‌ನ ದೇವರಾಜ ಅರಸ್, ಕವಿತಾ, ಡಿಡಿಪಿಐ ಉದಯ್ ಕುಮಾರ್, ಗುಂಗ್ರಾಲ್ ಛತ್ರ ಗ್ರಾಪಂ ಆಡಳಿತಾಧಿಕಾರಿ ಚಿಕ್ಕಣ್ಣ, ಬಿಇಒ ಪ್ರಕಾಶ್, ಪಿಡಿಒ ಶಿವಣ್ಣ, ಮುಖಂಡರಾದ ಯದುವರ, ಅರುಣ್‌ಕುಮಾರ್ ಗ್ರಾಪಂ ಮಾಜಿ ಸದಸ್ಯರಾದ ರೇವಣ್ಣ, ಮಾದೇವಿ, ರೂಪಾ, ಮಂಜು, ಜಿಲ್ಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಮಾಲೇಗೌಡ, ಪದಾಧಿಕಾರಿಗಳಾದ ಎಸ್.ರಘು, ಸುಮತಿ, ಶಿವಪ್ಪ, ಮುರಳಿಧರ್, ರಘು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೆಡಿ (ಕ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಬೆಲ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕಾಟಾಳನ್ (ಕ)	4 ಪ್ರದರ್ಶನಗಳು
ಲಿಡೋ	
ಆತುಡು(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ಆಹಾರ ಉತ್ಪಾದನೆ, ಗುಣಮಟ್ಟದ ಬಗ್ಗೆ ಮೂರು ದಿನಗಳ ಕಾರ್ಯಾಗಾರ



ಯುವರಾಜ ಕಾಲೇಜಿನಲ್ಲಿ ಆಹಾರ ಉತ್ಪಾದನೆ ಮತ್ತು ಗುಣಮಟ್ಟ ಕಾಯ್ದುಕೊಳ್ಳುವಿಕೆಯ ಕಾರ್ಯಾಗಾರಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಮೈಸೂರು, ಜೂ.1(ಎಂಕೆ)– ಮೈಸೂರಿನ ಯುವರಾಜ ಕಾಲೇಜಿನ ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗದಲ್ಲಿ ನ್ಯೂಟ್ರಿಷನಲ್ ಸೊಸೈಟಿ ಆಫ್ ಇಂಡಿಯಾ (ಎನ್‌ಎಸ್‌ಐ) ಮೈಸೂರು ಚಾಪ್ಟರ್ ವತಿಯಿಂದ ಆಯೋಜಿಸಿರುವ ಆಹಾರ ಉತ್ಪಾದನೆ ಮತ್ತು ಗುಣಮಟ್ಟ ಕಾಯ್ದುಕೊಳ್ಳುವಿಕೆ ಕುರಿತ ಮೂರು ದಿನಗಳ ಕಾರ್ಯಾಗಾರಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಕಾರ್ಯಾಗಾರ ಉದ್ಘಾಟಿಸಿದ ಯುವರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್.ಮಹದೇವ ಮೂರ್ತಿ ಮಾತನಾಡಿ, ಆಹಾರ ಉದ್ಯಮದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದುಕೊಳ್ಳುವಿಕೆ ಅತ್ಯಂತ ಅವಶ್ಯವಾಗಿದೆ. ಉತ್ಪಾದಕರು ಗುಣಮಟ್ಟ ಕಾಯ್ದುಕೊಂಡರಷ್ಟೇ ಉತ್ತಮ ಆಹಾರ ಪೂರೈಕೆ ಮಾಡಲು ಸಾಧ್ಯ ಎಂದರು.

ಈ ವೇಳೆ ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಹೆಚ್. ಎಸ್.ಜಯಂತ್, ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗದ ಮುಖ್ಯಸ್ಥ ಪ್ರೊ ಆರ್.ಶೇಖರ ನಾಯಕ್, ಕೆಎಸ್‌ಒಯು ಎನ್‌ಎಸ್‌ಐ ಮೈಸೂರು ಚಾಪ್ಟರ್ ಸಂಚಾಲಕಿ ಡಾ.ಸಿ.ಅನಿತಾ, ಆಯುಷ್ ಸಹಾಯಕ ನಿರ್ದೇಶಕಿ ಡಾ.ಲಕ್ಷ್ಮಿ ನಾರಾಯಣ್ ಶೆಣೈ, ತರಬೇತುದಾರರಾದ ಸ್ವರ್ಣಲಕ್ಷ್ಮಿ, ಪಿ.ಕೆ ಪ್ರೀತಿ, ಅಧ್ಯಾಪಕಿ ಆರ್.ಮಾನಸ ಮತ್ತಿತರರಿದ್ದರು.

ಮಕ್ಕಳ ವಾರಾಂತ್ಯ ಅಭಿನಯ ತರಬೇತಿಗೆ ಆಹ್ವಾನ

ಮೈಸೂರು: ಅದಮ್ಯ ರಂಗಶಾಲೆ ವತಿಯಿಂದ ವಿ.ಕೆ. ಪಬ್ಲಿಕ್ ಸ್ಕೂಲ್ ಸಹಯೋಗದೊಂದಿಗೆ ಇದೇ ಜೂನ್ 13ರಿಂದ ಒಂದು ವರ್ಷ ಅವಧಿಯ ವಾರಾಂತ್ಯ ಅಭಿನಯ ಕಾರ್ಯಾಗಾರ ಹಾಗೂ ರಂಗ ತರಬೇತಿ ಕೋರ್ಸ್ ಆರಂಭವಾಗಲಿದ್ದು, ರಂಗಾಸಕ್ತ ಮಕ್ಕಳಿಂದ ನೋಂದಣಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಪೋಷಕರು ತಮ್ಮ ಮಕ್ಕಳನ್ನು ಜೂನ್ 13ರರೊಳಗೆ ದಾಖಲಿಸಿ ಪ್ರವೇಶಾತಿ ಪಡೆದಿರಬೇಕು. ಜೂನ್ 13ರಿಂದಲೇ ತರಗತಿಗಳು ಪ್ರಾರಂಭವಾಗಲಿವೆ. ಪ್ರತಿ ಶನಿವಾರ ಮತ್ತು ಭಾನುವಾರ ತರಗತಿ ನಡೆಯಲಿದ್ದು, ಶನಿವಾರ ಸಂಜೆ 5–30 ರಿಂದ 8ರವರೆಗೂ ಭಾನುವಾರ ಬೆಳಿಗ್ಗೆ 10–30 ರಿಂದ ಮಧ್ಯಾಹ್ನ 1–30 ಗಂಟೆಯವರೆಗೂ ತರಗತಿಗಳು ನಡೆಯಲಿವೆ. ಕಾರ್ಯಾಗಾರಕ್ಕೆ ಗರಿಷ್ಠ 25 ಮಂದಿ ಮಕ್ಕಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಮಕ್ಕಳ ವಯೋಮಿತಿ 5 ವರ್ಷದಿಂದ 13 ವರ್ಷವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯದರ್ಶಿ ಚಂದ್ರು ಮಂಡ್ಯ ಮೊ. 8660103141 ಸಂಪರ್ಕಿಸಬಹುದು.

ಶಾಲಾ ಪ್ರಾರಂಭೋತ್ಸವ



ಮೈಸೂರು ಲಕ್ಷ್ಮೀಪುರಂನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ನಡೆದ ಶಾಲಾ ಪ್ರಾರಂಭೋತ್ಸವದಲ್ಲಿ ಮೈಸೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳ ಎಸ್. ಕೆ. ಅವರು ದೀಪ ಬೆಳಗಿಸಿ ಸಿಹಿ ನೀಡುವುದರ ಮೂಲಕ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ಈ ವೇಳೆ ಶಾಲೆಯ ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗದವರು ಹಾಗೂ ಪೋಷಕರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರಲ್ಲಿ ಮೇಘನಾಗೆ ಪ್ರಥಮ ರ್‍ಯಾಂಕ್



ಮೈಸೂರು, ಜೂ.1– ಮರಿಮಲ್ಲಪ್ಪ ಪ್ರೌಢಶಾಲೆಯ ಮೇಘನಾ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರಲ್ಲಿ ವಿಜ್ಞಾನ ವಿಷಯದಲ್ಲಿ 80 ಅಂಕ ಗಳಿಸುವುದರ ಮೂಲಕ 625/625 ಅಂಕ ಗಳಿಸಿ, ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದಿರುತ್ತಾಳೆ.

ಎಸ್.ಎಸ್.ಎಲ್.ಸಿ. ಪರೀಕ್ಷೆ–1ರ ಫಲಿತಾಂಶದಲ್ಲಿ 619 ಅಂಕ ಗಳಿಸಿದ್ದು, ಮರು ಮೌಲ್ಯಮಾಪನದಲ್ಲಿ 622 ಅಂಕ ಬಂದಿತ್ತು. ನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆ–2 ಪರೀಕ್ಷೆ ಬರೆದಿದ್ದು, ಫಲಿತಾಂಶದ ನಂತರ 625 ಅಂಕ ಬಂದಿದ್ದು, ಮೈಸೂರು ಜಿಲ್ಲೆಗೆ ಪ್ರಥಮ ರ್‍ಯಾಂಕ್ ಗಳಿಸಿದ್ದಾಳೆ.

ಇಂದಿನಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಜೂ.1– ಜ್ಯೋತಿನಗರ ಉಪವಿಭಾಗ ವ್ಯಾಪ್ತಿಯ ಭೂಗತ ಕೇಬಲ್ ಕಾಮಗಾರಿ ಕೆಲಸದ ನಿಮಿತ್ತ ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಜೂ.2 ರಂದು ಯರಗನಹಳ್ಳಿ, ರಾಘವೇಂದ್ರನಗರ, ಜೂ.3 ರಂದು ಜೆ.ಎಸ್.ಎಸ್ ಬಡಾವಣೆ, ಶಕ್ತಿನಗರ, ಟೆರೇಸ್ ಬಡಾವಣೆ, ಡಾ. ರಾಜ್‌ಕುಮಾರ್ ರಸ್ತೆ (ಟೆರೇಸಿಯನ್ ವೃತ್ತದಿಂದ ಗಣೇಶ ದೇವಸ್ಥಾನದವರೆಗೆ), ಜೂ.4 ರಂದು ಡಾ. ರಾಜ್‌ಕುಮಾರ್ ರಸ್ತೆ (ಟೆರೇಸಿಯನ್ ವೃತ್ತದಿಂದ ಯರಗನಹಳ್ಳಿ ಕಡೆಗೆ) ರಾಘವೇಂದ್ರನಗರ ಈ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮಹದೇವಪ್ಪರಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ದಲಿತ ಮುಖಂಡರ ಪಂಜಿನ ಮೆರವಣಿಗೆ

ಮೈಸೂರು, ಜೂ.1(ಎಸ್‌ಪಿಎನ್)– ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಅಶೋಕಪುರಂನ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಿಂದ ಬಲ್ಲಾಳ್ ವೃತ್ತದವರೆಗೆ ದಲಿತ ಮುಖಂಡರು ಪಂಜಿನ ಮೆರವಣಿಗೆ ನಡೆಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಅವರ ನೇತೃತ್ವದಲ್ಲಿ ನಡೆದ ಈ ಮೆರವಣಿಗೆಯಲ್ಲಿ ವಿವಿಧ ಘೋಷಣೆಗಳನ್ನು ಕೂಗಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಡಾ.ಹೆಚ್.ಸಿ. ಮಹದೇವಪ್ಪ ಅವರು ಈ ಭಾಗದ ಪ್ರಭಾವಿ ರಾಜಕೀಯ ಮುಖಂಡರಲ್ಲಿ ಒಬ್ಬರು. ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸ್ಥಾನ ಕಲ್ಪಿಸುವ ಸೂಚನೆಗಳು ಕಾಣುತ್ತಿಲ್ಲ. ಆಗೊಂದು ವೇಳೆ ಮಹದೇವಪ್ಪ ಅವರ ಹೆಸರು ಕೈಬಿಟ್ಟರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.



ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ದಲಿತ ಮುಖಂಡರ ಪಂಜಿನ ಮೆರವಣಿಗೆ ದೃಶ್ಯ

ಕಾಂಗ್ರೆಸ್ ಹೈಕಮಾಂಡ್ ಮೊದಲಿನಿಂದಲೂ ದಲಿತರಿಗೆ ರಾಜಕೀಯವಾಗಿ ಅಧಿಕಾರ ನೀಡುವಾಗ ಹೊಡೆದು ಆಳುವ ನೀತಿ ಅನುಸರಿಸುತ್ತಿದೆ. ಕಳೆದ 15 ವರ್ಷಗಳಿಂದ ದಲಿತರಿಗೆ ಸಿಎಂ ಸ್ಥಾನ ನೀಡುವಂತೆ ಒತ್ತಾಯಿಸಲಾಗುತ್ತಿದೆ. ಆದರೂ ಕಾಂಗ್ರೆಸ್ ಹೈಕಮಾಂಡ್ ಮನಸ್ಸು ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಈ ವೇಳೆ ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಸಿದ್ದರಾಜು, ಮಹೇಶ್, ನಾಗರಾಜು, ಶಿವಕುಮಾರ್, ಅಶೋಕಪುರಂ ಮುಖಂಡರು ಸೇರಿದಂತೆ ಇತರರಿದ್ದರು.

ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಲೋಕ ಅದಾಲತ್

ಮೈಸೂರು, ಜೂ.1– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಸರ್ವೋಚ್ಚ ನ್ಯಾಯಾಲಯವು ವಿಶೇಷ ಲೋಕ ಅದಾಲತ್ ಅನ್ನು ಆ.21ರಿಂದ 23ರವರೆಗೆ ನಡೆಸಲು ಉದ್ದೇಶಿಸಲಾಗಿದೆ. ಈ ಹಿನ್ನಲೆಯಲ್ಲಿ ಪಕ್ಷಕಾರರುಗಳಿಗೆ, ಎದುರುದಾರರ ಜೊತೆ ಪೂರ್ವಭಾವಿ ಲೋಕ ಅದಾಲತ್ ಅನ್ನು ನಡೆಸಲು ವೀಡಿಯೋ ಕಾನ್ಫರೆನ್ಸ್ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ವೀಡಿಯೊ ಕಾನ್ಫರೆನ್ಸ್ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ.

ಎಲ್ಲಾ ಪಕ್ಷಕಾರರು ವೀಡಿಯೊ ಕಾನ್ಫರೆನ್ಸ್ ಮೂಲಕ ಸರ್ವೋಚ್ಚ ನ್ಯಾಯಾಲಯವು ನಡೆಸುವ ಪೂರ್ವಭಾವಿ ಲೋಕ ಅದಾಲತ್‌ನಲ್ಲಿ ಭಾಗವಹಿಸಲು ಅನುಕೂಲ ಮಾಡಲಾಗಿದೆ. ಈ ವಿಶೇಷ ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನಕ್ಕೆ ಗುರುತಿಸಲಾದ ಪ್ರಕರಣಗಳ ಪಟ್ಟಿಯನ್ನು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ವರದಿಯಾಗಿರುತ್ತದೆ.

ಇದರಿಂದ ಸದರಿ ಪ್ರಕರಣಗಳಲ್ಲಿನ ಎಲ್ಲಾ ಪಕ್ಷಕಾರರುಗಳು ತಮ್ಮ ವಾಸಸ್ಥಳಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ತೆರೆಯಲಾಗಿರುವ ವೀಡಿಯೊ ಕಾನ್ಫರೆನ್ಸ್ ಕೇಂದ್ರಗಳಿಗೆ ಭೇಟಿ ಕೊಟ್ಟು ಆ.21 ರಿಂದ 23 ರವರೆಗೆ ನಡೆಯುವ ವಿಶೇಷ ಲೋಕ ಅದಾಲತ್‌ನಲ್ಲಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ WWW. kslsa.kar.nic.in ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ ಹಾಗೂ ಆಯಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಮತ್ತು ತಾಲೂಕು ಕಾನೂನು ಸೇವಾ ಸಮಿತಿಗಳ ಸದಸ್ಯ ಕಾರ್ಯದರ್ಶಿಯವರನ್ನು ಮತ್ತು NALSA ಸಹಾಯವಾಣಿ ಸಂಖ್ಯೆ: 15100 ಸಂಪರ್ಕಿಸಬಹುದೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಮರ್‌ನಾಥ್. ಕೆ.ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಪತ್ರಕರ್ತರು ಕಟು ಸತ್ಯ ಬರೆಯುವ ಕಾಲ ಈಗ ಬಂದಿದೆ...

- ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಸಲಹೆ
- ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜರ 'ಸಾಧನೆಯ ಶಿಖರ' ಕೃತಿ ಬಿಡುಗಡೆ

ಮೈಸೂರು,ಜೂ.1(ಎಂಟಿವೈ)– ಪತ್ರಿಕಾ ಕ್ಷೇತ್ರ ತನ್ನದೇ ಆದ ಮಹತ್ವ ಪಡೆದಿದ್ದು, ಸಮಾಜದಲ್ಲಿ ಸುಧಾರಣೆ ತರಲು ಮಾಧ್ಯಮಗಳು ಮುಂದಾಗಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಸೋಮವಾರ ಭಾರತೀ ಪ್ರಕಾಶನದಿಂದ ಆಯೋಜಿಸಿದ್ದ ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ ಅವರ 'ಸಾಧನೆಯ ಶಿಖರ' ಕೃತಿ ಬಿಡುಗಡೆ ನಂತರ ಮಾತನಾಡಿದ ಅವರು, ಕಾಲ ಬದಲಾದಂತೆ ಪತ್ರಿಕಾ ರಂಗವೂ ಬದಲಾಗಿದೆ. ರಾಜಕೀಯ ಕ್ಷೇತ್ರವೂ ಬದಲಾಗಿದೆ. ಅಂದಿನ ರಾಜಕಾರಣಿಗಳು, ಪತ್ರಕರ್ತರು, ಜನರು ಇಂದು ಇಲ್ಲ. ಪ್ರಜಾಪ್ರಭುತ್ವದಲ್ಲಿ ನಾಲ್ಕನೇ ಅಂಗ ಪತ್ರಿಕಾರಂಗ ಬಹಳ ಮಹತ್ವವಾದದ್ದು. ಇತರೆ ಮೂರು ಅಂಗಗಳಾದ ಕಾರ್ಯಾಂಗ, ನ್ಯಾಯಾಂಗ ಮತ್ತು ರಾಜಕೀಯ ಕ್ಷೇತ್ರದ ಎಲ್ಲಾ ಕೆಲಸಗಳನ್ನು ಜನರಿಗೆ ತಿಳಿಸುವುದು ಮಾಧ್ಯಮ. ಹಾಗಾಗಿ ಇದರ ಜವಾಬ್ದಾರಿ ಹೆಚ್ಚಾಗಿರುತ್ತದೆ. ಕಟು ಸತ್ಯ ಬರೆಯುವ ಕಾಲ ಬಂದಿದೆ. ಮಾಲೀಕರು ಏನು ಬರೆಯಬೇಕೆಂದು ನಿರ್ಧಾರ ಮಾಡುವ ಕಾಲದಲ್ಲಿಯೂ ನಿಜ ಸಂಗತಿ ಬಯಲಿಗೆಳೆಯುವ ಪತ್ರಕರ್ತರು ಇರುವುದು ಮೆಚ್ಚುವಂತದ್ದು ಎಂದು ತಿಳಿಸಿದರು.

ಮಾಧ್ಯಮಗಳು ಆಡಳಿತ ವರ್ಗದ ತಪ್ಪನ್ನು ತೋರಿಸುವ ಮತ್ತು ಪ್ರಶ್ನಿಸುವ ಮೂಲಕ ಆಡಳಿತ ಯಂತ್ರವನ್ನು ಸರಿದಾರಿಗೆ ತರುವ ಕೆಲಸ ಮಾಡಬೇಕು. ಆದರೆ, ಇತ್ತೀಚೆಗೆ ಆ ಸಂಪ್ರದಾಯ ಮಾಯವಾಗಿ, ಹೊಗಳುವುದು, ಆರಾಧಿಸುವುದು ಹೆಚ್ಚಾಗಿದೆ. ನಾವು ಹೇಳಬೇಕಿರುವ ಮಾತಿಗಿಂತ, ಬೇರೆ ಮಾತುಗಳೇ ಹೆಚ್ಚು ಸುದ್ದಿಯಾಗುತ್ತಿವೆ. ಇದು ಕಡಿಮೆಯಾಗಬೇಕು. ಸಮಾಜದಲ್ಲಿ ಎತ್ತರಕ್ಕೆ ಬೆಳೆದವರ, ಮಾದರಿಯಾಗಿರುವ ವ್ಯಕ್ತಿಗಳ ಪರಿಚಯವನ್ನು ಮುಂದಿನ ತಲೆಮಾರಿಗೆ ತಿಳಿಸಿಕೊಡುವ ಕೆಲಸ ಆಗಬೇಕು. ಇದಕ್ಕೆ ಪೂರಕವಾಗಿ ಪತ್ರಕರ್ತ ಕೂಡ್ಲಿ ಗುರುರಾಜ್ ಅವರು, 70ಕ್ಕೂ ಹೆಚ್ಚು ಜನರ ಜೀವನ ಚಿತ್ರಣವನ್ನು ಸಾಧನೆಯ ಶಿಖರ ಪುಸ್ತಕದಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದು ಹೇಳಿದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಸೋಮವಾರ ನಡೆದ ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ ಅವರ 'ಸಾಧನೆಯ ಶಿಖರ' ಕೃತಿಯನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಬಿಡುಗಡೆ ಮಾಡಿದರು.

ಮುಖ್ಯಮಂತ್ರಿ ಸ್ಥಾನ ಹಸ್ತಾಂತರ ವಿಷಯದಲ್ಲಿ ಸಿದ್ದರಾಮಯ್ಯ ದೇಶಕ್ಕೇ ಮಾದರಿ

ಮೈಸೂರು,ಜೂ.1(ಎಂಟಿವೈ)– ಮುಖ್ಯಮಂತ್ರಿ ಸ್ಥಾನ ಹಸ್ತಾಂತರದ ವೇಳೆ ಸಿದ್ದರಾಮಯ್ಯ ಅವರು ಶ್ರೇಷ್ಠ ಸಂಪ್ರದಾಯ ಅನುಸರಿಸಿ, ದೇಶಕ್ಕೆ ಮಾದರಿಯಾದರು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರಶಂಸಿಸಿದರು.

ಡಿ.ಕೆ.ಶಿವಕುಮಾರ ಅಭಿನಂದಿಸಿ ಮಾಧ್ಯಮದವರೊಂದಿಗೆ ಮಾತಾಡಿದ್ದನ್ನು ಹಂಚಿಕೊಂಡ ಅವರು, ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಂಡು ಮೇಲ್ಪಂಕ್ತಿ ಹಾಕಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಮುಂದಿನ ದಿನಗಳಲ್ಲಿ ಎಲ್ಲರೂ ಸಿದ್ದರಾಮಯ್ಯ ಅವರ ಹಾದಿಯನ್ನು ಅನುಸರಿಸಬೇಕಾಗುತ್ತದೆ ಎಂದು ತಿಳಿಸಿದರು.

ರಾಜ್ಯದ ಅಧಿಕಾರದ ಹಸ್ತಾಂತರದ ಸಂದಿಗ್ಧತೆಯ ಬಗ್ಗೆ ಮಾಧ್ಯಮದವರು ಪ್ರಶ್ನೆ ಕೇಳುತ್ತಾರೆ. ಸಭಾಪತಿಯಾಗಿ ರಾಜಕಾರಣದ ಬಗ್ಗೆ ಮಾತನಾಡುವಂತಿಲ್ಲ ಎಂದರೂ ಬಿಡುವುದಿಲ್ಲ. ಆದರೆ, ಮಾಧ್ಯಮದವರ ಪ್ರಶ್ನೆಗೆ ಉತ್ತರಿಸುತ್ತೇನೆ. ಸಿಟ್ಟು ಮಾಡಿಕೊಳ್ಳುವುದಿಲ್ಲ ಎಂದರು. 1983ರಿಂದಲೂ ಸಿದ್ದರಾಮಯ್ಯ–ನಾನು ಆತ್ಮೀಯ ಸ್ನೇಹಿತರು. ಸಿದ್ದರಾಮಯ್ಯನನ್ನು ಏಕವಚನದಲ್ಲಿ ಕರೆದಿದ್ದನ್ನು ಮಾಧ್ಯಮಗಳು ವಿವಾದ ಮಾಡಿದವು. ಆದರೆ, ಅಧಿಕಾರ ಇರುತ್ತೆ–ಹೋಗುತ್ತದೆ. ಸಾಯುವ ತನಕ ನಾವಿಬ್ಬರು ಸ್ನೇಹಿತರು ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಮಾತನಾಡಿ, ಬರಹಗಾರರಿಗೆ ಪತ್ರಿಕೆಗಳಲ್ಲಿ ಸ್ಪೇಸ್ ಇಲ್ಲ. ಫೇಸ್‌ಬುಕ್‌ನಲ್ಲಿ ಅನೇಕರು ಬರೆಯುತ್ತಿದ್ದಾರೆ. ಪ್ರಾಮಾಣಿಕರು ಪತ್ರಕರ್ತರಾಗಿ ಇರುವುದು ಕಷ್ಟ. ಪತ್ರಕರ್ತರ ಬಗ್ಗೆ ಕೆಲವು ರಾಜಕಾರಣಿಗಳಲ್ಲಿ ಮಿಥ್ ಮತ್ತು ಅಹಂಕಾರ ಇದೆ. ಪತ್ರಕರ್ತರು ನಂಬಿಕೆ ಮತ್ತು ಗೌರವ ಉಳಿಸಿಕೊಳ್ಳುವ ಕಾಲಘಟ್ಟದಲ್ಲಿದ್ದಾರೆ ಎಂದರು.

ಇದೇ ವೇಳೆ ಲೇಖಕ ಪ್ರಕಾಶ್ ಬಾಬು ಪುಸ್ತಕ ಕುರಿತು ಮಾತನಾಡಿದರು.

ಈ ವೇಳೆ ಕಾರ್ಯಕ್ರಮದಲ್ಲಿ ಪತ್ರಕರ್ತ ಮದನ್ ಗೌಡ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಭಾರತೀ ಪ್ರಕಾಶನದ ಬಿ.ಎನ್. ಶ್ರೀನಿವಾಸ್, ಪತ್ರಕರ್ತ ಕೂಡ್ಲಿ ಗುರುರಾಜ್ ಇನ್ನಿತರರು ಉಪಸ್ಥಿತರಿದ್ದರು.

ಗೋಕುಲಂ ಪಿಕೆ ಕಾಲೋನಿಯಲ್ಲಿ 95 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹರೀಶ್‌ಗೌಡ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಜೂ.1(ಎಂಕೆ)– ಮೈಸೂರು ವಾರ್ಡ್ ನಂ.19ರ ಗೋಕುಲಂ 2ನೇ ಹಂತದ ಪಿ.ಕೆ.ಕಾಲೋನಿಯಲ್ಲಿ 95 ಲಕ್ಷ ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿದರು.


ನಗರ ಪಾಲಿಕೆಯ ಶೇ.24.10ರ ಅನುದಾನದಲ್ಲಿ ಪಿ.ಕೆ.ಕಾಲೋನಿಯಲ್ಲಿರುವ ಪಾರ್ಕ್ ಒಳಭಾಗದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಪೈಪ್‌ಲೈನ್ ಅಳವಡಿಸುವುದು, ಲಾನ್, ಪಾದಾಚಾರಿ ಮಾರ್ಗ ಅಭಿವೃದ್ಧಿ, ಪಾರ್ಕ್ ಸುತ್ತ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವುದು ಹಾಗೂ ಮರು ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿದರು.

ಹಾಗೆಯೇ 45 ಲಕ್ಷ ರೂ.ವೆಚ್ಚದಲ್ಲಿ ಪಾರ್ಕ್ ಸುತ್ತ ಹಾಗೂ ಇಲ್ಲಿನ ನರ್ಮ್ ಮನೆಗಳ ಮುಂಭಾಗ ಮಳೆ ನೀರು ಚರಂಡಿ ಹಾಗೂ ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗೂ ಚಾಲನೆ ನೀಡಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ರಮೇಶ್, ಸುಶೀಲ ಮರೀಗೌಡ, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್ ಅಧ್ಯಕ್ಷರಾದ ದಿನೇಶ್, ಗಿರಿಜಾಂಬ, ಉಷಾ, ಗಾಯತ್ರಿ ಜಯರಾಮ್, ಮುಖಂಡರಾದ ಟೆಂಟ್ ಶ್ರೀನಿವಾಸ್, ಶ್ರೀನಿವಾಸ್ ಪುಟ್ಟು, ರಾಮಣ್ಣ, ನಾಗರಾಜ್, ಜಯಪ್ರಕಾಶ್, ಮರಿಲಿಂಗಣ್ಣ, ರಾಮಚಂದ್ರ, ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ನಗರಪಾಲಿಕೆ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಇಂಜಿನಿಯರ್ ಕವಿತಾ ಮತ್ತಿತರರಿದ್ದರು.

ಅರಮನೆ ಧ್ವನಿ–ಬೆಳಕು ಟಿಕೆಟ್ ಖರೀದಿ ವೇಳೆ 'ಚಿಲ್ಲರೆ' ಆರೋಪ ; ಅರಮನೆ ಮಂಡಳಿ ಸ್ಪಷ್ಟ ನಿರಾಕರಣೆ

- ಟಿಕೆಟ್‌ನಲ್ಲೇ ಅದನ್ನು ವಿತರಿಸಿದ ವ್ಯಕ್ತಿಯ ಹೆಸರು ಇರುತ್ತದೆ ; ಗಮನಕ್ಕೆ ತಂದಿದ್ದರೆ ಕೂಡಲೇ ಕ್ರಮ ಕೈಗೊಳ್ಳಬಹುದಿತ್ತು
- ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡರೆ ಪ್ರಯೋಜನವಿಲ್ಲ; ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಕಿವಿಮಾತು


ಆರೋಪಿಸಿರುವ ಮಹಿಳೆ


ಮೈಸೂರು ಅರಮನೆಯ ಧ್ವನಿ ಮತ್ತು ಬೆಳಕು ಕಾರ್ಯಕ್ರಮದ ಸಂಗ್ರಹ ಚಿತ್ರ


ಟಿ.ಎಸ್.ಸುಬ್ರಹ್ಮಣ್ಯ

ಮೈಸೂರು, ಜೂ.1(ಪಿಎಂ)– ಮೈಸೂರು ಅರಮನೆಯ ಧ್ವನಿ ಮತ್ತು ಬೆಳಕು ಕಾರ್ಯಕ್ರಮದ ಟಿಕೆಟ್ ಖರೀದಿ ವೇಳೆ ಚಿಲ್ಲರೆ ನೀಡದೇ ವಂಚಿಸಲಾಗುತ್ತಿದೆ ಎಂದು ಮಹಿಳೆಯೊಬ್ಬರು ಆರೋಪಿಸಿರುವ ವೀಡಿಯೊ ಇನ್ಸ್ಟಾಗ್ರಾಮ್‌ನಲ್ಲಿ ಹರಿದಾಡುತ್ತಿದ್ದು, ಈ ಆರೋಪಗಳನ್ನು ಅರಮನೆ ಮಂಡಳಿ ಸಂಪೂರ್ಣವಾಗಿ ನಿರಾಕರಿಸಿದೆ.

ಅರಮನೆ ಎದುರು ನಿಂತು ಸದರಿ ಮಹಿಳೆಯು ಆರೋಪಿಸಿರುವ ವೀಡಿಯೊ ಇತ್ತೀಚೆಗೆ ಅಪ್‌ಲೋಡ್ ಆಗಿದೆ. ಟಿಕೆಟ್ ದರ 120 ರೂ. ಆದರೆ ಎರಡು ಟಿಕೆಟ್‌ಗಳಿಗೆ 500 ರೂ. ನೀಡಿದರೆ, 10 ರೂ. ಚಿಲ್ಲರೆ ಹಿಂದಿರುಗಿಸುವುದೇ ಇಲ್ಲ. ಕೇವಲ ನಗದು ಮಾತ್ರ ಸ್ವೀಕರಿಸುತ್ತಾರೆ. ಯಾವುದೇ ಆನ್‌ಲೈನ್ ಪಾವತಿ ವ್ಯವಸ್ಥೆ ಇಲ್ಲ. ಸಂಜೆ 7 ಗಂಟೆಯ ಕಾರ್ಯಕ್ರಮಕ್ಕೆ 6.30ರಿಂದ ಕೇವಲ ಒಂದೇ ಸಾಲಿನಲ್ಲಿ ಟಿಕೆಟ್ ವಿತರಣೆ ಮಾಡುತ್ತಾರೆ ಎಂದು ದೂರಿದ್ದರು.

ಇದು ತರವೇ...?: ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಚಿಲ್ಲರೆ ಕೊಡದಿದ್ದರೆ, ಅರಮನೆ ಮಂಡಳಿ ಕಚೇರಿಗೆ ದೂರು ನೀಡಬಹುದು. ಜೊತೆಗೆ ಚಿಲ್ಲರೆ ಕೊಡದಿದ್ದರೆ ಪ್ರಶ್ನೆ ಮಾಡಿ ಪಡೆದುಕೊಳ್ಳಬೇಕು. ಅಥವಾ ಅರಮನೆ ಮಂಡಳಿ ಗಮನಕ್ಕಾದರೂ ತರಬಹುದು. ಟಿಕೆಟ್ ಮೇಲೆಯೇ ಕೌಂಟರ್‌ನಲ್ಲಿ ಟಿಕೆಟ್ ಕೊಟ್ಟಿರುವ ಕಂಪ್ಯೂಟರ್ ಆಪರೇಟರ್ ಹೆಸರು ಉಲ್ಲೇಖಿಸುವ ವ್ಯವಸ್ಥೆ ಇದೆ. ಹಾಗಾಗಿ ಇಂತಹ ವ್ಯಕ್ತಿಯೇ ಚಿಲ್ಲರೆ ಕೊಟ್ಟಿಲ್ಲ ಎಂದು ತಿಳಿಸುವುದು ಕಷ್ಟವೇನಲ್ಲ. ಜೊತೆಗೆ ಸಿಸಿಟಿವಿ ಕ್ಯಾಮರಾ ವ್ಯವಸ್ಥೆಯೂ ಇದೆ. ದೂರು ನೀಡಿದರೆ ಕ್ರಮ ಕೈಗೊಳ್ಳಬಹುದು. ಕಚೇರಿಗೆ ದೂರು ನೀಡುವುದು ಬಿಟ್ಟು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡರೆ ಏನು ಪ್ರಯೋಜನ ಎಂದು ಹೇಳಿದರು.

ಅರಮನೆ ಪ್ರವೇಶ ಸಂಬಂಧ ಕೌಂಟರ್‌ನಲ್ಲಿ ಟಿಕೆಟ್ ಖರೀದಿಗೆ ಆನ್‌ಲೈನ್ ಪಾವತಿ ವ್ಯವಸ್ಥೆ ಕಲ್ಪಿಸಲಾಗಿದೆ. ಅದೇ ರೀತಿ ಧ್ವನಿ ಮತ್ತು ಬೆಳಕು ಕಾರ್ಯಕ್ರಮಕ್ಕೂ ಮುಂದಿನ ದಿನಗಳಲ್ಲಿ ಆನ್‌ಲೈನ್ ಪಾವತಿ ವ್ಯವಸ್ಥೆ ಮಾಡಲಾಗುವುದು. ಧ್ವನಿ ಮತ್ತು ಬೆಳಕು ಕಾರ್ಯಕ್ರಮದ ಎಲ್ಲಾ ವ್ಯವಸ್ಥೆಗಳನ್ನು ಉನ್ನತೀಕರಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಅದರೊಂದಿಗೆ ಟಿಕೆಟ್ ಖರೀದಿಗೆ ಆನ್‌ಲೈನ್ ಪಾವತಿ ವ್ಯವಸ್ಥೆ ಒದಗಿಸಲಾಗುವುದು ಎಂದರು.

ವಾಸ್ತವವಾಗಿ ಶನಿವಾರ ಹೊರತುಪಡಿಸಿ ಉಳಿದ ದಿನಗಳಲ್ಲಿ ಈ ಕಾರ್ಯಕ್ರಮ ವೀಕ್ಷಣೆಗೆ ಹೆಚ್ಚಿನ ಜನ ಇರುವುದಿಲ್ಲ. ಶನಿವಾರ ಮಾತ್ರ ಹೆಚ್ಚಿನ ವೀಕ್ಷಕರು ಬರುತ್ತಾರೆ. ಸದರಿ ದಿನದಂದು ಸುಮಾರು 800 ವೀಕ್ಷಕರು ಬರುತ್ತಾರೆ. ಹಾಗಾಗಿ ಅಷ್ಟೂ ವೀಕ್ಷಕರಿಗೆ ಆಸನ ವ್ಯವಸ್ಥೆ ಮಾಡಲಾಗುತ್ತದೆ. ಉಳಿದ ದಿನಗಳಲ್ಲಿ 250ರಿಂದ 300 ಮಂದಿ ಮಾತ್ರ ಇರುತ್ತಾರೆ ಎಂದು ವಿವರಿಸಿದರು.

ಒಂದೇ ಕ್ಯೂ ಇರುತ್ತದೆ. ಸಂಜೆ 7.40 ಆದರೂ ಜನ ಬರುತ್ತಿರುತ್ತಾರೆ ಎಂಬ ಆರೋಪ ಸಂಬಂಧ ಪ್ರತಿಕ್ರಿಯಿಸಿದ ಅವರು, ಶನಿವಾರ ಹೆಚ್ಚು ಜನ ಬರುವ ಹಿನ್ನೆಲೆಯಲ್ಲಿ 2 ಪ್ರದರ್ಶನ ಮಾಡಲಾಗುತ್ತಿದೆ. ಹಾಗಾಗಿ ಎರಡನೇ ಪ್ರದರ್ಶನಕ್ಕೆ ಬರುವವರನ್ನು ಅವರು ನೋಡಿರಬಹುದು. ಅರಮನೆ ವೀಕ್ಷಣೆ ಸಂಜೆ 5.30ಕ್ಕೆ ಮುಕ್ತಾಯಗೊಳ್ಳಲಿದ್ದು, ಜನ ಹೊರಬರುವುದು ಸುಮಾರು 6.15 ಆಗಲಿದೆ. ಹಾಗಾಗಿ 6.30 ರಿಂದಲೇ ಟಿಕೆಟ್ ವಿತರಿಸುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ರಾಜ್ಯಪಾಲರಿಗಾಗಿ ಝೀರೋ ಟ್ರಾಫಿಕ್

ಕಾರಿನಲ್ಲಿ ಸಿಲುಕಿದ್ದ ಗರ್ಭಿಣಿ ಮಹಿಳೆ; ರಸ್ತೆಯಲ್ಲೇ ಪತಿ ಪ್ರತಿಭಟನೆ: ತನಿಖೆಗೆ ಆದೇಶ



ಬೆಂಗಳೂರು: ವಿಐಪಿ ಸಂಚಾರಕ್ಕಾಗಿ ಹೇರಲಾಗಿದ್ದ ಟ್ರಾಫಿಕ್ ನಿರ್ಬಂಧದಿಂದ ತನ್ನ ಗರ್ಭಿಣಿ ಪತ್ನಿ ವಾಹನದಲ್ಲೇ ಸಿಲುಕಿಕೊಂಡಿದ್ದಾಳೆ ಎಂದು ಆರೋಪಿಸಿ ವ್ಯಕ್ತಿಯೊಬ್ಬರು ನಡೆಸಿದ್ದ ಪ್ರತಿಭಟನೆ ವಿಚಾರವಾಗಿ ತನಿಖೆಗೆ ಆದೇಶಿಸಲಾಗಿದೆ.

ಬೆಂಗಳೂರಿನ ಓಲ್ಡ್ ಏರ್‌ಪೋರ್ಟ್ ರಸ್ತೆಯಲ್ಲಿ ಭಾನುವಾರ ನಡೆದ ಈ ಘಟನೆ ಇದೀಗ ವ್ಯಾಪಕ ಸುದ್ದಿಗೆ ಗ್ರಾಸವಾಗಿದ್ದು, ಗರ್ಭಿಣಿ ಮಹಿಳೆಯ ಪತಿ ಧರಣಿ ನಡೆಸಿರುವ ವೀಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬೆನ್ನಲ್ಲೇ, ಈ ಘಟನೆ ಕುರಿತು ಸೋಮವಾರ ತನಿಖೆಗೆ ಆದೇಶಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿ ನಿನ್ನೆ ರಾಜ್ಯಪಾಲರ ಸಂಚಾರದ ಹಿನ್ನೆಲೆಯಲ್ಲಿ ಸುಮಾರು 30 ನಿಮಿಷಗಳ ಕಾಲ ಸಂಚಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಇದರಿಂದಾಗಿ ವ್ಯಾಪಕ ಟ್ರಾಫಿಕ್ ಜಾಮ್ ಸೃಷ್ಟಿಯಾಗಿದ್ದು, ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂಡರ್‌ಪಾಸ್ ಕಾಮಗಾರಿಯಿಂದಾಗಿ ಮೊದಲೇ ಕಿರಿದಾಗಿದ್ದ ರಸ್ತೆಯಲ್ಲಿ ಯಾವುದೇ ಪರ್ಯಾಯ ವ್ಯವಸ್ಥೆ ಮಾಡದೆ ಏಕಾಏಕಿ ರಸ್ತೆ ನಿರ್ಬಂಧಿಸಿದ್ದರಿಂದ ಸಂಚಾರ ವ್ಯವಸ್ಥೆ ಸಂಪೂರ್ಣ ಸ್ಥಗಿತವಾಗಿತ್ತು. ಈ ಸಂಚಾರ ದಟ್ಟಣೆಯ ನಡುವೆ ತನ್ನ ಗರ್ಭಿಣಿ ಪತ್ನಿಯನ್ನು ತುರ್ತಾಗಿ ಕರೆದೊಯ್ಯುತ್ತಿದ್ದ ವ್ಯಕ್ತಿಯೊಬ್ಬರು ಸಿಲುಕಿಕೊಂಡಿದ್ದು, ಗರ್ಭಿಣಿ ಪತ್ನಿಯನ್ನು ಆಸ್ಪತ್ರೆಗೆ ತಲುಪಿಸಲಾಗದೆ ಆ ವ್ಯಕ್ತಿ ನಡುರಸ್ತೆಯಲ್ಲೇ ಕುಳಿತು ಪ್ರತಿಭಟನೆ ನಡೆಸಿದ್ದರು.

ನಮ್ಮ ಪ್ರಾಣಕ್ಕಿಂತ ಝೀರೋ ಟ್ರಾಫಿಕ್ ಮುಖ್ಯಾನಾ ಎಂದು ಪ್ರಶ್ನಿಸಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ಸಾರ್ವಜನಿಕರ ತುರ್ತು ಅಗತ್ಯಗಳಿಗಿಂತ ವಿಐಪಿ ಸಂಚಾರಕ್ಕೆ ಏಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಆತ ಪ್ರಶ್ನಿಸಿದ್ದಾನೆ.

ಪ್ರತಿಭಟನೆಯ ವೇಳೆ ಅವರು ರಸ್ತೆ ಮಧ್ಯದಲ್ಲೇ ನಿಂತು ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದ್ದು, ಸ್ಥಳದಲ್ಲಿದ್ದ ಕೆಲವರು ಅವರ ಆಕ್ರೋಶಕ್ಕೆ ಬೆಂಬಲ ಸೂಚಿಸಿದರು. ಘಟನೆಯು ಇದೀಗ ವೀಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ವಿಐಪಿ ಸಂಚಾರದ ಸಂದರ್ಭದಲ್ಲಿ ಸಾಮಾನ್ಯ ಜನರು ಎದುರಿಸುವ ತೊಂದರೆಗಳ ಬಗ್ಗೆ ಮತ್ತೆ ಚರ್ಚೆಗೆ ಕಾರಣವಾಗಿದೆ.

ಅಣ್ಣಾಮಲೈ ಬಿಜೆಪಿ ತೊರೆಯುವ ಸುಳಿವು

ಎರಡು ದಿನದಲ್ಲಿ ಎಲ್ಲವೂ ಬಟಾಬಯಲಾಗುವ ಸಾಧ್ಯತೆ



ನವದೆಹಲಿ: ಬಿಜೆಪಿ ತೊರೆದು ತಮಿಳುನಾಡಿನಲ್ಲಿ ಹೊಸ ಪಕ್ಷ ಸ್ಥಾಪಿಸುತ್ತಾರೆ ಎಂಬ ಊಹಾಪೋಹಗಳ ನಡುವೆ ಬಿಜೆಪಿ ನಾಯಕ ಅಣ್ಣಾಮಲೈ ಅವರು ದೆಹಲಿ ಪ್ರವಾಸ ಕೈಗೊಂಡಿದ್ದಾರೆ. ಇನ್ನು ಹೊಸ ಪಕ್ಷ ಸ್ಥಾಪನೆ ಊಹಾಪೋಹಗಳನ್ನು ತಳ್ಳಿಹಾಕಲು ನಿರಾಕರಿಸಿದ ಅವರು ದಯವಿಟ್ಟು ಕಾಯಿರಿ. ಎರಡು ದಿನಗಳಲ್ಲಿ ಮಾತನಾಡುತ್ತೇವೆ ಎಂದು ಹೇಳಿದರು.

ಮಾಜಿ ಐಪಿಎಸ್ ಅಧಿಕಾರಿ 2026ರ ವಿಧಾನಸಭಾ ಚುನಾವಣೆಯ ನಂತರ ಹೊಸ ರಾಜಕೀಯ ಮಾರ್ಗವನ್ನು ಪರಿಗಣಿಸುತ್ತಿರಬಹುದು ಎಂಬ ತಮಿಳುನಾಡು ರಾಜಕೀಯ ವಲಯಗಳಲ್ಲಿನ ತೀವ್ರ ಊಹಾಪೋಹಗಳ ನಡುವೆ ಈ ನಿಗೂಢ ಹೇಳಿಕೆ ಬಂದಿದೆ. ಅಣ್ಣಾಮಲೈ ಹುಟ್ಟುಹಬ್ಬದ ಮೊದಲು ಕೊಯಮತ್ತೂರಿನಾದ್ಯಂತ ಅವರ ಬೆಂಬಲಿಗರು ಹಾಕಿರುವ ಬೃಹತ್ ಪೋಸ್ಟರ್‌ಗಳಿಂದ ಈ ಊಹಾಪೋಹಗಳು ಮತ್ತಷ್ಟು ಬಲಗೊಂಡಿವೆ.

'ನಮ್ಮ ನಾಯಕ, ಬನ್ನಿ ಮತ್ತು ನಮ್ಮನ್ನು ಮುನ್ನಡೆಸಿ' ಎಂಬ ಘೋಷಣೆಗಳನ್ನು ಹೊಂದಿರುವ ಪೋಸ್ಟರ್‌ಗಳು ನಗರದ ಪ್ರಮುಖ ಸ್ಥಳಗಳಲ್ಲಿ ಕಾಣಿಸಿಕೊಂಡಿವೆ. ಅಲ್ಲದೆ ಬೆಂಬಲಿಗರು ಇದನ್ನು ಶಕ್ತಿ ಪ್ರದರ್ಶನವೆಂದು ವ್ಯಾಪಕವಾಗಿ ವ್ಯಾಖ್ಯಾನಿಸಿದ್ದಾರೆ. ಕಳೆದ ಕೆಲವು ವರ್ಷಗಳಿಂದ ತಮಿಳುನಾಡಿನಲ್ಲಿ ಬಿಜೆಪಿಯ ಪ್ರಮುಖ ಮುಖಗಳಲ್ಲಿ ಒಬ್ಬರಾದ ಅಣ್ಣಾಮಲೈ, ತಮ್ಮ ಭವಿಷ್ಯದ ಕುರಿತ ವರದಿಗಳ ಬಗ್ಗೆ ಮೌನವಾಗಿದ್ದಾರೆ. ಅವುಗಳನ್ನು ದೃಢೀಕರಿಸುವುದಾಗಲಿ ಅಥವಾ ನಿರಾಕರಿಸುವುದಾಗಲಿ ಮಾಡುತ್ತಿಲ್ಲ. ಅವರ ಇತ್ತೀಚಿನ ಹೇಳಿಕೆಗಳು ಕುತೂಹಲವನ್ನು ಹೆಚ್ಚಿಸಿವೆ. ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ 2020ರಲ್ಲಿ ಬಿಜೆಪಿಗೆ ಸೇರಿದ್ದರು. 2021 ರಿಂದ 2025 ರವರೆಗೆ ತಮಿಳುನಾಡಿನ ಬಿಜೆಪಿ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಈ ವೇಳೆ ರಾಜ್ಯಾದ್ಯಂತ ಆಕ್ರಮಣಕಾರಿ ಪ್ರಚಾರಗಳು ಮತ್ತು ಬಲವಾದ ಸಾಮಾಜಿಕ ಮಾಧ್ಯಮ ಉಪಸ್ಥಿತಿಯ ಮೂಲಕ ರಾಜ್ಯದಲ್ಲಿ ಅದರ ಅತ್ಯಂತ ಪ್ರಮುಖ ನಾಯಕರಲ್ಲಿ ಒಬ್ಬರಾದರು. 2026ರ ವಿಧಾನಸಭಾ ಚುನಾವಣೆಯ ನಂತರ ಅವರ ಮುಂದಿನ ನಡೆಯ ಕುರಿತಾದ ಪ್ರಶ್ನೆಗಳು ವೇಗ ಪಡೆದುಕೊಂಡಿವೆ. ಕೊಯಮತ್ತೂರು ಕ್ಷೇತ್ರದಿಂದ ಸ್ಪರ್ಧಿಸಲು ಅಣ್ಣಾಮಲೈ ಆಸಕ್ತಿ ತೋರಿದ್ದರು. ಆದರೆ ಬಿಜೆಪಿ ಅವರಿಗೆ ಟಿಕೆಟ್ ನೀಡಿರಲಿಲ್ಲ. ಇನ್ನು ಅಣ್ಣಾಮಲೈ ಬಿಜೆಪಿಯನ್ನು ತೊರೆಯುತ್ತಾರೆ ಎಂಬ ವಿಷಯವನ್ನು ಬಿಜೆಪಿ ನಾಯಕರು ತಳ್ಳಿಹಾಕಿದ್ದಾರೆ.

'ಚೋಧ್ಯಾ' ಕಥಾ ಸಂಕಲನಕ್ಕೆ ಪ್ರಸಕ್ತ ಸಾಲಿನ ಡಾ.ವಿಜಯಾದಬ್ಬೆ ಪ್ರಶಸ್ತಿ ಪ್ರದಾನ


'ಚೋದ್ಯಾ' ಕಥಾ ಸಂಕಲನಕ್ಕೆ 2026ನೇ ಸಾಲಿನ 'ಡಾ.ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

ಮೈಸೂರು,ಜೂ.1(ಎಸ್‌ಪಿಎನ್)– ಕಥೆಗಾರ್ತಿ ಅನುಪಮಾ ಪ್ರಸಾದ್ ರಚಿತ 'ಚೋದ್ಯಾ' ಕಥಾ ಸಂಕಲನಕ್ಕೆ 2026ನೇ ಸಾಲಿನ 'ಡಾ.ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿ'ಯನ್ನು ನೀಡಿ, ಗೌರವಿಸಲಾಯಿತು.

> ಡಾ.ವಿಜಯಾದಬ್ಬೆ ಅವರ ಬರವಣಿಗೆಯು ನನ್ನ ಬದುಕು ಮತ್ತು ಬರಹಗಳ ಮೇಲೆ ಪ್ರಭಾವ ಬೀರಿದೆ. ಅವರ 'ಪರಂಪರೆ' ಶೀರ್ಷಿಕೆಯ ಪುಸ್ತಕ ಸದಾ ಎಚ್ಚರಿಸಿದಂತೆ ಭಾಸವಾಗುತ್ತಿದೆ. ಅನುಭವವನ್ನು ಹೊಂದುವ, ಕಥನ ಪ್ರಕ್ರಿಯೆ ರೂಪಿಸುವ ಸಾಮರ್ಥ್ಯವನ್ನು ನನ್ನಲ್ಲಿ ಬೆಳೆಸಿದೆ ಈ ಕಾಲಘಟ್ಟಕ್ಕೆ ನಾವು ಹೆಚ್ಚು ಎಚ್ಚರದಿಂದ ಸಮಾಜವನ್ನು ವಿಮರ್ಶಿಸಬೇಕು, ಅದೇ ರೀತಿ ಬೇರೆಯವರಿಗೂ ಸ್ಪಂದಿಸಬೇಕು.
> - **ಲೇಖಕಿ ಅನುಪಮಾ ಪ್ರಸಾದ್,** ಪ್ರಶಸ್ತಿ ಪುರಸ್ಕೃತರು

ಮೈಸೂರು ಗೋಕುಲಂನ ಅಂತರ ರಾಷ್ಟ್ರೀಯ ಯೂತ್ ವಸತಿ ನಿಲಯದ ಆವರಣದಲ್ಲಿ ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಏರ್ಪಡಿಸಿದ್ದ ಡಾ.ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಮತ್ತು ಕಾವ್ಯ ಮತ್ತು ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಮಾಡುವ ಕಾರ್ಯಕ್ರಮದಲ್ಲಿ ಲೇಖಕಿ ಪ್ರತಿಭಾ ನಂದಕುಮಾರ್ ಸೋಮವಾರ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ವಿಜಯಾದಬ್ಬೆ ಅವರ ಬದುಕು– ಬರಹ ಎರಡೂ ಒಂದೇ ಆಗಿದ್ದವು. ಅವರ ಚಿಂತನೆಗಳು ಸದಾ ಜನಪರ, ಜೀವನ ಪರವಾಗಿದ್ದವು. ಯುವ ಬರಹಗಾರ್ತಿಯರಿಗೆ ಡಾ.ವಿಜಯಾದಬ್ಬೆ ಅವರ ಬದುಕನ್ನು ಅರಿಯುವುದು ಸ್ಫೂರ್ತಿ ಹೊಂದುವ ಮಾರ್ಗವಿದ್ದಂತೆ. ವಿಜಯಾದಬ್ಬೆ ಹೆಸರಿನಲ್ಲಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡಿರುವ ಸಮತಾ ಅಧ್ಯಯನ ಕೇಂದ್ರವು ಉತ್ತಮ ಕೆಲಸ ಮಾಡುತ್ತಿದೆ. ಅಲ್ಲದೆ, ಸಮಾಜ ಪರಿವರ್ತನೆಯ ಹೋರಾಟಗಳನ್ನು ಮುಂದುವರೆಸಿದೆ. ಇದರಿಂದ ಹೊಸ ತಲೆಮಾರು ಸಜ್ಜುಗೊಳಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಿರಿಯ ಕಥೆಗಾರ ಆರ್.ಎಸ್.ಸ್ವಾಮಿ ಪೊನ್ನಾಚಿ ಮಾತನಾಡಿ, ಪ್ರಶಸ್ತಿಗಾಗಿ ಹತ್ತು ಕೃತಿಗಳನ್ನು ಅಧ್ಯಯನ ಮಾಡುವಾಗ ಪುರುಷರು ಹೆಣ್ಣಿನ ಕುರಿತು ಅಬಲೆ, ಶೋಷಿತಳು, ವೇಶ್ಯೆ ಎಂಬಂತೆ ಚಿತ್ರಿಸುತ್ತೇವೆ. ಆದರೆ, ಮಹಿಳೆಯರು ಚಿತ್ರಿಸಿದ ಹೆಣ್ಣಿನ ಪಾತ್ರಗಳಲ್ಲಿ ಹೆಣ್ಣು ಅಬಲೆಯಲ್ಲ. ವೇಶ್ಯೆಯಲ್ಲ ಎಂದು ಹೆಣ್ಣನ್ನು ಕೆಟ್ಟದ್ದಾಗಿ ಬಿಂಬಿಸುವುದಿಲ್ಲ. ಇದೇ ಪುರುಷ ಮತ್ತು ಮಹಿಳಾ ಲೇಖಕರಿಗಿರುವ ವ್ಯತ್ಯಾಸ ಎಂದರು.

50–60 ವರ್ಷಗಳ ಹಿಂದೆ ಮಾಧ್ಯಮಗಳು ಇಲ್ಲದ ಕಾಲಘಟ್ಟದಲ್ಲಿ ಮನುಷ್ಯ ಸಂಬಂಧ, ಅಂತಃಕರಣ ಕನೆಕ್ಟ್ ಆಗುತ್ತಿತ್ತು. ಈಗ ಕ್ಷಣಾರ್ಧದಲ್ಲಿ ಒಂದುಗೂಡುವ ಅವಕಾಶವಿದ್ದರೂ ಮನಸ್ಸು ಛಿದ್ರ ಛಿದ್ರವಾಗಿವೆ. ಮನೆಯ ಒಳಗೆ, ಹೊರಗೆ ಇರಬೇಕಾದ ಧರ್ಮ ಇಂದು ಬೀದಿಗೆ ಬಂದಿದೆ. ನಾವು ತಿನ್ನುವ ಆಹಾರವನ್ನು ಪ್ರಶ್ನಿಸಲಾಗುತ್ತಿದೆ. ಸಮಷ್ಟಿ ನೆಲೆಯಿಂದ ವೈಯಕ್ತಿಕ ನೆಲೆಗೆ ಬಂದಿದ್ದೇವೆ. ಇದು ಅಪಾಯಕಾರಿ ಸನ್ನಿವೇಶ ಎಂದ ಅವರು, ಅನುಪಮಾ ಪ್ರಸಾದ್ ಅವರ ಕಥಾ ಸಂಕಲನದ ಕಥಾವಸ್ತು ಗಟ್ಟಿತನದಿಂದ ಕೂಡಿದೆ ಎಂದರು.

ಬಹುಮಾನ ವಿತರಣೆ: ವಿಜಯಾದಬ್ಬೆ ನೆನಪಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಕವನ ಸ್ಪರ್ಧೆಯಲ್ಲಿ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾದ ದರ್ಶನ್ ಕುಮಾರ್(ಪ್ರಥಮ), ಜ್ಯೋತಿರ್ಲಕ್ಷ್ಮಿ(ದ್ವಿತೀಯ), ಬೆಂಗಳೂರಿನ ಅಚಲ ಬಿ.ಹೆನ್ಲಿ(ತೃತೀಯ) ಹಾಗೂ ಅಥಣಿಯ ಸೀಮಾ ಶಿರಗುಪ್ಪಿ, ಬೆಂಗಳೂರಿನ ವೈ.ಎಸ್.ಸುಪ್ರಿಯಾ (ತೀರ್ಪುಗಾರರ ಮೆಚ್ಚುಗೆ), ಲಲಿತ ಪ್ರಬಂಧ ಸ್ಪರ್ಧೆಯಲ್ಲಿ ಅಚಲ ಬಿ.ಹೆನ್ಲಿ(ಪ್ರಥಮ) ಮತ್ತು ಕುಂದಾಪುರದ ಎಸ್.ರಾಧಿಕಾ (ದ್ವಿತೀಯ) ಸ್ಥಾನ ಪಡೆದಿದ್ದು, ಕೇಂದ್ರದ ಟ್ರಸ್ಟಿ ರಾಮಕೃಷ್ಣ ಜೋಶಿ ವಿಜೇತರಿಗೆ ಬಹುಮಾನ ವಿತರಿಸಿದರು.

2 ದಿನಗಳ ಕಾವ್ಯ ಕಮ್ಮಟದಲ್ಲಿ ಪಾಲ್ಗೊಂಡವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಜ್ಯೋತಿರ್ಲಕ್ಷ್ಮಿ, ಚಂದ್ರ ನಾಯಕ್ ಮಾತನಾಡಿದರು. ಈ ವೇಳೆ ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷೆ ಪ್ರೊ.ಸಬಿಹಾ ಭೂಮಿಗೌಡ, ಟ್ರಸ್ಟಿ ಎಂ.ಎನ್.ಸುಮನಾ ಪಾಲ್ಗೊಂಡಿದ್ದರು.

PM SHRI KENDRIYA VIDYALAYA CHAMARAJANAGAR
Madapura Post, Chamarajanagar - 571313 (Karnataka)
E-mail: kvchamarajanagaramedia@gmail.com Tele. No.: 08226-297179

WALK-IN-INTERVIEW

Walk-In-Interviews for the following contractual/part time posts will be conducted on 15-06-2026

S.No,	Name of the post
1	PRT(Special Educator)
2	Balavatika Teacher
3	Atal Lab Instructor

Note: Reporting Time : 09:00 AM

1. Eligible candidates may attend interview with complete Bio-Data, Original documents and one set of self-attested qualification certificates.
2. For further information regarding eligibility, remuneration,Bio-Data form etc log on to Vidyalaya website https://chamrajnagar.kvs.ac.in
3. The posts are purely contractual and other terms & conditions applicable as per KVS rules.
4. No TA/ DA will be admissible for interview.

Sd/-
Principal

Reg No. MYE/4/00483/2022-23 Mob: 98450 28635
ಕ್ಯಾತಮಾರನಹಳ್ಳಿ ಶ್ರೀ ಹುಲಿಯಮ್ಮ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ (ರಿ.)
1627, ದೇವಸ್ಥಾನದ ಆವರಣ, ಕ್ಯಾತಮಾರನಹಳ್ಳಿ (ಕೆ.ಎನ್.ಪುರ), ಮೈಸೂರು 570 019
E-mail: srihuliyammatrust@gmail.com

ಸಾರ್ವಜನಿಕ ಪ್ರಕಟಣೆ

ವಿ.ಶೇಷಗಿರಿ (ಆರ್.ಟಿ.ಐ ಕಾರ್ಯಕರ್ತ) ಮತ್ತು ಇತರರು ಕ್ಯಾತಮಾರನಹಳ್ಳಿ ಶ್ರೀ.ಹುಲಿಯಮ್ಮ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ (ರಿ) ನ ನೋದಣಿಯನ್ನು ರದ್ದು ಪಡಿಸಲು ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ರವರಿಗೆ ಮನವಿ ಸಲ್ಲಿಸಿದ್ದು, ಸದರಿ ಮನವಿ ಪತ್ರದ ಮೇರೆಗೆ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ರವರು ಪತ್ರ ಸಂಖ್ಯೆ. ಡಿ.ವಿ ಎಸ್(2)ಸಿ.ಆರ್:169/2025–2026 ರಂತೆ ದಿನಾಂಕ: 06–04–2026 ರಂದು ಮಾನ್ಯ ತಹಶೀಲ್ದಾರ್ ಮೈಸೂರು ರವರಿಗೆ ನಿರ್ದೇಶನ ನೀಡಿದ್ದು, ಸದರಿ ನಿರ್ದೇಶನದಂತೆ ಮಾನ್ಯ ತಹಶೀಲ್ದಾರ್ ಮೈಸೂರು ರವರು ದಿನಾಂಕ: 12–05–2026 ರಂದು ಉಪನೋಂದಣಾಧಿಕಾರಿಗಳು ಮೈಸೂರು ಪೂರ್ವ ರವರಿಗೆ ಕ್ಯಾತಮಾರನಹಳ್ಳಿ ಶ್ರೀ.ಹುಲಿಯಮ್ಮ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ (ರಿ) ರ ನೋಂದಣಿಯನ್ನು ರದ್ದು ಪಡಿಸಲು ನಿರ್ದೇಶನ ನೀಡಿರುತ್ತಾರೆ. ಸದರಿ ನಿರ್ದೇಶನಕ್ಕೆ ಕಾರ್ಯದರ್ಶಿಗಳು ಕ್ಯಾತಮಾರನಹಳ್ಳಿ ಶ್ರೀ.ಹುಲಿಯಮ್ಮ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ (ರಿ) ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಪ್ರಕರಣದ ಸಂಖ್ಯೆ.ಡಬ್ಲೂ.ಪಿ 16007/2026 ರಂತೆ ಪ್ರಕರಣ ದಾಖಲಿಸಿದ್ದು, ದಿನಾಂಕ: 26–05–2026 ರಂದು ಸದರಿ ಪ್ರಕರಣದಲ್ಲಿ ಮಾನ್ಯ ತಹಶೀಲ್ದಾರ್ ರವರು ದಿನಾಂಕ : 12–05–2026 ರಂದು ನೀಡಿರುವ ನಿರ್ದೇಶನಕ್ಕೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಆಗಿರುತ್ತದೆ. ಈ ಸಂಬಂಧ ಕ್ಯಾತಮಾರನಹಳ್ಳಿ ಶ್ರೀ.ಹುಲಿಯಮ್ಮ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ (ರಿ) ವತಿಯಿಂದ ಸಾರ್ವಜನಿಕರಿಗೆ ಮಾಹಿತಿಯನ್ನು ತಿಳಿಸಲಾಗಿದೆ.

ಸಹಿ/– ಕಾರ್ಯದರ್ಶಿ
ಕ್ಯಾತಮಾರನಹಳ್ಳಿ
ಶ್ರೀ ಹುಲಿಯಮ್ಮ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ (ರಿ)

ದಿನಾಂಕ: 01–06–2026
ಸ್ಥಳ: ಮೈಸೂರು

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮೈಸೂರು ವಿಭಾಗ,
ಅರಣ್ಯ ಭವನ ಆಶೋಕಪುರಂ ಮೈಸೂರು
Ph: 0821-2483853 Email: dcfmdm@gmail.com
ಸಂ:ಬಿ1/ಬಿಯುಡಿ/ಟೆಂಡರ್/ಸಿಆರ್–10/2026–27 ದಿ:06.05.2026

(ಇ–ಪ್ರೊಕ್ಯೂಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಅರಣ್ಯ ಇಲಾಖೆಯ ಮೈಸೂರು ವೃತ್ತದ ವಿಭಾಗಗಳಿಗೆ 2026–27ನೇ ಸಾಲಿನ 31ನೇ ಮಾರ್ಚ್ 2027 ರವರೆಗೆ ವಿವಿಧ ಅಳತೆಯ ಎಲ್.ಡಿ.ಪಿ.ಇ ಕಪ್ಪು ಪಾಲಿಥೀನ್ ಹಾಳೆಗಳ ಸರಬರಾಜು ಮಾಡಲು ಇಚ್ಛೆ ಹೊಂದಿದ ಅಂಗೀಕೃತ ಉತ್ಪಾದಕರ/ಸರಬರಾಜುದಾರರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಉದ್ದೇಶಿಸಿರುವುದರಿಂದ, ಆಸಕ್ತ ಎಲ್.ಡಿ.ಪಿ.ಇ ಕಪ್ಪು ಪಾಲಿಥೀನ್ ಹಾಳೆಗಳ ಸರಬರಾಜುದಾರ/ ಅಂಗೀಕೃತ ಉತ್ಪಾದಕ ಉದ್ದಿಮೆ ಘಟಕಗಳ ಗಮನವನ್ನು ಸೆಳೆಯುತ್ತಾ, ಟೆಂಡರ್ ಪ್ರಕಟಣೆ ಹೊರಡಿಸಿದೆ. ಈ ಪ್ರಕಟಣೆಯಲ್ಲಿ ಮುಂದೆ ವಿಧಿಸಲಾಗುವ ಎಲ್ಲಾ ಷರತ್ತುಗಳನ್ನು ಕರ್ನಾಟಕ ಸಾರ್ವಜನಿಕ ಸರಬರಾಜು ಸಂಗ್ರಹಣೆಗಳಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಅಧಿನಿಯಮ ಮತ್ತು ನಿಯಮಗಳ ಪ್ರಕಾರ ಅರ್ಥೈಸಿ ಕೊಳ್ಳತಕ್ಕದ್ದು, ಅರ್ಜಿದಾರರು ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ https://kppp.karnataka.gov.in ಯಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ತುಂಬಿದ ಟೆಂಡರ್ ಸವಾಲುಗಳನ್ನು ಅಪ್ ಲೋಡ್ ಮಾಡಲು ದಿ: 09.06.2026 ರಂದು ಸಂಜೆ 4.00 ಗಂಟೆ ತನಕ ಅವಕಾಶವಿರುತ್ತದೆ. ತಾಂತ್ರಿಕ ಸವಾಲುಗಳನ್ನು ದಿ: 11.06.2026 ರಂದು ಸಂಜೆ 4.00 ಗಂಟೆಗೆ ಈ ಕಛೇರಿಯಲ್ಲಿ ತೆರೆಯಲಾಗುವುದು/ಡೌನ್ ಲೋಡ್ ಮಾಡಲಾಗುವುದು. ತಾಂತ್ರಿಕ ಪರಿಶೀಲನೆಯ ಹಂತದಲ್ಲಿ, ಅರ್ಹರಾದ ಸವಾಲುದಾರರ ಆರ್ಥಿಕ ಸವಾಲುಗಳನ್ನು ದಿ: 12.06.2026 ರಂದು ಸಂಜೆ 4.30 ಗಂಟೆಗೆ ಈ ಕಛೇರಿಯಲ್ಲಿ ತೆರೆಯಲಾಗುವುದು/ಡೌನ್ ಲೋಡ್ ಮಾಡಲಾಗುವುದು. ಸದರಿ ದಿನಾಂಕದಂದು ಟೆಂಡರ್ ಬಾರದ ಕಾಮಗಾರಿಗಳಿಗೆ ಇದೇ ಟೆಂಡರ್ ಪ್ರಕಟಣೆ ಷರತ್ತಿಗೆ ಒಳಪಟ್ಟು ಮರು ಟೆಂಡರ್ ದಿ: 16.06.2026 ರ ಸಂಜೆ 4.00 ಗಂಟೆ ವರೆಗೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ, ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿ:17.06.2026 ಹಾಗೂ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿ:18.06.2026. ಒಂದು ವೇಳೆ ಮೇಲೆ ನಮೂದಿಸಿರುವ ದಿನಾಂಕಗಳು ಸಾರ್ವತ್ರಿಕ ರಜೆಗಳೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನವು ಟೆಂಡರ್ ಸಲ್ಲಿಸುವ ಸುವ ಅಥವಾ ತರೆಯುವ ಪ್ರಕ್ರಿಯೆ ನಡೆಸುವ ದಿನವಾಗಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ. ಟೆಂಡರ್ ಪ್ರಕ್ರಿಯೆ ಮತ್ತು ಷರತ್ತುಗಳ ಕುತ್ತಿರಾದ ಮಾಹಿತಿ/ಸ್ಪಷ್ಟಿಕರಣ ಅಥವಾ ಷರತ್ತುಗಳ ಬದಲಾವಣೆಯ ಬಗ್ಗೆ ಸವಾಲುದಾರರಿಗೆ ಮಾಹಿತಿ ನೀಡುವ ಸಲುವಾಗಿ ಟೆಂಡರ್ ಪೂರ್ವ ಸಭೆಯನ್ನು ದಿ:04.06.2026 ರಂದು ಬೆಳಿಗ್ಗೆ: 11.00 ಗಂಟೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮೈಸೂರು ವಿಭಾಗ, ಕಛೇರಿ ಮೈಸೂರು ಇಲ್ಲಿ ನಿಗಧಿಪಡಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮೈಸೂರು ವಿಭಾಗ, ಮೈಸೂರು
DIPR/DDMYS/245/KSMCA/179/2026-27